ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 22 ಗುರುವಾರ 2022

ಸಂಪುಟ: 43 | ಸಂಚಿಕೆ: 157 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯಪಾಲರು, ಮುಖ್ಯಮಂತ್ರಿ, ಸಭಾಧ್ಯಕ್ಷರಿಗೆ ದಸರೆಗೆ ಆಹ್ವಾನ

ಮೈಸೂರು,ಸೆ.21(ಆರ್‌ಕೆ)–ಸೆಪ್ಟೆಂಬರ್ 26ರಿಂದ ಆರಂಭವಾಗುವ ಮೈಸೂರು ದಸರಾ ಮಹೋತ್ಸವಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ ಸೇರಿದಂತೆ ಗಣ್ಯಾತಿ ಗಣ್ಯರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬುಧವಾರ ಬೆಂಗಳೂರಿನಲ್ಲಿ ಆಹ್ವಾನಿಸಿದರು. ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್‌ರೊಂದಿಗೆ ರಾಜಭವನಕ್ಕೆ ತೆರಳಿದ ಸಚಿವರು, ರಾಜ್ಯಪಾಲರನ್ನು ಭೇಟಿ ಮಾಡಿ 2022ರ ನಾಡಹಬ್ಬದಲ್ಲಿ ಪಾಲ್ಗೊಳ್ಳುವಂತೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಆಹ್ವಾನಿಸಿದರು. ನಂತರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ದಸರಾ ಉದ್ಘಾಟನೆ ಹಾಗೂ ವಿಜಯದಶಮಿ ಮೆರವಣಿಗೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಆತ್ಮೀಯವಾಗಿ ಆಹ್ವಾನಿಸಿದರು.

ಆಹ್ವಾನ ಪತ್ರಿಕೆ ಸ್ವೀಕರಿಸಿದ ಮುಖ್ಯಮಂತ್ರಿಗಳು, ನಾಡಹಬ್ಬದಲ್ಲಿ ರಾಷ್ಟ್ರಪತಿಗಳೊಂದಿಗೆ ಭಾಗವಹಿಸಲು ಸಂತೋಷವಾಗುತ್ತಿದ್ದು, ಮಹೋತ್ಸವ ಯಶಸ್ವಿಯಾಗಲೆಂದು ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಶುಭ ಕೋರಿದರು. ಅದೇ ವೇಳೆ ವಿಧಾನಸೌಧದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಅವರಿಗೂ ಆಹ್ವಾನ ನೀಡಿದ ಸಚಿವರು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಅವರಿಗೂ ಫಲತಾಂಬೂಲ ನೀಡಿ ದಸರೆಗೆ ಆಹ್ವಾನ ನೀಡಿದರು. ದಸರಾ ಸ್ವಾಗತ ಉಪಸಮಿತಿ ಕಾರ್ಯಾಧ್ಯಕ್ಷೆ ಎಂ.ಜೆ.ರೂಪಾ, ಕಾರ್ಯದರ್ಶಿ ಕೆ.ಕುಬೇರಪ್ಪ, ಸಚಿವರ ಆಪ್ತ ಕಾರ್ಯದರ್ಶಿ ಶ್ರೀನಿವಾಸಗೌಡ, ವಿಶೇಷ ಕರ್ತವ್ಯಾಧಿಕಾರಿ ದೊಡ್ಡನಾಗಯ್ಯ, ರೇವಣ್ಣ ಹಾಗೂ ಇತರರು ಈ ಸಂದರ್ಭ ಸಚಿವರೊಂದಿಗೆ ಉಪಸ್ಥಿತರಿದ್ದರು.




ಮೈಸೂರು ದಸರಾಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಮೈಸೂರು ಜಿಲ್ಲಾಡಳಿತದ ವತಿಯಿಂದ ಆಹ್ವಾನಿಸಲಾಯಿತು. ಸಚಿವ ಗೋವಿಂದ ಕಾರಜೋಳ, ಶಾಸಕರಾದ ಎಲ್.ನಾಗೇಂದ್ರ, ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ದಸರಾ ಸ್ವಾಗತ ಉಪಸಮಿತಿ ಕಾರ್ಯಾಧ್ಯಕ್ಷೆ ಎಂ.ಜೆ.ರೂಪಾ ಉಪಸ್ಥಿತರಿದ್ದಾರೆ.

ನಾಳೆ ರಾಷ್ಟ್ರಪತಿಗಳಿಗೆ ಆಹ್ವಾನ

ನಾಳೆ(ಸೆ.22) ನವದೆಹಲಿಗೆ ತೆರಳಲಿರುವ ಜಿಲ್ಲಾ ಉಸ್ತುವಾರಿ ಸಚಿವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ದಸರಾ ಉದ್ಘಾಟನೆಗೆ ಆಹ್ವಾನಿಸುವರು. ನಂತರ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ ಅವರನ್ನು ದಸರಾ ಮಹೋತ್ಸವಕ್ಕೆ ಆಹ್ವಾನಿಸುವರು. ಸೆ.26ರಂದು ನಾಡದೇವತೆ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ ನಾಡಹಬ್ಬ ಮೈಸೂರು ದಸರಾ ಆರಂಭವಾಗಲಿದೆ. ಅಂದು ಬೆಳಗ್ಗೆ 9.45ರಿಂದ 10.05ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಿಯಲ್ಲಿ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದೆ.

ಪೇ ಸಿಎಂ ಪೋಸ್ಟರ್

ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಕ್ಯೂ ಆರ್ ಕೋಡ್ ಸಹಿತ ಕಾಂಗ್ರೆಸ್ ಅಭಿಯಾನ

- ಶಕ್ತಿ ಕೇಂದ್ರ ವಿಧಾನಸೌಧ, ಸಿಎಂ ಬಸವರಾಜ ಬೊಮ್ಮಾಯಿ ನಿವಾಸದ ಆಜುಬಾಜಲ್ಲಿ ರಾರಾಜಿಸುತ್ತಿವೆ ಪೋಸ್ಟರ್‌ಗಳು
- ಸರ್ಕಾರಕ್ಕೆ ತೀವ್ರ ಮುಜುಗರ; ಕ್ರುದ್ಧರಾಗಿರುವ ಸಿಎಂ
- ವಿಪಕ್ಷ ನಾಯಕ ಸಿದ್ದರಾಮಯ್ಯ ಕಾಲದ ಭ್ರಷ್ಟಾಚಾರ ಬಯಲಿಗೆ ಮಾಸ್ಟರ್ ಪ್ಲಾನ್

ಬೆಂಗಳೂರು, ಸೆ.21(ಕೆಎಂಶಿ)–ಬಿಜೆಪಿ ಸರ್ಕಾರದಲ್ಲಿನ 40 ಪರ್ಸೆಂಟ್ ಕಮಿಷನ್ ಹಣವನ್ನು ಪೆಟಿಎಂ ಬದಲು ಪೇಸಿಎಂ ಆ್ಯಪ್‌ಗೆ ಪಾವತಿಸಿ ಎಂಬ ಪೋಸ್ಟರ್‌ಗಳನ್ನು ವಿಧಾನಸೌಧದ ಹೃದಯ ಭಾಗದ ಸುತ್ತಲೂ ಅಂಟಿಸುವ ಮೂಲಕ ಸರ್ಕಾರದ ವಿರುದ್ಧ ದೊಡ್ಡ ಸಮರ ಸಾರಿದೆ.

ಪೇಸಿಎಂಗೆ ಹಣ ಪಾವತಿಸಿದರೆ ಮುಖ್ಯಮಂತ್ರಿ ಮತ್ತು ಅವರ ಸಂಪುಟ ಸಹೋದ್ಯೋಗಿಗಳಿಗೆ ತಲುಪುತ್ತದೆ. ಈ ಆ್ಯಪ್‌ಗೆ ಹೋಗಿ ಎಂದು ಪೋಸ್ಟರ್‌ಗಳಲ್ಲಿ ಮಾಹಿತಿ ನೀಡಿದೆ. ಇಂತಹ ಪೋಸ್ಟರ್‌ಗಳನ್ನು ಮುಖ್ಯಮಂತ್ರಿಯವರ ಆರ್‌ಟಿ ನಗರದ ಖಾಸಗಿ ನಿವಾಸ, ರೇಸ್‌ಕೋರ್ಸ್‌ನ ಸರ್ಕಾರಿ ನಿವಾಸದ ಸುತ್ತಮುತ್ತಲೂ ಅಂಟಿಸಲಾಗಿದೆ. ಅಷ್ಟೇ ಅಲ್ಲ ಸಚಿವರುಗಳ ನಿವಾಸ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸರ್ಕಾರಿ ನಿವಾಸದ ಬಳಿ ಸೇರಿದಂತೆ ನಗರದ ಹೃದಯ ಭಾಗದ ಪ್ರಮುಖ ಗೋಡೆಗಳಲ್ಲಿ ಈ ಭಿತ್ತಿಪತ್ರಗಳು ರಾರಾಜಿಸುತ್ತಿವೆ. ತಮ್ಮ ಮನೆ ಬಳಿ ಇಂತಹ ಭಿತ್ತಿಪತ್ರ ಕಂಡ ಬೊಮ್ಮಾಯಿ ಅವರು ಇರಿಸು–ಮುರಿಸುಗೊಂಡು ತಕ್ಷಣವೇ ಇವುಗಳನ್ನು ತೆಗೆಯುವಂತೆ ಸೂಚಿಸಿದ್ದಲ್ಲದೆ, ಪ್ರಸಕ್ತ ಸದನದಲ್ಲೇ ಕಾಂಗ್ರೆಸ್ ಆಡಳಿತದ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ▶ 7ನೇ ಪುಟಕ್ಕೆ



ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡೋಣ ಬನ್ನಿ: ಸಿದ್ದರಾಮಯ್ಯಗೆ ಸಿಎಂ ಸವಾಲು

ಬೆಂಗಳೂರು: ಭ್ರಷ್ಟಾಚಾರದ ಕುರಿತು ವಿಧಾನ ಮಂಡಲದಲ್ಲಿ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದ್ದು, ಚರ್ಚೆಯಿಂದ ಪಲಾಯನ ಮಾಡುವುದಿಲ್ಲ. ನೀವೂ ಸಿದ್ಧರಾಗಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

ಶೇ.40 ಲಂಚಕ್ಕೆ ಸಂಬಂಧಿಸಿದಂತೆ ನಿಲುವಳಿ ಸೂಚನೆಯಡಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಸಿದ್ದರಾಮಯ್ಯ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿದ ಬೊಮ್ಮಾಯಿ, ಭ್ರಷ್ಟಾಚಾರ ಇವತ್ತು ನಿನ್ನೆಯ ಪ್ರಶ್ನೆ ಅಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೂಪದಲ್ಲಿ ಬಂದಿದೆ. ಚರ್ಚೆಗೆ ನೀವೂ ಸಿದ್ಧರಿರಬೇಕು. ಸರ್ಕಾರವೂ ಇದಕ್ಕೆ ತಯಾರಿದೆ ಎಂದು ಹೇಳಿದರು.

ನನ್ನ, ರಾಜ್ಯದ ಹೆಸರು ಕೆಡಿಸಲು ಷಡ್ಯಂತ್ರ

ಬೆಂಗಳೂರು, ಸೆ.21–ಕಾಂಗ್ರೆಸ್ ಪೇ ಸಿಎಂ ಅಭಿಯಾನ ನನ್ನ ಮತ್ತು ರಾಜ್ಯದ ಹೆಸರು ಕೆಡಿಸಲು ನಡೆಸಿರುವ ಷಡ್ಯಂತ್ರ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರತಿಪಕ್ಷ ಕಾಂಗ್ರೆಸ್ ಪೇ ಸಿಎಂ ಅಭಿಯಾನ ಕೈಗೊಂಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಬೊಮ್ಮಾಯಿ ಅವರು, ಇದು ವ್ಯವಸ್ಥಿತವಾಗಿ ಕರ್ನಾಟಕ ರಾಜ್ಯ ಮತ್ತು ನನ್ನ ಹೆಸರು ಕೆಡಿಸಲು ನಡೆಸಿರುವ ಷಡ್ಯಂತ್ರ ಎಂದಿದ್ದಾರೆ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಕರಣ ದಾಖಲು ಮಾಡಲು ಸೂಚಿಸಿದ್ದೇನೆ. ಆಧಾರರಹಿತವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಮಾಡಲು ಎಲ್ಲರಿಗೂ ಬರುತ್ತದೆ. ಆದರೆ ಇದು ಸುಳ್ಳು ಎಂದು ಜನಕ್ಕೆ ತಿಳಿಯುತ್ತದೆ. ಇದಕ್ಕೆ ಯಾವ ಬೆಲೆಯೂ ಇಲ್ಲ. ಆದರೆ ರಾಜ್ಯದ ಹೆಸರು ಕೆಡಿಸುವ ಪ್ರಯತ್ನಕ್ಕೆ ಕಡಿವಾಣ ಹಾಕುವ ಪ್ರಯತ್ನ ನಮ್ಮದು ಎಂದರು.

ಪೋಸ್ಟರ್ ಹಾಕಿದವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮುಖವನ್ನು ಹೊಂದಿರುವ ಪೇಸಿಎಂ ಪೋಸ್ಟರ್‌ಗಳನ್ನು ನಗರದ ಹಲವು ಕಡೆ ಅಂಟಿಸಲಾಗಿದ್ದು, ಇದರಿಂದ ಸಿಎಂ ಬೊಮ್ಮಾಯಿ ತೀವ್ರ ಆಕ್ರೋಶಗೊಂಡಿದ್ದು, ಇದರ ಹಿಂದೆ ಇರುವವರ ವಿರುದ್ಧ ಕೇಸ್ ದಾಖಲಿಸುವಂತೆ ಪೊಲೀಸರಿಗೆ ಸೂಚಿಸಲಾಗಿದೆ. ಪೇಸಿಎಂ ಪೋಸ್ಟರ್ ಅಂಟಿಸಿ ಅನಾಹುತ ಸೃಷ್ಟಿಸಿದವರ ಪತ್ತೆಗೆ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಕೇಂದ್ರ ವಿಭಾಗದ ಪೊಲೀಸರು ಈಗಾಗಲೇ ▶ 7ನೇ ಪುಟಕ್ಕೆ

ಕಾಂಗ್ರೆಸ್ ಗಂಜಿ ಗಿರಾಕಿಗಳಿಂದ ದೂರವಿರಿ

ಬಿಜೆಪಿಯಿಂದ ರಿಡೂ ಸಿದ್ದರಾಮಯ್ಯ, ಇಡಿ ಡಿಕೆಶಿ ಅಭಿಯಾನ

ಬೆಂಗಳೂರು: ಕಾಂಗ್ರೆಸ್‌ನ PAY CM ಅಭಿಯಾನಕ್ಕೆ ಬಿಜೆಪಿ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಫೋಟೋ ಹಾಕಿ ತಿರುಗೇಟು ನೀಡಲು ಮುಂದಾಗಿದೆ. ಸ್ಕ್ಯಾನ್ ಕೋಡ್ ಮೇಲೆ ಸಿದ್ದರಾಮಯ್ಯ, ಡಿಕೆಶಿ ಚಿತ್ರ ಹಾಕಿ, ರಾಜ್ಯ ಲೂಟಿ ಮಾಡಿದ ಈ ಭ್ರಷ್ಟ ಜೋಡಿಯನ್ನು ರಾಜ್ಯದಿಂದ ಕಿತ್ತೆಸೆಯಲು ಇದನ್ನು ಸ್ಕ್ಯಾನ್ ಮಾಡಿ ಎಂದು ಟಾಂಗ್ ನೀಡಿದೆ. ಸಮಾಜವಾದಿ ಮುಖವಾಡ ಧರಿಸಿ ರಾಜ್ಯವನ್ನು ಲೂಟಿ ಮಾಡಿರುವ ಕಾಂಗ್ರೆಸ್ ಗಂಜಿ ಗಿರಾಕಿಗಳಿಂದ ದೂರವಿರಿ ಎಂದು ಅಭಿಯಾನ ಮಾಡಲು ಸಿದ್ಧತೆ ನಡೆಸಿದೆ. ಹಿರಿಯ ನಾಯಕರ ಗಮನಕ್ಕೆ ತಂದು ಅಭಿಯಾನ ನಡೆಸಲು ಮುಂದಾಗಿದೆ. ಬೇಕಾಗಿದ್ದಾರೆ ಹೆಸರಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಫೋಟೋ ಪ್ರಕಟಿಸಿದೆ. ನಿಮ್ಮ ಹತ್ತಿರ ಇವರನ್ನು ಸುಳಿದಾಡಲು ಬಿಡಬೇಡಿ. ರಿಡೂ ಸಿದ್ದರಾಮಯ್ಯ, ಇಡಿ ಡಿಕೆಶಿ ಅಂತ ಕಾಲೆಳೆದು ಪೋಸ್ಟರ್ ರಚಿಸಿದೆ. ಕಾಂಗ್ರೆಸ್ ಪೋಸ್ಟರ್‌ಗೆ ಪ್ರತಿಯಾಗಿ ಬಿಜೆಪಿ ಕೌಂಟರ್ ಕೊಟ್ಟರೂ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಫೋಟೋ ಇರುವ ಸ್ಕ್ಯಾನ್ ರೀಡ್ ಆಗುತ್ತಿಲ್ಲ.

ಕಾಡಾನೆಗಳಿಂದ ಬೆಳೆ ಹಾನಿಗೆ ಪರಿಹಾರ ದುಪ್ಪಟ್ಟು

ಬೆಂಗಳೂರು, ಸೆ.21– ಆನೆ ದಾಳಿಯಿಂದ ಬೆಳೆ ಹಾನಿಯಾದರೆ ಅದಕ್ಕೆ ನೀಡುವ ಪರಿಹಾರವನ್ನು ದುಪ್ಪಟ್ಟು ಮಾಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದರು. ವಿಧಾನಸಭೆಯಲ್ಲಿ ನಿಯಮ 69 ಅಡಿಯಲ್ಲಿ ಹಾಸನ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ವಿಚಾರವಾಗಿ ನಡೆದ ಚರ್ಚೆಯ ಸಂದರ್ಭದಲ್ಲಿ ಸಿಎಂ ಘೋಷಣೆ ಮಾಡಿದರು. ಕಾಡಾನೆ ಹಾವಳಿ ಬಗ್ಗೆ ಮಾತನಾಡಿದ ಸಕಲೇಶಪುರ ಶಾಸಕ ಎಚ್.ಕೆ. ಕುಮಾರಸ್ವಾಮಿ, ಆನೆ ದಾಳಿಯಿಂದ ಸತ್ತವರಿಗೆ 25 ಸಾವಿರ ಪರಿಹಾರ ಕೊಡಿ ಅಥವಾ ಸರ್ಕಾರಿ ▶ 7ನೇ ಪುಟಕ್ಕೆ

ಸಿಇಟಿ ರ್ಯಾಂಕಿಂಗ್ ಬಿಕ್ಕಟ್ಟು ನಿವಾರಣೆಗೆ ಐವರ ಸಮಿತಿ ರಚನೆ

ಬೆಂಗಳೂರು,ಸೆ.21(ಕೆಎಂಶಿ)–ಸಿಇಟಿ ರ್ಯಾಂಕಿಂಗಿಗೆ ಸಂಬಂಧಿಸಿದಂತೆ ಉಂಟಾಗಿರುವ ಬಿಕ್ಕಟ್ಟನ್ನು ಹೈಕೋರ್ಟ್ ನಿರ್ದೇಶನದಂತೆ ಬಗೆ ಹರಿಸಲು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ. ತಿಮ್ಮೇಗೌಡ ಅಧ್ಯಕ್ಷತೆಯಲ್ಲಿ ಐವರ ಸಮಿತಿ ರಚಿಸಲಾಗಿದೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥನಾರಾಯಣ, ಸಮಿತಿಯಲ್ಲಿ ಅನಂತಪುರದ ಕೇಂದ್ರೀಯ ವಿವಿ ಉಪಕುಲಪತಿ ಎಸ್.ಎ.ಕೋರಿ, ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎನ್.ರವಿಚಂದ್ರನ್, ಐಐಎಸ್ಸಿ ನಿವೃತ್ತ ಡೀನ್ ಪ್ರೊ. ಎಂ.ಆರ್. ಎನ್.ಮೂರ್ತಿ ಮತ್ತು ಬಯೋ ಇನ್ಫರ್ಮ್ಯಾಟಿಕ್ಸ್ ಅಂಡ್ ಅಪ್ಲೈಡ್ ಬಯೋ ಟೆಕ್ನಾಲಜಿ ಪ್ರೊಫೆಸರ್ ಎಮಿರೈಟಸ್ ಪ್ರೊ. ಯತೀಂದ್ರ ಇದ್ದಾರೆ ಎಂದು ತಿಳಿಸಿದ್ದಾರೆ.



ಬಿಡಿಎ ಅವ್ಯವಹಾರದಲ್ಲಿ ನನ್ನ ಪಾತ್ರವಿಲ್ಲ

ಬೆಂಗಳೂರು,ಸೆ.21(ಕೆಎಂಶಿ)–ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ರಾಮಲಿಂಗ ಕನ್‌ಸ್ಟ್ರಕ್ಷನ್ ಕಂಪನಿಗೆ ಗುತ್ತಿಗೆ ನೀಡುವ ವಿಚಾರದಲ್ಲಿ ನನ್ನ ಪಾತ್ರವಿಲ್ಲ ಎಂದಿರುವ ಸಹಕಾರಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಬೇಲ್ ಪಡೆಯುವ ಅಗತ್ಯವಿಲ್ಲ ಎಂದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅವರ ಪುತ್ರ ವಿಜಯೇಂದ್ರ, ಸಚಿವ ಸೋಮಶೇಖರ್ ಸೇರಿದಂತೆ ಆರು ಮಂದಿಯ ▶ 7ನೇ ಪುಟಕ್ಕೆ



ಮಾರಾಟವಾಗಿದ್ದ ಮಗು ರಕ್ಷಣೆ; ಓರ್ವನ ಬಂಧನ

ಚಾಮರಾಜನಗರ, ಸೆ.21–ಹಣಕ್ಕಾಗಿ ತಂದೆಯೇ ಮಾರಾಟ ಮಾಡಿದ್ದ 25 ದಿನದ ಗಂಡು ಮಗುವನ್ನು ರಕ್ಷಿಸುವಲ್ಲಿ ಪೊಲೀಸರು ಹಾಗೂ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಯಶಸ್ವಿಯಾಗಿದ್ದು, ಪ್ರಕರಣ ಸಂಬಂಧ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಖಾಸಿಫ್ ಬಂಧಿತ ವ್ಯಕ್ತಿಯಾಗಿದ್ದು, ಮಗುವನ್ನು ಮಾರಿದ್ದ ತಂದೆ ಬಸವ ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲೇ ಆತನೂ ಕೆಲಸ ಮಾಡುತ್ತಿದ್ದ. ಈತನ ಮೂಲಕವೇ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಬಡದಂಪತಿಗೆ 25 ದಿನಗಳ ಮಗುವನ್ನು ಬಸವ ಮಾರಾಟ ಮಾಡಿದ್ದರು.

ಮಗು ಮಾರಾಟದ ವಿಷಯ ತಿಳಿಯುತ್ತಿದ್ದಂತೆ ಮಂಗಳವಾರ ಮಗುವಿನ ಪೋಷಕರ ವಿಚಾರಣೆ ನಡೆಸಿದ್ದ ಪೊಲೀಸರು, ಬಸವ ಕೆಲಸ ಮಾಡುತ್ತಿದ್ದ ಹೋಟೆಲ್ ಮಾಲೀಕರ ನೆರವು ಪಡೆದು, ಖಾಸಿಫ್ ವಿಚಾರಣೆ ನಡೆಸಿದ್ದಾರೆ. ಆತನ ಮಾಹಿತಿ ಆಧರಿಸಿ ಮಗು ಖರೀದಿಸಿದ್ದ ದಂಪತಿ ಪತ್ತೆ ಹಚ್ಚಿ ಹಸುಗೂಸನ್ನು ತಂದು, ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಮಗುವಿನ ಆರೋಗ್ಯ ▶ 7ನೇ ಪುಟಕ್ಕೆ

> “ ಮಗು ಪಡೆದಿದ್ದ ಮಂಡ್ಯ ಜಿಲ್ಲೆಯ ದಂಪತಿಯೂ ಬಡವರಾಗಿದ್ದು, ಅವರಿಗೆ ವಿವಾಹವಾಗಿ 12 ವರ್ಷವಾದರೂ ಮಕ್ಕಳಿರಲಿಲ್ಲ. ಅಲ್ಲದೆ ಅಂಗವೈಕಲ್ಯ ಹೊಂದಿದ್ದಾರೆ. ಎಲ್ಲಿಯಾದರೂ ಮಗು ಇದ್ದರೆ ತಿಳಿಸುವಂತೆ ಖಾಸಿಫ್‌ಗೆ ತಿಳಿಸಿದ್ದರಂತೆ. ಇತ್ತ ಮಗುವಿನ ತಂದೆ ಬಸವ ಸಹ ಬಡತನ ಹಾಗೂ ಪತ್ನಿ ಚಿಕಿತ್ಸೆ ಉದ್ದೇಶದಿಂದ ಮಗು ನೀಡಲು ಮುಂದೆ ಬಂದಿದ್ದ. ಹಾಗಾಗಿ ಮಗುವನ್ನು 50 ಸಾವಿರ ರೂ.ಗೆ ಮಾರಾಟ ಮಾಡಲಾಗಿತ್ತು. ಮಾನವೀಯ ದೃಷ್ಟಿಯಿಂದ ದಂಪತಿಯ ವಿರುದ್ಧ ಪ್ರಕರಣ ದಾಖಲಿಸಿಲ್ಲ. **–ಪೊಲೀಸ್ ಮೂಲಗಳು.**

ಕೊಡಗು, ಚಾಮರಾಜನಗರ, ಹಾಸನ ಸೇರಿದಂತೆ 7 ಹೊಸ ವಿವಿ ಸ್ಥಾಪನೆ ಮಸೂದೆಗೆ ಅಂಗೀಕಾರ

ಬೆಂಗಳೂರು: ಬೀದರ್, ಹಾವೇರಿ, ಕೊಡಗು, ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ 2022ಕ್ಕೆ ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ದೊರೆಯಿತು.

ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಮಸೂದೆಯನ್ನು ಮಂಡಿಸಿ, ಏಳು ಜಿಲ್ಲೆಗಳ ಜಿಲ್ಲಾ ಕೇಂದ್ರಗಳಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬ ಬೇಡಿಕೆ ಇತ್ತು. ಬಜೆಟ್‌ನಲ್ಲೂ ಘೋಷಿಸಲಾಗಿತ್ತು. ಇದರಿಂದ ವಿದ್ಯಾರ್ಥಿಗಳ ಸಬಲೀಕರಣವಾಗಲಿದ್ದು, ಮುಂಬರುವ ದಿನಗಳಲ್ಲಿ ಬೇರೆ ಜಿಲ್ಲೆಗಳಲ್ಲೂ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದರು.

ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ತಲಾ ರೂ. 2 ಕೋಟಿಯಂತೆ ವಾರ್ಷಿಕ ಆವರ್ತಕ ವೆಚ್ಚ ವರ್ಷವೊಂದಕ್ಕೆ 14 ಕೋಟಿ ವೆಚ್ಚವಾಗುತ್ತದೆ. ಮಂಡ್ಯದ ಸರ್ಕಾರಿ ಮಹಾವಿದ್ಯಾಲಯವನ್ನು (ಸ್ವಾಯತ್ತ) ಏಕೀಕೃತ ವಿಶ್ವವಿದ್ಯಾಲಯವೆಂದು 2019ರಲ್ಲಿ ಮಾಡಲಾಗಿತ್ತು. ಈಗ ಮಸೂದೆಯ ಮೂಲಕ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಾಡು ಮಾಡಲಾಗಿದೆ. ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪ ನೀಡಲು ಹೊಸ ಕಾನೂನು ತರಲಾಗುವುದು. ವಿಶ್ವವಿದ್ಯಾಲಯ ಕಾಯ್ದೆ ಮಾಡಿ 22 ವರ್ಷಗಳು ಕಳೆದಿವೆ. ಅದನ್ನು ಬದಲಿಸಲು ಮಸೂದೆಯನ್ನು ಮಂಡಿಸಲಾಗುವುದು. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳು ಮತ್ತು ಸವಾಲುಗಳಿಗೆ ಅದರಲ್ಲಿ ಪರಿಹಾರವಿದೆ. ಇದು ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೂ ಅನ್ವಯಿಸುತ್ತದೆ ಎಂದರು.

ರೌಡಿಶೀಟರ್ಸ್, ಮಟ್ಕಾ ದಂಧೆಕೋರರೊಂದಿಗೆ ಸಂಪರ್ಕ

ಕಾನ್‌ಸ್ಟೇಬಲ್ ಸಸ್ಪೆಂಡ್

ಮೈಸೂರು, ಸೆ.21–ಇದು ಬೇಲಿಯೇ ಎದ್ದು ಹೊಲ ಮೇಯ್ದ ಕತೆ. ಅಪರಾಧ ಚಟುವಟಿಕೆ ಗಳನ್ನು ಹತ್ತಿಕ್ಕುವ ಮೂಲಕ ಅಪರಾಧ ಕೃತ್ಯ ಎಸಗುವವರಿಗೆ ಸಿಂಹಸ್ವಪ್ನವಾಗಿರಬೇಕಾದ ಪೊಲೀಸ್ ಕಾನ್ಸ್‌ಟೇಬಲ್, ಸ್ವತಃ ಮಟ್ಕಾ ದಂಧೆ ಕೋರರ ಜೊತೆ ಕೈಜೋಡಿಸಿರುವುದು ಬೆಳಕಿಗೆ ಬಂದಿದ್ದು, ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರು, ಕಾನ್ಸ್ ಟೇಬಲ್‌ನನ್ನು ಅಮಾನತುಪಡಿಸಿದ್ದಾರೆ.

ಜಯಲಕ್ಷ್ಮೀಪುರಂ ಠಾಣೆಯ ಕಾನ್‌ಸ್ಟೇಬಲ್ ಸುರೇಶ್ ಅಮಾನತಿಗೊಳಪಟ್ಟವನಾಗಿದ್ದು, ಈತ ಮಟ್ಕಾ ದಂಧೆಗಳಲ್ಲಿ ಪ್ರಮುಖ ಬುಕ್ಕಿಯಾಗಿರುವ ಹಾಗೂ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ರುವ ಆರೋಪಿ ಅಬ್ದುಲ್ ಜಮೀರ್ ಎಂಬಾತನ ಜೊತೆ ಸಂಪರ್ಕವಿಟ್ಟುಕೊಂಡು, ಪೊಲೀಸ್ ಇಲಾಖೆಯ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿರುವ ವ್ಯಕ್ತಿಗಳೊಂದಿಗೆ ಕೈಜೋಡಿಸಿ ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಕಾನ್‌ಸ್ಟೇಬಲ್ ಸುರೇಶ್ ನನ್ನು ಅಮಾನತುಪಡಿಸಿರುವುದಾಗಿ ನಗರ ಪೊಲೀಸ್ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಇದೇ ಮೊದಲಲ್ಲ: ಕಾನ್‌ಸ್ಟೇಬಲ್ ಸುರೇಶ್ ಅಪರಾಧ ಹಿನ್ನೆಲೆಯುಳ್ಳವರೊಂದಿಗೆ ಕೈಜೋಡಿ ಸುತ್ತಿರುವುದು ಇದೇ ಮೊದಲಲ್ಲ ಎಂಬುದು ನಗರ ಪೊಲೀಸ್ ಆಯುಕ್ತರು ನೀಡಿರುವ ಆದೇಶದಿಂದ ಕಂಡು ಬಂದಿದೆ.



ಸುರೇಶ್

ಈಗ ಅಮಾನತುಪಡಿಸಲ್ಪಟ್ಟಿರುವ ಕಾನ್‌ಸ್ಟೇಬಲ್ ಸುರೇಶ್ ಈ ಹಿಂದೆ ಮೈಸೂರು ನಗರ ವಿಶೇಷ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ. ಆಗ ಈತನ ಬಗ್ಗೆ ಹಲವಾರು ಆರೋಪಗಳು ಬಂದ ಹಿನ್ನೆಲೆಯಲ್ಲಿ ಈತನನ್ನು 2021ರ ಡಿಸೆಂಬರ್ 22ರಂದು ಮೈಸೂರು ನಗರ ವಿಶೇಷ ವಿಭಾಗದಿಂದ ಜಯಲಕ್ಷ್ಮೀಪುರಂ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು ಶಿಕ್ಷೆ ರೂಪದಲ್ಲಿ ವರ್ಗಾವಣೆಯಾದರೂ, ತಿದ್ದಿಕೊಳ್ಳದ ಸುರೇಶ, ರೌಡಿಶೀಟರ್‌ಗಳೊಂದಿಗೆ ಸಂಪರ್ಕವಿಟ್ಟು ಕೊಂಡು ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಿದೆ ಎಂಬುದನ್ನೂ ಕೂಡ ಆಯುಕ್ತರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ಕಾನ್‌ಸ್ಟೇಬಲ್‌ನ ಕೃಪಾಕಟಾಕ್ಷವಿದ್ದುದರಿಂದಲೋ ▶ 7ನೇ ಪುಟಕ್ಕೆ

Promotional Feature



ಮೈಸೂರು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್.ಎ.ರಾಮದಾಸ್ ಅವರು ಆಯೋಜಿಸಿರುವ 'ಮೋದಿ ಯುಗ್ ಉತ್ಸವ್' ಕಾರ್ಯಕ್ರಮದಲ್ಲಿ ಬುಧವಾರ ಪಾಲ್ಗೊಂಡಿದ್ದ ಯುವ ನೇತಾರರು ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರನ್ನು ಕೆ.ಆರ್ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷರಾದ ಮನು ಶೈವ್ ಅವರು ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಕೆ.ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂ.ಶ್ರೀನಿವಾಸ್, ನಾಗೇಂದ್ರ , ಉಪಾಧ್ಯಕ್ಷರಾದ ಸಂತೋಷ್ (ಶಂಭು), ಆಶ್ರಯ ಸಮಿತಿಯ ಸದಸ್ಯರಾದ ಹೇಮಂತ್ ಕುಮಾರ್, ರವಿಕುಮಾರ್ ಇತರರು ಉಪಸ್ಥಿತರಿದ್ದರು.

ಮೈಸೂರು ವಿವಿಯಲ್ಲಿ ಅಪ್ಪಚ್ಚ ಕವಿ ಅಧ್ಯಯನ ಪೀಠ ಸ್ಥಾಪನೆಯಾಗಬೇಕು

■ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೊಡವ ಸಮುದಾಯಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮನವಿ ■ ಮೈಸೂರು ಕೊಡವ ಸಮಾಜದಲ್ಲಿ ಅಪ್ಪಚ್ಚ ಕವಿ ಜನ್ಮದಿನಾಚರಣೆ



ಮೈಸೂರಿನ ವಿಜಯನಗರದ ಮೈಸೂರು ಕೊಡವ ಸಮಾಜದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಸಭಾಂಗಣದಲ್ಲಿ ಸಮಾಜದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಅಪ್ಪಚ್ಚ ಕವಿ ಜನ್ಮದಿನಾಚರಣೆಯಲ್ಲಿ ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿದರು.

ಮೈಸೂರು,ಸೆ.21(ಪಿಎಂ)–ಅಪ್ಪಚ್ಚ ಕವಿ ಕೊಡಗಿನ ಒಬ್ಬ ದಾರ್ಶನಿಕ, ದಾಸ ಪರಂಪರೆಗೆ ನಾಂದಿ ಹಾಡಿದ ಮಹಾಕವಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಪ್ಪಚ್ಚ ಕವಿ ಅಧ್ಯಯನ ಪೀಠ ರಚನೆಗೆ ಕೊಡವ ಸಮುದಾಯ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ಮೈಸೂರಿನ ವಿಜಯನಗರದ ಮೈಸೂರು ಕೊಡವ ಸಮಾಜದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸಭಾಂಗಣದಲ್ಲಿ ಸಮಾಜದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಅಪ್ಪಚ್ಚ ಕವಿ ಜನ್ಮದಿನಾಚರಣೆಯಲ್ಲಿ ಅಪ್ಪಚ್ಚ ಕವಿಗಳ ಫೋಟೋಗೆ ಪುಷ್ಪ ನಮನ ಸಲ್ಲಿಸಿ ಅವರು ಮುಖ್ಯ ಭಾಷಣ ಮಾಡಿದರು. ಈ ಮಹಾಕವಿ ಬರೆದ ನಾಟಕ, ಕೀರ್ತನೆ ಮತ್ತು ಕಾವ್ಯಗಳು ಕನ್ನಡ ಸಾರಸ್ವತ ಲೋಕದ ಅಧ್ಯಯನಕ್ಕೆ ಅತ್ಯಂತ ಯೋಗ್ಯವಾಗಿವೆ. ಇದರ ಚರ್ಚೆ ಮತ್ತು ಅಧ್ಯಯನ ದೃಷ್ಟಿಯನ್ನು ಮುಂದಿನ ಪೀಳಿಗೆಗೆ ಕಾಪಿಟ್ಟುಕೊಳ್ಳುವುದಕ್ಕಾಗಿ ಮೈಸೂರು ವಿವಿಯಲ್ಲಿ ಅಪ್ಪಚ್ಚ ಕವಿ ಅಧ್ಯಯನ ಪೀಠ ರಚನೆಯಾಗಬೇಕು. ಇದಕ್ಕಾಗಿ ಸರ್ಕಾರವನ್ನು ಒತ್ತಾಯಿಸಬೇಕೆಂದು ಕೊಡವ ಸಮಾಜದ ಸದಸ್ಯರಲ್ಲಿ ವಿನಂತಿ ಮಾಡಿದರು.

ಕೊಡಗಿನ ಕಾಳಿದಾಸ: ಭಾರತೀಯ ರಂಗಭೂಮಿಯಲ್ಲಿ ಪುರಾಣದ ಯಯಾತಿ ಕಥೆಯನ್ನು ನಾಟಕ ರೂಪದಲ್ಲಿ ತಂದ ಮೊದಲ ಭಾರತೀಯ ನಾಟಕಕಾರ ಅಪ್ಪಚ್ಚಕವಿ ಎನ್ನುವುದನ್ನು ನಾಡಿನ ಎಲ್ಲಾ ರಂಗಭೂಮಿ ತಜ್ಞರು ಮತ್ತು ಕಲಾವಿದರು ಮರೆಯಬಾರದು. ಕೇವಲ ನಾಲ್ಕನೇ ತರಗತಿ ವರೆಗೆ ಓದಿದ ಅಪ್ಪಚ್ಚ ಕವಿ ಸಂಸ್ಕೃತವನ್ನು ಕಲಿತು ಪಂಡಿತ ಪಾಮರರು ತಲೆದೂಗುವಂತೆ ನಾಟಕ ರಚನೆ ಮಾಡಿ ಕೊಡಗಿನ ಕಾಳಿದಾಸ ಎಂದು ಕರೆಸಿಕೊಂಡವರು ಎಂದು ಸ್ಮರಿಸಿದರು.

ಸಾಹಿತ್ಯದ ಮೂಲಕ ಸಮಾಜ ತಿದ್ದಿದ ಕವಿ: ಗುಬ್ಬಿ ವೀರಣ್ಣ, ಮಹಮದ್‌ಪೀರ್ ಕಾಲದ ಈ ಕವಿ, ನಾಟಕಕಾರನ ಬರಹಗಳ ಬಗ್ಗೆ ಚರ್ಚೆಯಾಗಬೇಕಿದೆ. ಕೊಡವ ಭಾಷೆಗೆ ಸಂಸ್ಕೃತ ಲೇಪನ ಮಾಡಿ ಛಂದೋಬದ್ಧವಾಗಿ ಕಾವ್ಯ, ನಾಟಕಗಳ ರಚನೆ ಮಾಡಿರುವ ಅಪ್ಪಚ್ಚ ಕವಿ, ಡಿವಿಜಿ ಅವರ ಕಾವ್ಯಗಳ, ಕಗ್ಗದ ನೆನಪನ್ನು ಮಾಡಿಕೊಡುತ್ತಾರೆ. ಸಾಹಿತ್ಯ ಕೃಷಿಯ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿರುವ ಈ ಕವಿಗೆ ಯೋಗ್ಯ ಗೌರವ ಇನ್ನು ಸಿಕ್ಕಿಲ್ಲ ಎಂದು ವಿಷಾದಿಸಿದರು.

ಕೊಡಗಿನ ಅಂಗಸಂಸ್ಥೆಗಳು ಇವರ ಜನ್ಮದಿನವನ್ನು 'ಕೊಡವ ಸಾಹಿತ್ಯ ದಿನ' ಎಂದು ಘೋಷಣೆ ಮಾಡಿ ಆಚರಿಸುತ್ತಾ ಬರುತ್ತಿವೆ. ಇಷ್ಟಿದ್ದರೆ ಸಾಲದು, ಈ ದೇಶಿ ಮತ್ತು ಸೃಜನಶೀಲ ನಾಟಕಕಾರನ ಬಗ್ಗೆ ಕನ್ನಡ ರಂಗಭೂಮಿ, ಸಾಹಿತ್ಯ ಲೋಕ ಕಣ್ತೆರೆದು ನೋಡುವಂತಾಗಬೇಕೆಂದು ಮನವಿ ಮಾಡಿದರು. 'ಅಪ್ಪಚ್ಚ ಕವಿಯ ಬದುಕು–ಬರಹ' ಕುರಿತು ಭರಣಿ ಆರ್ಟ್ ಗ್ಯಾಲರಿ ಅಧ್ಯಕ್ಷರೂ ಆದ ಕಲಾವಿದ ನೆಲ್ಲಮಕ್ಕಡ ಕಾವೇರಪ್ಪ ಮಾತನಾಡಿದರು. ಮೈಸೂರು ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಶಶಿ ಪೊನ್ನಪ್ಪ ಸ್ವಾಗತಿಸಿದರು. ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್‌ನ ಅಧ್ಯಕ್ಷ ಕುಟ್ಟಿಮಾಡ ಮುತ್ತಪ್ಪ ಸೇರಿದಂತೆ ಸಮಾಜದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಅಪ್ಪಚ್ಚ ಕವಿ ಸ್ವೀಕರಿಸದ ಕನ್ನಡ ಸಾರಸ್ವತ ಲೋಕ

"1868ರ ಸೆಪ್ಟೆಂಬರ್ 21ರಲ್ಲಿ ಜನಿಸಿದ ಈ ಕವಿ ಸಂತನೆನಿಸಿಕೊಂಡವರು. ಇವರ ಸಾಹಿತ್ಯ, ನಾಟಕ, ಕೀರ್ತನೆ ಮತ್ತು ಕಾವ್ಯಗಳ ಬಗ್ಗೆ ಸಮಗ್ರ ಚರ್ಚೆಯಾಗಬೇಕಿದೆ. ಕನ್ನಡ ಸಾರಸ್ವತ ಲೋಕ ಅಪ್ಪಚ್ಚಕವಿಯನ್ನು ಇನ್ನು ಸ್ವೀಕರಿಸಿಲ್ಲ. ಇವರ ಸಾಹಿತ್ಯದ ಬಗ್ಗೆ ಗಂಭೀರ ಚರ್ಚೆ ನಡೆಸಿಲ್ಲ. ಕೊಡವ ಭಾಷೆ ಎಂಬ ಕಾರಣಕ್ಕಿರಬಹುದು.

–ಅಡ್ಡಂಡ ಸಿ.ಕಾರ್ಯಪ್ಪ

ಮಾಜಿ ಪ್ರಧಾನಿ ದೇವೇಗೌಡರ ಭೇಟಿಯಾದ ಸಿಎಂ ಬೊಮ್ಮಾಯಿ

ಅವರ ಸಂಪುಟ ಸದಸ್ಯರಿಂದಲೂ ಗೌಡರ ಆರೋಗ್ಯ ವಿಚಾರಣೆ

ಬೆಂಗಳೂರು, ಸೆ.21(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅವರ ಸಂಪುಟದ ಸಹೋದ್ಯೋಗಿಗಳು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನಿವಾಸಕ್ಕೆ ತೆರಳಿ ಆರೋಗ್ಯ ವಿಚಾರಿಸಿದರು.



ಮೊಣಕಾಲು ನೋವಿನಿಂದ ಬಳಲುತ್ತಿರುವ ಗೌಡರು, ಕಳೆದ ಎರಡು ತಿಂಗಳಿನಿಂದ ವಿಶ್ರಾಂತಿಯಲ್ಲಿದ್ದಾರೆ. ಈ ಸಂದರ್ಭದಲ್ಲಿ ಅವರು ಯಾವುದೇ ಸಾರ್ವಜನಿಕ ಸಮಾರಂಭಗಳಾಗಲೀ, ಅಥವಾ ಹೊರಗೆ ಕಾಣಿಸಿಕೊಂಡಿರಲಿಲ್ಲ ಮತ್ತು ಯಾರನ್ನೂ ಭೇಟಿಯಾಗಲು ಅವರ ಕುಟುಂಬದವರು ಅವಕಾಶ ನೀಡಿರಲಿಲ್ಲ.

ಆರೋಗ್ಯದಲ್ಲಿ ಚೇತರಿಕೆ ಕಂಡ ನಂತರ ಭೇಟಿ ಮಾಡಲು ಸಮಯ ಕೋರಿದ್ದ ನಾಯಕರಿಗೆ ಕುಟುಂಬದವರು ಈಗ ಅವಕಾಶ ನೀಡುತ್ತಿದ್ದಾರೆ. ಮೊದಲು ಕಂದಾಯ ಸಚಿವ ಅಶೋಕ್, ಗೌಡರನ್ನು ಭೇಟಿ ಮಾಡಿ ಬಂದ ನಂತರ ಮಾಜಿ ಸಿಎಂಗಳಾದ ಸಿದ್ದರಾಮಯ್ಯ, ಬಿ.ಎಸ್.ಯಡಿಯೂರಪ್ಪ ಭೇಟಿಯಾಗಿ ಆರೋಗ್ಯ ವಿಚಾರಿಸಿ ಬಂದಿದ್ದರು. ಇದೀಗ ಸಚಿವರಾದ ಜೆ.ಸಿ.ಮಾಧುಸ್ವಾಮಿ, ಅಶೋಕ್, ವಿ.ಸೋಮಣ್ಣ, ಭೈರತಿ ಬಸವರಾಜ್, ಕೆ.ಗೋಪಾಲಯ್ಯ, ಮುನಿರತ್ನ ಇತರರು ಗೌಡರ ನಿವಾಸಕ್ಕೆ ತೆರಳಿ, ಅವರ ಆರೋಗ್ಯ ವಿಚಾರಿಸಿದ್ದಲ್ಲದೆ, 30 ನಿಮಿಷಗಳ ಕಾಲ ಆಡಳಿತ ಮತ್ತು ಪ್ರಸಕ್ತ ರಾಜಕೀಯದ ಬಗ್ಗೆ ಲೋಕಾರೂಢಿಯಾಗಿ ಮಾತನಾಡಿದರು. ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ದೇವೇಗೌಡರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಬಹಳ ಆತ್ಮೀಯವಾಗಿ ಲವಲವಿಕೆಯಿಂದ ಮಾತನಾಡಿದ್ದಾರೆ. ಸಾಕಷ್ಟು ಹಳೆಯ ವಿಚಾರಗಳನ್ನು ಮೆಲುಕು ಹಾಕಿದ್ದಲ್ಲದೆ, ರಾಜ್ಯಕ್ಕೆ ಒಳ್ಳೆಯದು ಮಾಡಬೇಕೆಂಬ ನಿಟ್ಟಿನಲ್ಲಿ ಅವರ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅವರ ಆರೋಗ್ಯ ಚೆನ್ನಾಗಿರಲಿ, ನೂರ್ಕಾಲ ಚೆನ್ನಾಗಿ ಬಾಳಲಿ, ರಾಜ್ಯಕ್ಕೆ ಅವರಿಂದ ಇನ್ನಷ್ಟು ಮಾರ್ಗದರ್ಶನ ಸಿಗುವಂತಾಗಲಿ ಎಂದರು.



ಕಾರ್ಯಕ್ರಮನಿಮಿತ್ತ ಮೈಸೂರಿಗೆ ಆಗಮಿಸಿದ್ದ ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡ ಅರುಣ್‌ಕುಮಾರ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಬಿಜೆಪಿ ಮುಖಂಡರಾದ ಯಶಸ್ವಿನಿ ಸೋಮಶೇಖರ್, ತಹಸೀಲ್ದಾರ್ ಗಿರೀಶ್, ನಗರಪಾಲಿಕೆ ಸದಸ್ಯರಾದ ಮ.ವಿ.ರಾಮಪ್ರಸಾದ್, ಟಿ.ರಮೇಶ್, ಸೀಗಳ್ಳಿ ರವಿ, ಬ್ರಹ್ಮಾಚರ್ ಮತ್ತಿತರರು ಅಭಿನಂದಿಸಿದರು.

ಸೆ.26ರಿಂದ ಶರನ್ನವರಾತ್ರಿ ಸಂಗೀತೋತ್ಸವ

ಮೈಸೂರು,ಸೆ.21–ನಗರದ ಟಿ.ಕೆ.ಲೇಔಟ್ ಪಡುವಣ ರಸ್ತೆಯಲ್ಲಿರುವ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಸೆ.26ರಿಂದ ಅ.4ರವರೆಗೆ ಶರನ್ನವರಾತ್ರಿ ಸಂಗೀತೋತ್ಸವವನ್ನು 16ನೇ ಕ್ರಾಸ್ ಜಯನಗರ ಶ್ರೀರಾಮ ಮಂದಿರದಲ್ಲಿ ಆಯೋಜಿಸಲಾಗಿದೆ. ಸೆ.26ರಂದು ಸಂಜೆ 6 ಗಂಟೆಗೆ ಖ್ಯಾತ ವೀಣಾವಾದಕ ಆರ್.ಕೆ.ಪದ್ಮನಾಭ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಅಂದು ಸಂಜೆ 6ರಿಂದ 8.30ರವರೆಗೆ ವಿ. ಮೈಸೂರು ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ಸೆ.27ರಂದು ಸಂಜೆ 6ರಿಂದ 8.30ರವರೆಗೆ ವಿ.ಮಾನಸ ನಯನ ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸೆ.28ರಂದು ಸಂಜೆ 6ರಿಂದ 8.30ರವರೆಗೆ ವಿ.ಆರ್.ಕೆ.ಪದ್ಮನಾಭ ಮತ್ತು ತಂಡದಿಂದ ವೀಣಾವಾದನ, ಸೆ.29ರಂದು ವಿ.ಮಾಧವ ಭಟ್ ಚೆನ್ನಿಗ (ಸಾಗರ) ಮತ್ತು ತಂಡದವರಿಂದ ಮುಖವೀಣಾ ವಾದನ (ಶಿಳ್ಳು ವಾದನ), ಸೆ.30ರಂದು ಸಂಜೆ 6ರಿಂದ 8.30ರವರೆಗೆ ವಿ.ಕೇಶವ ಮೋಹನ್‌ಕುಮಾರ್ ಮತ್ತು ತಂಡದಿಂದ ವಯಲೀನ್ ವಾದನ, ಅ.1ರಂದು ಸಂಜೆ 6ರಿಂದ 7.30ರವರೆಗೆ ವಿ.ಆರ್.ಕೆ.ಕೌಶಿಕ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಅ.2ರಂದು ಸಂಜೆ 6ರಿಂದ 7.30ರವರೆಗೆ ವಿ.ಶ್ರೀಲಕ್ಷ್ಮಿ ಮತ್ತು ತಂಡದಿಂದ ವೀಣಾವಾದನ, ಅ.3ರಂದು ಸಂಜೆ 6ರಿಂದ 8.30ರವರೆಗೆ ವಿದುಷಿ ವಿಜಯಶ್ರೀ ಮತ್ತು ವಿದುಷಿ ಶ್ರೀವಿದ್ಯಾರವರಿಂದ ಮತ್ತು ತಂಡದಿಂದ ಯುಗಳ ಗಾಯನ ಪ್ರಸ್ತುತಿ, ಅ.4ರಂದು ವಿ.ಎನ್.ಶ್ರೀನಾಥ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಏರ್ಪಡಿಸಲಾಗಿದೆ. ಸಂಗೀತಾಸಕ್ತರು ಈ ಎಲ್ಲ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಸಂಸ್ಥೆ ಅಧ್ಯಕ್ಷ ವಿ.ಮೈಸೂರು ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.9845887237 ಸಂಪರ್ಕಿಸಬಹುದು.



ಮೈಸೂರು ಜಿಲ್ಲಾ ಮಹಿಳಾ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷೆ ಸುಶೀಲಾ ನಂಜಪ್ಪ ಉದ್ಘಾಟಿಸಿದರು. ಈ ವೇಳೆ ಸಂಘದ ಬೃಹದಾಂಬ ಶಿವಕುಮಾರ್, ಶೀಲಕುಮಾರಿ, ಗೌರಮ್ಮ, ಆಶಾ, ಪ್ರಭಾಮಣಿ, ಪ್ರಭಾ ಸುರೇಂದ್ರ, ಶ್ವೇತಾ, ಪ್ರೇಮಾ ಇನ್ನಿತರರಿದ್ದರು.

ಕುಕ್ಕರಹಳ್ಳಿ ಕೆರೆಯಲ್ಲಿ ಮಹಿಳೆ ಮೃತದೇಹ ಪತ್ತೆ

ಮೈಸೂರು,ಸೆ.21(ಆರ್‌ಕೆ)–ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಬುಧವಾರ ಬೆಳಗ್ಗೆ ಮಹಿಳೆ ಮೃತದೇಹ ಪತ್ತೆಯಾಗಿದೆ. ಮೈಸೂರಿನ ರಮಾಬಾಯಿನಗರ ನಿವಾಸಿ, ನಿವೃತ್ತ ಬ್ಯಾಂಕ್ ಉದ್ಯೋಗಿ ಶಿವರಾಂ ಅವರ ಪತ್ನಿ ಶ್ರೀಮತಿ ಪುಷ್ಪಾ (55) ಅವರ ದೇಹ ಎಂಬುದು ತಿಳಿದು ಬಂದಿದೆ. ಬೆಳಗ್ಗೆ 8 ಗಂಟೆ ವೇಳೆಗೆ ನೀರಿನಲ್ಲಿ ತೇಲುತ್ತಿದ್ದ ಮೃತದೇಹ ಕಂಡ ವಾಯುವಿಹಾರಿಗಳು ನೀಡಿದ ಮಾಹಿತಿಯನ್ವಯ ಸ್ಥಳಕ್ಕೆ ಧಾವಿಸಿದ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು, ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡು



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ದೇಹ ಹಸ್ತಾಂತರಿಸಿದರು. ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ಪುಷ್ಪಾ, ಮಂಗಳವಾರ ರಾತ್ರಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ತನಿಖೆಯಿಂದ ನಿಖರ ಮಾಹಿತಿ ತಿಳಿಯಬೇಕಾಗಿದೆ.

ಬಾಯಲ್ಲೇ ನಮ್ಮ ಆರೋಗ್ಯದ ಗುಟ್ಟಿದೆ; ಸೇವಿಸುವ ಪದಾರ್ಥಗಳ ಬಗ್ಗೆ ಎಚ್ಚರವಿರಲಿ

■ ಮಕ್ಕಳಿಗೆ ಬಾಲ್ಯದಿಂದಲೇ ಚೆನ್ನಾಗಿ ಕೈ ತೊಳೆಯುವ ವಿಧಾನ ಕಲಿಸಬೇಕು: ಡಾ. ಸಿ.ಎನ್.ಮಂಜುನಾಥ್ ಸಲಹೆ ■ ಸೂಕ್ಷ್ಮ ಜೀವವಿಜ್ಞಾನ–ಸಮಾಜ: ಪ್ರಸ್ತುತ ಪ್ರವೃತ್ತಿಗಳು ಹಾಗೂ ಭವಿಷ್ಯದ ನಿರೀಕ್ಷೆಗಳು' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ



ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಅಸೋಸಿಯೇಷನ್ ಆಫ್ ಮೈಕ್ರೋಬಯಾಲಜಿಸ್ಟ್ಸ್ ಆಫ್ ಇಂಡಿಯಾದ 62ನೇ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಉದ್ಘಾಟಿಸಿ ಮಾತನಾಡಿದರು. ಚಿತ್ರದಲ್ಲಿ ಪ್ರೊ.ಕೆ.ಎಸ್. ರಂಗಪ್ಪ, ಪ್ರೊ.ಜಿ.ಹೇಮಂತ್‌ಕುಮಾರ್, ಪ್ರೊ.ಎಸ್.ಅಯ್ಯಪ್ಪನ್, ಪ್ರೊ.ಪ್ರವೀಣ್ ರಿಷಿ, ಪ್ರೊ.ಆರ್.ಸಿ.ಕುಹಾದ್, ಪ್ರೊ.ನಮಿತಾ ಸಿಂಗ್, ಪ್ರೊ.ಎಸ್.ಸತೀಶ್, ಪ್ರೊ.ಎಸ್.ಚಂದ್ರನಾಯಕ್ ಅವರನ್ನು ಕಾಣಬಹುದು.

ಮೈಸೂರು, ಸೆ.21(ಆರ್‌ಕೆಬಿ)– ಮಕ್ಕಳಿಗೆ ಬಾಲ್ಯದಲ್ಲೇ ಕೈ ತೊಳೆಯುವ ವಿಧಾನ ಹಾಗೂ ವೈಯಕ್ತಿಕ ಸ್ವಚ್ಛತೆ ಬಗ್ಗೆ ಪೋಷಕರು ಅರಿವು ಮೂಡಿಸಬೇಕು. ಬಾಯಿ ಆರೋಗ್ಯ ಕಾಪಾಡಿಕೊಂಡರೆ ದೇಹದ ಆರೋಗ್ಯ ವೃದ್ಧಿಸುತ್ತದೆ ಎಂದು ಬೆಂಗಳೂರು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಬುಧವಾರ ಅಸೋಸಿಯೇಷನ್ ಆಫ್ ಮೈಕ್ರೋ ಬಯಾಲಜಿಸ್ಟ್ಸ್ ಆಫ್ ಇಂಡಿಯಾದ ಮೂರು ದಿನಗಳ 62ನೇ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬಾಯಲ್ಲೇ ನಮ್ಮ ಆರೋಗ್ಯದ ಗುಟ್ಟಿದೆ. ಬಾಯಿಂದಲೇ ನಮ್ಮ ದೇಹಕ್ಕೆ ಆಹಾರ ಸೇರುತ್ತದೆ. ಹಾಗಾಗಿ ಕೈಯಿಂದ ತಿನ್ನುವ ಪದಾರ್ಥಗಳ ಬಗ್ಗೆ ಎಚ್ಚರಿಕೆ ಇರಬೇಕು. ಊಟ ಮಾಡುವ ಮುನ್ನ ಚೆನ್ನಾಗಿ ಕೈ ತೊಳೆಯಬೇಕು. ತುಂಬಾ ಜನ ಊಟದ ನಂತರ ನೀಟಾಗಿ ಕೈ ತೊಳೆಯುತ್ತಾರೆ. ಆದರೆ, ಊಟಕ್ಕೆ ಮುನ್ನ ಕೈ ತೊಳೆಯುವುದನ್ನು ಮರೆಯುತ್ತಾರೆ ಎಂದು ಹೇಳಿದರು.

ಅಮೆರಿಕಾದ ಆಂತರಿಕ ಸಮೀಕ್ಷೆ ಪ್ರಕಾರ, ಹೆರಿಗೆ ಸಮಯದಲ್ಲೂ ಆಸ್ಪತ್ರೆ ಸಿಬ್ಬಂದಿ ಸ್ವಚ್ಛತೆ ಕಾಪಾಡಿಕೊಳ್ಳದ ಪರಿಣಾಮ ಶಿಶು ಮರಣ ಹೆಚ್ಚಾಗಿದೆ. ಹಾಗಾಗಿ, ವೈದ್ಯರು ಹಾಗೂ ದಾದಿಯರು ಕೂಡ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮುಖ್ಯವಾಗಿ ದೇಹದ ರೋಗ ನಿರೋಧಕ ಶಕ್ತಿ ವೃದ್ಧಿಸಿಕೊಳ್ಳಬೇಕು. ಒಳ್ಳೆಯ ನಿದ್ರೆ, ವ್ಯಾಯಾಮ, ಯೋಗ, ಹಣ್ಣು ತರಕಾರಿ ತಿನ್ನುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬಹುದು. ಕುಡಿತ ಹಾಗೂ ಧೂಮಪಾನ ಬಿಟ್ಟರೆ ಹಲವು ಕಾಯಿಲೆಗಳಿಂದ ದೂರ ಇರಬಹುದು ಎಂದರು.

ವಿಜ್ಞಾನ ಕ್ಷೇತ್ರದಲ್ಲಿ ಪ್ರತ್ಯೇಕ ಆಂಟಿಬಯೋಟಿಕ್ ಪಾಲಿಸಿ ಇದೆ. ಅಜಿತ್ರೋಮೈಸಿನ್ ಕೋವಿಡ್ ಸಮಯದಲ್ಲಿ ಹೆಚ್ಚು ದುರ್ಬಳಕೆ ಆಗಿದೆ. ಕೋವಿಡ್ ವಾಸಿಯಾದರೂ ದೇಹದಲ್ಲಿ ಅದು ದೀರ್ಘಕಾಲ ಇರುತ್ತದೆ. ಕೊರೊನಾ ಬಂದು ಹೋದ ವ್ಯಕ್ತಿಯಲ್ಲಿ ಶೇ.5ರಷ್ಟು ಹೃದಯಸಂಬಂಧಿ ಕಾಯಿಲೆ ಬರಬಹುದು. ಶೇ.2 ರಷ್ಟು ಮಧುಮೇಹ (ಶೇ.2) ಬರುವ ಸಾಧ್ಯತೆ ಇರುತ್ತದೆ. ಇದರಿಂದ ತೂಕ ಕಳೆದುಕೊಳ್ಳುವುದು, ಅಲರ್ಜಿ ಸಮಸ್ಯೆಯೂ ಬರುತ್ತದೆ ಎಂದು ತಿಳಿಸಿದರು.

ನಮ್ಮ ಜೀವನ ಶೈಲಿ ಉತ್ತಮವಾಗಿದ್ದರೆ ದೇಹವೂ ಸದೃಢವಾಗಿರುತ್ತದೆ. ಶುದ್ಧ ಗಾಳಿ ಹಾಗೂ ನೀರಿನಿಂದ ಬಹುತೇಕ ಕಾಯಿಲೆಗಳನ್ನು ದೂರ ಇಡಬಹುದು. ಕುದಿಸಿ ಆರಿಸಿದ ನೀರಿಗೆ ಮೊದಲ ಆದ್ಯತೆ ನೀಡಬೇಕು. ನೈಸರ್ಗಿಕ ತರಕಾರಿ ಹಾಗೂ ಹಣ್ಣು ಸೇವನೆ ಬಗ್ಗೆ ಗಮನ ಹರಿಸಬೇಕು. ನಿಯಮಿತವಾಗಿ ವ್ಯಾಯಾಮ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್, ಬೆಂಗಳೂರಿನ ಕೆಎಸ್‌ಟಿಎ ಛೇರ್ಮನ್ ಪ್ರೊ.ಎಸ್.ಅಯ್ಯಪ್ಪನ್, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಮಾತನಾಡಿದರು. ಡಿಆರ್‌ಡಿಒ–ಡಿಎಫ್‌ಆರ್‌ಎಲ್ ನಿರ್ದೇಶಕ ಡಾ. ಅನಿಲ್‌ದತ್ ಸೆಮ್ವಾಲ್, ನವದೆಹಲಿ ಅಕಾಡೆಮಿ ಆಫ್ ಮೈಕ್ರೋ ಬಯೋಲಾಜಿಕಲ್ ಸೈನ್ಸಸ್ ಅಧ್ಯಕ್ಷ ಪ್ರೊ.ಆರ್.ಸಿ.ಕುಹಾದ್, ನವದೆಹಲಿಯ ಎಎಂಐ ಅಧ್ಯಕ್ಷ ಪ್ರೊ.ಪ್ರವೀಣ್ ರಿಷಿ ಪ್ರಧಾನ ಕಾರ್ಯದರ್ಶಿ ಪ್ರೊ.ನಮಿತಾ ಸಿಂಗ್, ಪ್ರೊ.ಎಸ್.ಸತೀಶ್, ಪ್ರೊ.ಎಸ್. ಚಂದ್ರ ನಾಯಕ್ ಇನ್ನಿತರರು ಉಪಸ್ಥಿತರಿದ್ದರು.

ಸಾರಿಗೆ ಇಲಾಖೆಗೆ 2814 ಚಾಲಕರ ಶೀಘ್ರ ನೇಮಕ

ಬೆಂಗಳೂರು, ಸೆ.21(ಕೆಎಂಶಿ)–ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ 2814 ಚಾಲಕರ ಹುದ್ದೆಗಳನ್ನು ಶೀಘ್ರದಲ್ಲೇ ನೇಮಕ ಮಾಡಿಕೊಳ್ಳಲಾಗುವುದು ಎಂದು ಸಾರಿಗೆ ಸಚಿವ ಶ್ರೀರಾಮುಲು ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಲಿಂಬಣ್ಣನವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2814 ಚಾಲಕರು ಹಾಗೂ ಇದರ ಜೊತೆಗೆ ಹೆಚ್ಚುವರಿಯಾಗಿ ಚಾಲಕ ಕಂ ನಿರ್ವಾಹಕರನ್ನು ಸಹ ನೇಮಕ ಮಾಡಿಕೊಳ್ಳಲಾಗುತ್ತದೆ. ಎಲ್ಲೆಲ್ಲಿ ಅಗತ್ಯವಿದೆಯೋ ಅಂತಹ ಕಡೆ ಇವರನ್ನು ನಿಯೋಜನೆ ಮಾಡಿಕೊಳ್ಳಲಾಗುವುದು ಎಂದರು.

ಪ್ರಸ್ತುತ ಸಂಸ್ಥೆಯಲ್ಲಿ 2500 ಚಾಲಕ, 55 ಚಾಲಕರು(ಬ್ಯಾಕ್‌ಲಾಗ್), 250 ಚಾಲಕ ಕಂ ನಿರ್ವಾಹಕ(ಬ್ಯಾಕ್‌ಲಾಗ್) ಸೇರಿದಂತೆ ಒಟ್ಟು 2814 ಹುದ್ದೆಗಳ ನೇಮಕಕ್ಕೆ 2019ರಲ್ಲೇ ಅಧಿಸೂಚನೆ ಹೊರಡಿಸಲಾಗಿತ್ತು. ಕೋವಿಡ್ ಕಾರಣದಿಂದ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು. ಈಗ ನೇಮಕಾತಿ ಪ್ರಕ್ರಿಯೆಗೆ ಪ್ರಸ್ತಾವನೆ ಸ್ವೀಕೃತಗೊಂಡಿದೆ ಎಂದರು.

ತಿಂಗಳಲ್ಲಿ ನೇಮಕ: ತೋಟಗಾರರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು ಎಂದು ತೋಟಗಾರಿಕೆ ಸಚಿವ ಮುನಿರತ್ನ ತಿಳಿಸಿದರು. ಅಮರೇಗೌಡ ಬಯ್ಯಾಪುರ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಇಲಾಖೆಯಲ್ಲಿ 200 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಕಳೆದ ಮೇ 8ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಈ ಪಟ್ಟಿ ಮೇಲೆ ಸಲ್ಲಿಸಿರುವ ಆಕ್ಷೇಪಗಳ ಅರ್ಜಿಗಳು ಪರಿಶೀಲನಾ ಹಂತದಲ್ಲಿದೆ ಎಂದರು.





ವಿಧಾನಪರಿಷತ್ ಸಭಾಪತಿ ರಘುನಾಥ ರಾವ್ ಮಲ್ಕಾಪುರೆ, ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಮೈಸೂರು ದಸರಾ ಮಹೋತ್ಸವಕ್ಕೆ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ ಜಿಲ್ಲಾಡಳಿತ ಬುಧವಾರ ಆಹ್ವಾನ ನೀಡಿತು. ಈ ವೇಳೆ ಸಚಿವ ಆನಂದ್‌ಸಿಂಗ್, ಶಾಸಕರಾದ ಎಲ್. ನಾಗೇಂದ್ರ ಸಿ.ಎನ್. ಮಂಜೇಗೌಡ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಇತರರು ಉಪಸ್ಥಿತರಿದ್ದಾರೆ.

ಕುಸ್ತಿಯಲ್ಲಿ ಸಕ್ಲೈನ್ ಮುಸ್ತಾಕ್‌ಗೆ ಬಹುಮಾನ

ಮೈಸೂರು, ಸೆ.21–ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ 86 ಕೆಜಿ ಕುಸ್ತಿ ವಿಭಾಗದಲ್ಲಿ ಮೈಸೂರಿನ ಉದಯಗಿರಿ ನಿವಾಸಿ ಸಕ್ಲೈನ್ ಮುಸ್ತಾಕ್ ಪ್ರಥಮ ಸ್ಥಾನ ಮತ್ತು ಸೆ.15ರಂದು ನಡೆದ ಮೈಸೂರು ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದ 86 ಕೆಜಿ ಕುಸ್ತಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಪಿ. ಸುರಭಿ, ವ್ಯಾಖ್ಯಾನ– ಡಾ. ಮ.ರಾಮಕೃಷ್ಣ, 6.50 ರೈತರಿಗೆ ಸಲಹೆ, 10.00 ಸಪ್ತವೀಣಾವಾದನ–ನಿರ್ದೇಶನ ಮೈಸೂರು ಎಸ್. ರಾಜಲಕ್ಷ್ಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ – ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ಹಿಂದಿ ಚಿತ್ರಗೀತೆ, 4.00 ಹಳ್ಳಿಹಾಡು–ಡಾ.ಪಿ.ಕೆ. ರಾಜಶೇಖರ್ ಮತ್ತು ತಂಡ, 4.30 ಕನ್ನಡ ಭಾರತಿ–ರಷ್ಯನ್ ಸಾಹಿತ್ಯ ಮತ್ತು ಕನ್ನಡ, ಪ್ರೊ.ಹೆಚ್.ಎಸ್.ಹರಿಶಂಕರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ– ಬೇಳೆಕಾಳು ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣಾ ಕ್ರಮಗಳು ಕುರಿತು ಡಾ.ಎಂ.ಎಸ್. ಕಿತ್ತೂರುಮಠ್ ಅವರೊಡನೆ ಸಂದರ್ಶನ, 9.00 ಯುವವಾಣಿ–ಯುವಪ್ರತಿಭೆ, 9.30 ಕನ್ನಡ ಭಾರತಿ, 10.30 ಸವಿನೆನಪು

ಇಂದಿನ ಪಂಚಾಂಗ

22.09.2022 ಗುರುವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022

ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ : ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ರೋಟೇರಿಯನ್ಸ್ ಮತ್ತು ನಾನ್ ರೋಟೇರಿಯನ್ಸ್‌ಗೆ ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ, ಉದ್ಘಾಟನೆ : ರೋ. ಪ್ರಕಾಶ್ ಕಾರಂತ್, ಮುಖ್ಯ ಅತಿಥಿಗಳು: ವಿ. ಸುನಿಲ್ ಗ್ಲಾಡ್‌ಸನ್, ಸಿಲಿಕಾನ್ ಸಿಟಿ ಅಕಾಡೆಮಿ ಕಾರ್ಯದರ್ಶಿ ಎಲ್. ರವಿ, ಗೌರವ ಅತಿಥಿಗಳು: ವಿಕ್ರಮ್ ದತ್ತ, ಎಸ್. ವಾಸುದೇವನ್, ಲಕ್ಷ್ಮಿನಾರಾಯಣ್, ನಾಗಾರ್ಜುನ, ಜೋಸೆಫ್ ಮ್ಯಾಥ್ಯೂ, ಎಂ. ರಂಗನಾಥ್ ಭಟ್, ರವೀಂದ್ರ ಭಟ್, ಸ್ಥಳ: ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್, ಕೆ.ಸಿ. ಲೇಔಟ್, ಬೆಳಗ್ಗೆ 8.30ಕ್ಕೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಮಹಾಲಕ್ಷ್ಮೀ ಮಹಿಳಾ ಮಂಡಳಿ:** ವಾರ್ಷಿಕೋತ್ಸವ, ಉದ್ಘಾಟನೆ: ಮಹಾಕವಯಿತ್ರಿ ಡಾ.ಲತಾ ರಾಜಶೇಖರ್, ಮುಖ್ಯ ಅತಿಥಿಗಳು: ನಿವೃತ್ತ ಸ್ಥಾಯಿ ವೈದ್ಯಾಧಿಕಾರಿ ಡಾ.ಮನೋನ್ಮಣಿ, ಸನ್ಮಾನಿತರು: ಕದಳಿ ಮಹಿಳಾ ವೇದಿಕೆ ಮಾಜಿ ಅಧ್ಯಕ್ಷೆ ಶ್ರೀಮತಿ ಜಯಾಗೌಡ, ಅಧ್ಯಕ್ಷತೆ: ಮಹಾಲಕ್ಷ್ಮಿ ಮಹಿಳಾ ಮಂಡಳಿ ಅಧ್ಯಕ್ಷೆ ಸುಮಾ ಪ್ರಕಾಶ್, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

ಮೈಸೂರು ವಿಶ್ವವಿದ್ಯಾನಿಲಯ, ಜೈನ ಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ; ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ (ಶ್ರವಣ ಬೆಳಗೊಳ): ಪ್ರಾಕೃತ ಭಾಷಾ ಕಾರ್ಯಾಗಾರ, ಉದ್ಘಾಟನೆ: ಬೆಂಗಳೂರು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಮುಖ್ಯ ಅತಿಥಿ: ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಸ್ಥಳ: ಜೈನ ಶಾಸ್ತ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರ್‌ಮಲ್ ಸೋಮಾನಿ ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಎಸ್. ಶೇಖರ್, ದಾಸ ಸಾಹಿತ್ಯ ಚಿಂತಕ ಡಾ. ಟಿ.ಎನ್. ನಾಗರತ್ನ ಅವರಿಂದ ದಾಸ ಸಾಹಿತ್ಯದಲ್ಲಿ ಜೀವಪರ ಚಿಂತನೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಐಬಿಇ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಅಧ್ಯಕ್ಷತೆ: ಓಂಕಾರಮಲ್ ಸೋಮಾನಿ ಬಿ.ಇಡಿ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಎನ್. ಆಶಾ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕೂಡಲ ಸಂಗಮದೇವ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಎ. ಮಹೇಶ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ

■ **ಹೀಲ್ ಸೌಹಾರ್ದ ವಿವಿಧೋದ್ದೇಶ ಸಹಕಾರ ಸಂಘ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಎಸ್.ಎನ್.ರೇಣುಕ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಆರ್ಟ್ ಆಫ್ ಲಿವಿಂಗ್ :** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6 ರಿಂದ, ಮಧ್ಯಾಹ್ನ 1 ರಿಂದ, ಮಧ್ಯಾಹ್ನ 3 ರಿಂದ.

■ **ವನಿತಾ ಸದನ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ವನಿತಾ ಸದನ, ಶ್ರೀಮತಿ ಸುಶೀಲಾಬಾಯಿ ನಾಗೇಶರಾವ್ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ ಅವರಿಂದ ಜಗನ್ನಾಥ ದಾಸರ ವಿರಚಿತ ಕೃತಿ 'ಫಲವಿದು ಬಾಳ್ವುದಕೆ' ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಧ್ವಜ ಸತ್ಯಾಗ್ರಹ ಸಮಿತಿ ಹಾಗೂ ಶ್ಯಗಲೇ ಶಿವರುದ್ರಮ್ಮ ಟ್ರಸ್ಟ್ :** ಸಂವಾದ ಕಾರ್ಯಕ್ರಮ, 'ಲೋಕ ವಿದ್ಯೆ ಅಥವಾ ದೇಸಿ ವಿದ್ಯೆ' ಕುರಿತು ವಾರಣಾಸಿಯ ವಿದ್ಯಾಶ್ರಮದ ಹಿರಿಯ ಗಾಂಧಿವಾದಿ ಹಾಗೂ ರೈತ ಚಳುವಳಿಗಾರ ಸುನಿಲ್ ಸಹಸ್ರಬುದ್ದೆ ಹಾಗೂ ಚಿತ್ರ ಸಹಸ್ರಬುದ್ದೆ ಅವರು ವಿಷಯ ಮಂಡನೆ, ಸ್ಥಳ: ಶ್ಯಾಗಲೆ ಹೌಸ್, 403 ಕಾಂಟೂರ್ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 5:45ಕ್ಕೆ

■ **ರಂಗಾಯಣ, ಮೈಸೂರು :** ಭಾರತೀಯ ರಂಗ ಸಂಗೀತೋತ್ಸವ, ಸಂಗೀತ ನಿರ್ದೇಶಕ ಕಲ್ಯಾಣಿ ಅವರಿಂದ ರಂಗ ಸಂಗೀತ ಮತ್ತು ರಂಗಗೀತೆಗಳು ಸ್ಥಳ: ಭೂಮಿಗೀತ, ಸಂಜೆ 6.30 ಗಂಟೆಗೆ.






ಅದ್ದೂರಿ ಮೈಸೂರು ದಸರಾಗೆ ಇನ್ನು ಕೇವಲ ನಾಲ್ಕು ದಿನಗಳು ಬಾಕಿ ಇವೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಮೈಸೂರಿನ ಪ್ರತಿಮೆಗಳ ವೃತ್ತಗಳು, ಪ್ರಮುಖ ರಸ್ತೆಗಳು, ಜಂಬೂ ಸವಾರಿ ಮಾರ್ಗ ಮತ್ತು ಕಟ್ಟಡಗಳಿಗೆ ದೀಪಾಲಂಕಾರ ಮಾಡುವ ಕಾರ್ಯವನ್ನು ತ್ವರಿತಗೊಳಿಸಿದೆ. ದಸರಾ ಸಂದರ್ಭದಲ್ಲಿ ನಿತ್ಯ ಸಂಜೆ 7 ರಿಂದ ರಾತ್ರಿ 10.30ರವರೆಗೆ ಜನ ಬೆಳಕಿನ ಚಿತ್ತಾರವನ್ನು ಸವಿಯಬಹುದಾಗಿದೆ. ಚಿತ್ರ: ಎಂ. ಎನ್. ಲಕ್ಷ್ಮೀನಾರಾಯಣ ಯಾದವ್

ಪುಷ್ಪ ರಾಶಿಯಲ್ಲಿ ಮೂಡಲಿದೆ ಭಾರತದ ರಾಷ್ಟ್ರಪತಿ ಭವನ!

● ದಸರಾ ಫಲಪುಷ್ಪ ಪ್ರದರ್ಶನದಲ್ಲಿ ನಾನಾ ಹೂವುಗಳಿಂದ ನಿರ್ಮಾಣ ● ರಾಷ್ಟ್ರಪತಿಗಳಿಂದ ದಸರಾ ಉದ್ಘಾಟನೆ ವಿಶೇಷ





ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಸೆ.21– ಇದೇ ಮೊದಲ ಬಾರಿಗೆ ನಾಡಹಬ್ಬ ದಸರಾ ಮಹೋತ್ಸವವನ್ನು ಉದ್ಘಾಟಿಸಲು ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿಗಳು ಆಗಮಿಸುತ್ತಿದ್ದಾರೆ. ಕಾಕತಾಳೀಯವೆಂಬಂತೆ ಮೈಸೂರಲ್ಲಿ ದೆಹಲಿಯಲ್ಲಿರುವ ರಾಷ್ಟ್ರಪತಿ ಭವನ ತಲೆ ಎತ್ತುತ್ತಿದೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರ ಕುಪ್ಪಣ್ಣ ಪಾರ್ಕ್‌ನಲ್ಲಿ ಏರ್ಪಡಿಸುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ರಾಷ್ಟ್ರಪತಿಗಳ ನೆಲೆ 'ರಾಷ್ಟ್ರಪತಿ ಭವನ' ಜನಾಕರ್ಷಣೀಯವಾಗಲಿದೆ. ಲಕ್ಷಾಂತರ ಹೂವುಗಳಿಂದ ರಾಷ್ಟ್ರಪತಿ ಭವನ ಅನಾವರಣಗೊಳ್ಳಲಿದ್ದು, 10 ದಿನವೂ ಪ್ರವಾಸಿಗರ ಕಣ್ಮನ ಸೆಳೆಯಲಿವೆ.

ದಸರಾ ಮಹೋತ್ಸವ ಉದ್ಘಾಟನೆಗೆ ಕೇವಲ 4 ದಿನ ಬಾಕಿಯಿದ್ದು, ಕುಪ್ಪಣ್ಣ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತಾ ಕಾರ್ಯ ಭರದಿಂದ ಸಾಗಿದೆ. ಗಾಜಿನ ಮನೆಯಲ್ಲಿ ರಾಷ್ಟ್ರಪತಿ ಭವನ ನಿರ್ಮಾಣ ಮಾಡಲಾಗುತ್ತಿದ್ದು, ಅದಕ್ಕಾಗಿ ಕಬ್ಬಿಣದ ಸಲಾಕೆಗಳ ಜೋಡಣಾ ಕಾರ್ಯ ನಡೆದಿದೆ. 50 ಅಡಿ ಅಗಲ, 35 ಅಡಿ ಎತ್ತರದ ರಾಷ್ಟ್ರಪತಿ ಭವನ ಪ್ರತಿಕೃತಿಗೆ ಒಂದು ಗುಚ್ಛದಲ್ಲಿ 30 ಗುಲಾಬಿ ಹೂವಿರುವ ಒಟ್ಟು 9 ಸಾವಿರ ಹೂಗುಚ್ಛ ಹಾಗೂ ಇತರೆ 30 ಸಾವಿರ ಹೂಗುಚ್ಛ ಬಳಸಲಾಗುತ್ತಿದೆ. ಪ್ರತಿ ಹೂಗುಚ್ಛದಲ್ಲಿ 10ರಿಂದ 20 ಗುಲಾಬಿ ಹೂಗಳಿದ್ದು, ಲಕ್ಷಕ್ಕೂ ಹೆಚ್ಚು ಗುಲಾಬಿ ಹೂಗಳನ್ನು ಇದರಲ್ಲಿ ಬಳಕೆ ಮಾಡಲಾಗುತ್ತಿದೆ. ಒಟ್ಟು 2,70 ಲಕ್ಷ ಗುಲಾಬಿ ಹಾಗೂ 3 ಲಕ್ಷ ಇತರೆ ಹೂವನ್ನು ಬಳಸಲಾಗುತ್ತಿದೆ. ತಾಜಾತನ ಕಾಪಾಡಿಕೊಳ್ಳಲು 5 ದಿನದ ನಂತರ ಮತ್ತೊಮ್ಮೆ ಹೂವು ಬದಲಿಸಲು ನಿರ್ಧರಿಸಲಾಗಿದೆ.

32 ಜಾತಿಯ ಹೂಗಳ ಬಳಕೆ: ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದಲ್ಲಿ 32 ಜಾತಿಯ ವಿವಿಧ ಹೂಗಳನ್ನು ಈಗಾಗಲೇ 40 ಸಾವಿರ ಕುಂಡಗಳಲ್ಲಿ ಬೆಳೆಸಲಾಗಿದ್ದು, ಹೊರ ರಾಜ್ಯಗಳಿಂದ ತಂದಿರುವ ಹೂವುಗಳುಳ್ಳ 5 ಸಾವಿರ ಕುಂಡಗಳನ್ನು ಕುಪ್ಪಣ್ಣ ಪಾರ್ಕ್‌ನಲ್ಲಿ ಜೋಡಿಸಲಾಗುತ್ತಿದೆ. ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯಾ ಸೇರಿದಂತೆ ಇನ್ನಿತರ ಹೂವುಗಳು ಕಣ್ಮನ ಸೆಳೆಯಲಿವೆ.

ಇದರೊಂದಿಗೆ ಗುಲಾಬಿ, ಜರ್ಬೆರಾ, ಆರ್ಕಿಡ್ಸ್, ಬ್ಲೂ ಡೈಸಿ, ಕ್ರೈಸಾಂಥಿಮಮ್, ಡ್ರೆಸಿನಾ ಹೂಗಳು ಫಲಪುಷ್ಪ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ನೀಡಲಿವೆ.

10 ದಿನಗಳ ಕಾಲ ಆಯೋಜನೆ: ಫಲಪುಷ್ಪ ಪ್ರದರ್ಶನ ಸೆ.26ರಿಂದ ಅ.5ರವರೆಗೆ ನಡೆಯಲಿದ್ದು, ಸೆ.26ರಂದು ಸಚಿವ ಮುನಿರತ್ನ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. 2 ವರ್ಷದ ಬಳಿಕ ನಡೆಯುತ್ತಿರುವ ದಸರಾ ಫಲಪುಷ್ಪ ಪ್ರದರ್ಶನ ಈ ಬಾರಿ ಮನಸೂರೆಗೊಳ್ಳಲಿದೆ.

ಹೂವಿನಿಂದ ವಿವಿಧ ಆಕೃತಿ: ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ಬಗೆ ಬಗೆಯ ಹೂಗಳಿಂದ ವಿಘ್ನೇಶ್ವರ, ಚಿತ್ರನಟ ಪುನೀತ್ ರಾಜ್‌ಕುಮಾರ್, ಜೇನು ನೊಣ, ಕೃಷಿ ಸಂಬಂಧಿತ ಹಲವು ಪ್ರತಿಕೃತಿಗಳು ನಿರ್ಮಿಸಲಾಗುತ್ತದೆ. ಇವುಗಳು ನೋಡುಗರ ಕಣ್ಮನ ಸೆಳೆಯಲಿವೆ. ಇವಿಷ್ಟೇ ಅಲ್ಲದೇ ಉದ್ಯಾನದ ಆಯ್ದ ಸ್ಥಳಗಳಲ್ಲಿ, ವಾಕಿಂಗ್ ಪಾಥ್‌ನಲ್ಲಿ ವಿವಿಧ ಮಾದರಿಯ ಹೂವಿನ ಕುಂಡಗಳನ್ನು ಜೋಡಿಸಿ ಸೆಲ್ಫಿ ಸ್ಪಾಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಫಲಪುಷ್ಪ ಪ್ರದರ್ಶನದ ಜತೆಗೆ ಕುಪ್ಪಣ್ಣ ಉದ್ಯಾನದಲ್ಲಿರುವ ಸಂಗೀತ ಕಾರಂಜಿಯೂ ಪ್ರಮುಖ ಆಕರ್ಷಣೆಯಾಗಿದ್ದು ನಿತ್ಯ 7ರಿಂದ 9ಗಂಟೆಯವರೆಗೆ ಜನರನ್ನು ರಂಜಿಸಲಿದೆ. ಹಾಗೆಯೇ ಮಕ್ಕಳಿಗಾಗಿ ಅಮ್ಯೂಸ್ಮೆಂಟ್ ಪಾರ್ಕ್ ವ್ಯವಸ್ಥೆಯನ್ನು ಮಾಡಲಾಗಿದ್ದು, ವಿವಿಧ ಆಟೋಟಗಳಲ್ಲಿ ಪಾಲ್ಗೊಳ್ಳಬಹುದಾಗಿದೆ. ಜತೆಗೆ ತಿಂಡಿ-ತಿನಿಸುಗಾಗಿ ಫುಡ್‌ಕೋರ್ಟ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪ್ರಾಯೋಜಕರು: ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಕೆಲವು ಆಕೃತಿಗಳಿಗಾಗಿ ಪ್ರಾಯೋಜಕತ್ವ ನೀಡಲು ಕೆಲವು ಸಂಸ್ಥೆಗಳು ಮುಂದಾಗಿವೆ. ಸುದ್ದಿ ವಾಹಿನಿಯೊಂದು ಪ್ರವೇಶ ದ್ವಾರದ ಬಳಿ ಹೂವಿನ ಆಕೃತಿ ನಿರ್ಮಿಸಲು ಮುಂದಾಗಿದ್ದರೆ, ಬ್ಯಾಂಕ್ ವತಿಯಿಂದ ಕೆಲವು ಆಕೃತಿ, ಬಟ್ಟೆ ಮಳಿಗೆಯೊಂದು ಆಕೃತಿಗೆ ಪ್ರಾಯೋಜಕತ್ವನೀಡಲು ಮುಂದಾಗಿದ್ದಾರೆ.

ಜೋಡಣೆ: ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ಸಿ.ನವೀನ್ ನೇತೃತ್ವದಲ್ಲಿ ಕುಪ್ಪಣ್ಣ ಪಾರ್ಕ್‌ನಲ್ಲಿ ಹೂವಿನ ಕುಂಡಗಳ ಜೋಡಣಾ ಕಾರ್ಯ ಬಿರುಸಾಗಿ ಸಾಗುತ್ತಿದೆ. ಈಗಾಗಲೇ ಫುಡ್ ಜೋನ್‌ನಲ್ಲಿ ಮಳಿಗೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಹಂತಕ್ಕೆ ತಲುಪಿದೆ. ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಆಟಿಕೆಗಳ ಜೋಡಣೆಯೂ ಸಾಗುತ್ತಿದೆ.

> **“ ಮುದ ನೀಡಲಿದೆ**
>
> ದಸರಾ ಫಲಪುಷ್ಪ ಪ್ರದರ್ಶನ ಈ ಬಾರಿ ಪ್ರವಾಸಿಗರಿಗೆ ಮುದ ನೀಡಲಿದೆ. ವಿಭಿನ್ನವಾಗಿ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗುತ್ತಿದ್ದು, ದಸರಾ ಉದ್ಘಾಟನೆಗೆ ರಾಷ್ಟ್ರಪತಿಗಳ ಆಗಮನ ಹಿನ್ನೆಲೆಯಲ್ಲಿ ದೆಹಲಿಯಲ್ಲಿರುವ ರಾಷ್ಟ್ರಪತಿ ಭವನವನ್ನು ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವುಗಳಿಂದ ನಿರ್ಮಿಸಲಾಗುತ್ತಿದೆ. 32 ಬಗೆಯ ಹೂವುಗಳನ್ನು 40 ಸಾವಿರ ಕುಂಡಗಳಲ್ಲಿ ಬೆಳೆಸಲಾಗಿದ್ದು, ಕುಪ್ಪಣ್ಣ ಪಾರ್ಕ್‌ನಲ್ಲಿ ಜೋಡಣೆ ಮಾಡಲಾಗುತ್ತಿದೆ. **–ಕೆ.ರುದ್ರೇಶ್, ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ**

ಕಡೆಗೂ ರಿಂಗ್ ರಸ್ತೆ ಕತ್ತಲು ನಿವಾರಣೆಗೆ ಕ್ರಮ

ಲೈಟ್ ಕಂಬಗಳಿಗೆ ಕೇಬಲ್ ಅಳವಡಿಕೆ ಕಾರ್ಯ ಆರಂಭ



ಮೈಸೂರು,ಸೆ.21(ಆರ್‌ಕೆ)–ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಆರಂಭವಾಗಿದೆ. ಇದೀಗ ಮೈಸೂರಿನ ರಿಂಗ್ ರಸ್ತೆಯ ದೀಪಗಳಿಗೆ ಕೇಬಲ್ ಅಳವಡಿಸುವ ಕಾಮಗಾರಿ ಭರದಿಂದ ಆರಂಭವಾಗಿದೆ.

ಇಡೀ ಮೈಸೂರು ನಗರವೇ ವಿದ್ಯುತ್ ದೀಪಾ ಲಂಕಾರದಿಂದ ಜಗಮಗಿಸಲು ಸಜ್ಜಾಗಿರುವಾಗ ಹೊರ ವರ್ತುಲ ರಸ್ತೆ ಮಾತ್ರ ಕಗ್ಗತ್ತಲಿಂದ ಕೂಡಿದೆ ಎಂದು 'ಮೈಸೂರು ಮಿತ್ರ' ಇಂದು(ಸೆ.21) ವಿಸ್ತೃತ ವರದಿ ಪ್ರಕಟಿಸಿತ್ತು. ಇದರ ಬೆನ್ನಲ್ಲೇ ಮೈಸೂರು ಮಹಾನಗರ ಪಾಲಿಕೆಯು ಬುಧವಾರದಿಂದ ತರಾ ತುರಿಯಲ್ಲಿ ಕಾಮಗಾರಿಯನ್ನು ಆರಂಭಿಸಿದೆ. 42.5 ಕಿ.ಮೀ. ರಿಂಗ್ ರಸ್ತೆಯ ದೀಪದ ಕಂಬಗಳಿಗೆ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಕಾರ್ಯ ಭರದಿಂದ ಸಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು 12 ಕೋಟಿ ರೂ. ಅನುದಾನ ನೀಡಲು ಸಮ್ಮತಿಸಿದ್ದು, ಈಗಾಗಲೇ 6 ಕೋಟಿ ಬಿಡುಗಡೆ ಮಾಡಿದೆ. ಆ ಅನುದಾನದಲ್ಲಿ ಕೇಬಲ್ ಅಳವಡಿಸುವ ಕಾರ್ಯವನ್ನು ಮೈಸೂರು ಮಹಾನಗರ ಪಾಲಿಕೆಯು ಟೆಂಡರ್ ಮೂಲಕ ಬೆಂಗಳೂರು ಮೂಲದ ಗೀತಾ ಎಲೆಕ್ಟ್ರಿಕಲ್ಸ್ ಸಂಸ್ಥೆಗೆ 6.64 ಕೋಟಿ ರೂ.ಗೆ ಗುತ್ತಿಗೆ ಕಾರ್ಯಾದೇಶ ನೀಡಿರುವುದರಿಂದ ಗುತ್ತಿಗೆದಾರರು ಇಂದಿನಿಂದ ರಿಂಗ್ ರಸ್ತೆಗೆ ಭೂಗತ ಕೇಬಲಿಂಗ್ ಕೆಲಸವನ್ನು ಆರಂಭಿಸಿದ್ದಾರೆ. ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಆಸ್ಪತ್ರೆಯಿಂದ ಬಲಭಾಗದ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಡೆಗೆ ರಿಂಗ್ ರಸ್ತೆಯ ದೀಪ ಕಂಬಗಳಿರುವ ಮಾರ್ಗದಲ್ಲಿ ಕೇಬಲ್ ಅಳವಡಿಕೆ ಆರಂಭವಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಎಲೆಕ್ಟ್ರಿಕಲ್ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಿಂಧು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ ಇಲ್ಲಿನ ದೀಪದ ಕಂಬಗಳಿಗೆ ಎಲ್‌ಇಡಿ ಬಲ್ಬ್ ಅಳವಡಿಸಿ, ರಿಂಗ್ ರಸ್ತೆಯ ಅಲ್ಲಲ್ಲಿ ಸ್ವಿಚ್ ಬಾಕ್ಸ್‌ಗಳನ್ನು ಅಳವಡಿಸಲು ಪ್ರತ್ಯೇಕ ಟೆಂಡರ್ ಅನ್ನು ಇಷ್ಟರಲ್ಲೇ ಕರೆದು ವರ್ಕ್ ಆರ್ಡರ್ ಕೊಡಲಾಗುವುದು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಒಪ್ಪಿಸಲಾಗಿರುವ ರಿಂಗ್ ರಸ್ತೆಯಲ್ಲಿ 2135 ದೀಪದ ಕಂಬಗಳಿವೆ. ಒಟ್ಟು 4818 ಎಲ್‌ಇಡಿ ಬಲ್ಬಗಳನ್ನು ಅಳವಡಿಸಬೇಕಾಗಿದ್ದು, ಸ್ಮಾರ್ಟ್ ಮೀಟರ್‌ನಿಂದ ಸೆಂಟ್ರಲೈಸ್ಡ್ ಕಂಟ್ರೋಲ್ ಅಂಡ್ ಮಾನಿಟರಿಂಗ್ ಸಿಸ್ಟಂ ಮೂಲಕ ಈ ದೀಪಗಳನ್ನು ಪಾಲಿಕೆಯು ನಿರ್ವಹಣೆ ಮಾಡಲಿದೆ. 70 ಸಿಸಿಎಂಎಸ್ ಪಾಯಿಂಟ್‌ಗಳ ಮೂಲಕ ದಿನನಿತ್ಯ ಎಲ್‌ಇಡಿ ಲೈಟ್‌ಗಳ ಆನ್ ಅಂಡ್ ಆಫ್ ಪ್ರಕ್ರಿಯೆ ಮಾಡಬೇಕಾಗಿದೆ. ಎಲ್‌ಇಡಿ ಬಲ್ಬ್ ಅಳವಡಿಸುವ ಗುತ್ತಿಗೆದಾರರೇ ರಿಂಗ್ ರಸ್ತೆ ದೀಪಗಳನ್ನು ನಿರ್ವಹಿಸಬೇಕಾಗಿದ್ದು, ದುರಸ್ತಿ, ಬಲ್ಬ್ ಬದಲಾಯಿಸುವುದು, ಸೇರಿದಂತೆ ಎಲ್ಲವನ್ನು ನಿಭಾಯಿಸಬೇಕಾಗಿದೆ. ಮೈಸೂರು ಮಹಾನಗರ ಪಾಲಿಕೆಯು ತಿಂಗಳಿಗೊಮ್ಮೆ ಬರುವ ವಿದ್ಯುತ್ ಬಿಲ್ ಅನ್ನು ಚೆಸ್ಕಾಂಗೆ ಪಾವತಿಸಲಿದೆ. ಒಟ್ಟಾರೆ ದಸರಾ ಮಹೋತ್ಸವದೊಳಗೆ 42.5 ಕಿ.ಮೀ. ಉದ್ದದ ಮೈಸೂರು ರಿಂಗ್ ರಸ್ತೆಯ ಎಲ್ಲಾ ಬೀದಿದೀಪಗಳೂ ಬೆಳಗಲಿವೆ ಎಂದು ಸಿಂಧು ತಿಳಿಸಿದ್ದಾರೆ.

> **“ ಮೈಸೂರು ಮಹಾನಗರ ಪಾಲಿಕೆಯು ತಿಂಗಳಿಗೊಮ್ಮೆ ಬರುವ ವಿದ್ಯುತ್ ಬಿಲ್ ಅನ್ನು ಚೆಸ್ಕಾಂಗೆ ಪಾವತಿ ಸಲಿದೆ. ಒಟ್ಟಾರೆ ದಸರಾ ಮಹೋತ್ಸವದೊಳಗೆ 42.5 ಕಿ.ಮೀ. ಉದ್ದದ ಮೈಸೂರು ರಿಂಗ್ ರಸ್ತೆಯ ಎಲ್ಲಾ ಬೀದಿದೀಪಗಳೂ ಬೆಳಗಲಿವೆ.**
>
> **–ಸಿಂಧು, ಇಂಜಿನಿಯರ್**

ವಸ್ತುಪ್ರದರ್ಶನ, ಮಾರಾಟ ಮೇಳ

ಮೈಸೂರು,ಸೆ.21–ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸೆ.27ರಿಂದ ಅ.1ರವರೆಗೆ ಮಹಿಳಾ ದಸರಾ–2022ರ ಪ್ರಯುಕ್ತ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ರೈಲು ನಿಲ್ದಾಣದ ಮುಂಭಾಗದಲ್ಲಿರುವ ಜೆ.ಕೆ.ಗ್ರೌಂಡ್ ಮೈದಾನದಲ್ಲಿ ಏರ್ಪಡಿಸಲಾಗಿದೆ. ವಸ್ತುಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಸ್ತ್ರೀಶಕ್ತಿ ಸ್ವ–ಸಹಾಯ ಗುಂಪುಗಳ ಸದಸ್ಯರು ಸ್ತ್ರೀಶಕ್ತಿ ಮಹಿಳಾ ಉದ್ಯಮಿಗಳಿಂದ ತಯಾರಿಸಿದ ವಿಶೇಷ ಮತ್ತು ಅತ್ಯುತ್ತಮ ಕರಕುಶಲ ವಸ್ತುಗಳು, ಉತ್ಕೃಷ್ಟ ಪೇಂಟಿಂಗ್ಸ್, ಕೈಕಸೂತಿ/ಕೈಮಗ್ಗ ಸೀರೆ/ಉಡುಪುಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತಿದೆ. ಕರಕುಶಲ ವಸ್ತುಗಳು, ಟೆರಾಕೋಟ ಪಾಟರೀಸ್ (ಮನೆ ಅಲಂಕಾರಿಕ ವಸ್ತುಗಳು) ಕೈಮಗ್ಗ ಸೀರೆಗಳು (ಕೈಮಗ್ಗ ರೇಷ್ಮೆ ಸೀರೆಗಳು), ಡ್ರೆಸ್ ಮೆಟಿರಿಯಲ್ಸ್, ರೆಡಿಮೇಡ್ ಬಟ್ಟೆಗಳು, ಶುದ್ಧ ಹಾಗೂ ಸವಿ ರುಚಿಯ ತಿಂಡಿ ತಿನಿಸುಗಳು, ಕೃತಕ ಆಭರಣಗಳು, ಪೇಂಟಿಂಗ್ಸ್, ಹರ್ಬಲ್ ಮತ್ತು ಆಯುರ್ವೇದ ಉತ್ಪನ್ನಗಳು) ಎಂಬ್ರಾಯಿಡರಿ/ ಕೈಕಸೂತಿ ಸೀರೆಗಳು ಗಿಫ್ಟ್ ಐಟಮ್ಸ್/ ಸಾಫ್ಟ್ ಟಾಯ್ಸ್ ಗೃಹೋಪಯೋಗಿ ಅಲಂಕಾರಿಕ ವಸ್ತುಗಳು ಅತೀ ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಮಹಿಳಾ ದಸರಾ ಉಪ ಸಮಿತಿ ಕಾರ್ಯಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧ್ವನಿ–ಬೆಳಕು ತಾತ್ಕಾಲಿಕ ರದ್ದು

ಮೈಸೂರು, ಸೆ.21–ದಸರಾ ಮಹೋತ್ಸವದ ಪೂರ್ವಭಾವಿ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಹಾಗೂ ಅರಮನೆ ಆವರಣದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಹಿನ್ನೆಲೆಯಲ್ಲಿ ಸೆ.21ರಿಂದ ಅ.19ರವರೆಗೆ ಅರಮನೆ ಆವರಣದಲ್ಲಿ ನಡೆಯುವ 'ಧ್ವನಿ ಮತ್ತು ಬೆಳಕು' ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು ದಸರಾ ಭದ್ರತೆಗೆ ಹೊರಜಿಲ್ಲೆಯ 3,079 ಪೊಲೀಸರ ನಿಯೋಜನೆ

ಮೈಸೂರು, ಸೆ. 21(ಆರ್‌ಕೆ)– ಈ ಬಾರಿಯ ದಸರಾ ಬಂದೋಬಸ್ತ್‌ಗಾಗಿ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರ ಜೊತೆಗೆ ಹೊರ ಜಿಲ್ಲೆಗಳ ಒಟ್ಟು 3,079 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ.




ಮೊದಲ ಹಂತದಲ್ಲಿ ಸೆಪ್ಟೆಂಬರ್ 24ರಂದು ಓರ್ವ ಎಸ್ಪಿ, ನಾಲ್ವರು ಡಿವೈಎಸ್ಪಿ, 14 ಇನ್ಸ್‌ಪೆಕ್ಟರ್, 55 ಸಬ್ ಇನ್ಸ್‌ಪೆಕ್ಟರ್, 23 ಎಎಸ್‌ಐ ಸೇರಿದಂತೆ 610 ಸಿವಿಲ್, 630 ಸಂಚಾರ, 46 ಸಿಎಆರ್, ಡಿಎಆರ್, 15 ಕೆಎಸ್‌ಆರ್‌ಪಿ ಪೊಲೀಸರು ಮೈಸೂರಿಗೆ ಆಗಮಿಸುವರು. ಸೆ.27ರಂದು 151 ಸಿವಿಲ್ ಮತ್ತು 65 ಸಂಚಾರ ಪೊಲೀಸರು ಸೇರಿ ಎರಡನೇ ಹಂತದಲ್ಲಿ 216 ಮಂದಿ ಮೈಸೂರು ತಲುಪಲಿದ್ದು, ದಸರಾ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವರು. 3ನೇ ಹಂತದಲ್ಲಿ ಅಕ್ಟೋಬರ್ 3ರಂದು ಮೂವರು ಅಡಿಷನಲ್ ಎಸ್ಪಿಗಳು, 18 ಡಿವೈಎಸ್ಪಿಗಳು, 55 ಇನ್ಸ್‌ಪೆಕ್ಟರ್, 115 ಸಬ್‌ಇನ್ಸ್‌ಪೆಕ್ಟರ್ ಸೇರಿ 1,391 ಸಿವಿಲ್, 157 ಸಂಚಾರ ಹಾಗೂ 10 ಕೆಎಸ್‌ಆರ್‌ಪಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವರದಿ ಮಾಡಿಕೊಳ್ಳುವರು. ಹೊರ ಜಿಲ್ಲೆಗಳಿಂದ ಬರುವ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳಿಗೆ ಮೈಸೂರಿನ ಕಲ್ಯಾಣ ಮಂಟಪ, ಶಾಲೆ, ಹೋಟೆಲ್, ಹಾಸ್ಟೆಲ್‌ಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಊಟ–ತಿಂಡಿಯನ್ನೂ ಮೈಸೂರು ನಗರ ಪೊಲೀಸ್ ಘಟಕದಿಂದ ಪೂರೈಸಲಾಗುವುದು. ಅವರು ವರದಿ ಮಾಡಿಕೊಳ್ಳುತ್ತಿದ್ದಂತೆಯೇ ಹಿರಿಯ ಪೊಲೀಸ್ ಅಧಿಕಾರಿಗಳು ದಸರಾ ಕಾರ್ಯಕ್ರಮಗಳಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಬಗ್ಗೆ ಮಾಹಿತಿ ನೀಡಲಿದ್ದಾರೆ.

ಅಂತೂ ವ್ಯವಸ್ಥಿತಗೊಂಡ ದಸರಾ ವೆಬ್‌ಸೈಟ್

'ಮೈಸೂರು ಮಿತ್ರ' ವರದಿ ಫಲಶ್ರುತಿ


ಮೈಸೂರು, ಸೆ. 21(ಆರ್‌ಕೆ)– 2022ರ ದಸರಾ ವೆಬ್‌ಸೈಟ್‌ನಲ್ಲಿದ್ದ ದೋಷಗಳ ಸರಿಪಡಿಸಿರುವ ವೆಬ್ ಡಿಸೈನರ್, ತಪ್ಪುಗಳ ಸರಿಪಡಿಸಿ, ಉಪಯುಕ್ತ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ಮೂಲಕ ಪ್ರವಾಸಿಗರ ಸ್ನೇಹಿ ದಸರಾ ಮಾಹಿತಿಯನ್ನು ನೀಡಿದ್ದಾರೆ.



'ಮೈಸೂರು ಮಿತ್ರ'ನ ಇಂದಿನ (ಸೆ. 21) ಸಂಚಿಕೆಯಲ್ಲಿ ಈ ಬಗ್ಗೆ ಸುದ್ದಿ ಪ್ರಕಟವಾಗಿತ್ತು. ವೆಬ್‌ಸೈಟ್‌ನಲ್ಲಿದ್ದ ಲೋಪದೋಷಗಳನ್ನು ಸವಿವರವಾಗಿ ವರದಿ ಮಾಡಲಾಗಿತ್ತು. ಇದರಿಂದ ಎಚ್ಚೆತ್ತ ವಾರ್ತಾ ಮತ್ತು ಪ್ರಚಾರ ಇಲಾಖೆಯು, ವೆಬ್ ಡಿಸೈನರ್ ಮೂಲಕ ತಪ್ಪುಗಳನ್ನು ಸರಿಪಡಿಸಿ ಮೈಸೂರು ದಸರಾ ಮಹೋತ್ಸವ–2022ರ ಕಾರ್ಯಕ್ರಮಗಳು, ಹಿನ್ನೆಲೆ, ಪ್ರವಾಸಿ ತಾಣಗಳು ಇತ್ಯಾದಿ ಉಪಯುಕ್ತ ಮಾಹಿತಿಯನ್ನು ನೀಡಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು, ಕಲಾವಿದರು, ಸ್ಥಳ, ಸಮಯ ಸೇರಿದಂತೆ ಪ್ರವಾಸಿಗರಿಗೆ ಅನುಕೂಲವಾಗುವಂತಹ ಹಲವು ಸರಿಯಾದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಒದಗಿಸಲಾಗಿದ್ದು, ಆಹಾರ ಮೇಳ, ಯೋಗ ದಸರಾ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳ ಸಮಗ್ರ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ.

ದಸರಾದಲ್ಲಿ ಮೈಸೂರಿಗೆ ವಿಶೇಷ ರೈಲುಗಳ ಓಡಾಟ

ಮೈಸೂರು,ಸೆ.21(ಆರ್‌ಕೆಬಿ)–ಮೈಸೂರು ದಸರಾ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ನೈರುತ್ಯ ರೈಲ್ವೆಯು ಕೆಎಸ್‌ಆರ್ ಬೆಂಗಳೂರು ಮತ್ತು ಮೈಸೂರು, ಚಾಮರಾಜನಗರ–ಮೈಸೂರು ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ನಿರ್ಧರಿಸಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.



ಬೆಂಗಳೂರು–ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲುಗಳು

● ರೈಲು ಸಂಖ್ಯೆ 06215 ಮೈಸೂರು– ಕೆಎಸ್‌ಆರ್ ಬೆಂಗಳೂರು ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷ, ಮೈಸೂರಿಂದ ಅ.5ರಂದು ರಾತ್ರಿ 11–30ಕ್ಕೆ ಹೊರಟು ಮರುದಿನ, ಅಂದರೆ ಅ.6ರಂದು 2–45ಕ್ಕೆ ಕೆಎಸ್‌ಆರ್ ಬೆಂಗಳೂರು ನಿಲ್ದಾಣ ತಲುಪಲಿದೆ.

● ರೈಲು ಸಂಖ್ಯೆ 06216 ಕೆಎಸ್‌ಆರ್ ಬೆಂಗಳೂರು–ಮೈಸೂರು ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷ ರೈಲು ಕೆಎಸ್‌ಆರ್ ಬೆಂಗಳೂರಿನಿಂದ ಅ.6ರಂದು 3 ಗಂಟೆಗೆ ಹೊರಟು ಅದೇ ದಿನ 6:20ಕ್ಕೆ ಮೈಸೂರಿಗೆ ತಲುಪುತ್ತದೆ. ಈ ರೈಲಿಗೆ ನಾಯಂಡಹಳ್ಳಿ, ಕೆಂಗೇರಿ, ಹೆಜ್ಜಾಲ, ಬಿಡದಿ, ರಾಮನಗರ, ಚನ್ನಪಟ್ಟಣ, ಶೆಟ್ಟಿಹಳ್ಳಿ, ಮದ್ದೂರು, ಹನಕೆರೆ, ಮಂಡ್ಯ, ಯಲಿಯೂರು, ಬ್ಯಾಡರಹಳ್ಳಿ, ಚಂದಗಿರಿಕೊಪ್ಪಲು, ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ನಾಗನಹಳ್ಳಿಯಲ್ಲಿ ನಿಲುಗಡೆ ಇರುತ್ತದೆ.

ಈ ರೈಲು 18 ಚೇರ್ ಕಾರ್‌ಗಳು ಮತ್ತು 2 ಎರಡನೇ ದರ್ಜೆಯ ಲಗೇಜ್ ಮತ್ತು ಬ್ರೇಕ್ ವ್ಯಾನ್‌ಗಳ ಹೊಂದಿರುತ್ತದೆ. ರೈಲಿನ ಎಸಿ ಕೋಚ್‌ಗಳು ಮುಚ್ಚಿದ ಸ್ಥಿತಿಯಲ್ಲಿ ಇರುತ್ತವೆ.

ಚಾಮರಾಜನಗರ–ಮೈಸೂರು–ಚಾಮರಾಜನಗರ ಎಕ್ಸ್‌ಪ್ರೆಸ್ ರೈಲು

● ರೈಲು ಸಂಖ್ಯೆ 07302 ಮೈಸೂರು–ಚಾಮರಾಜನಗರ ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷ ರೈಲು ಸೆ.30ರಿಂದ ಅ.6ರವರೆಗೆ ಮೈಸೂರಿನಿಂದ ಬೆಳಗ್ಗೆ 8–20ಕ್ಕೆ ಹೊರಟು, ಬೆಳಗ್ಗೆ 10 ಗಂಟೆಗೆ ಚಾಮರಾಜನಗರವನ್ನು ತಲುಪುತ್ತದೆ. ಹಿಂದಿರುಗುವ ದಿಕ್ಕಿನಲ್ಲಿ ರೈಲು ಸಂಖ್ಯೆ 07301 ಚಾಮರಾಜನಗರ – ಮೈಸೂರು ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷ ರೈಲು ಸೆ.30ರಿಂದ ಅ.6 ರವರೆಗೆ ಚಾಮರಾಜನಗರದಿಂದ ಬೆಳಗ್ಗೆ 10–55ಕ್ಕೆ ಹೊರಟು ಮಧ್ಯಾಹ್ನ 12–25ಕ್ಕೆ ಮೈಸೂರು ತಲುಪಲಿದೆ.

ಈ ರೈಲು ಚಾಮರಾಜಪುರಂ, ಅಶೋಕಪುರಂ, ಕಡಕೊಳ, ತಾಂಡವಪುರ, ಸುಜಾತಪುರಂ, ನಂಜನಗೂಡು ಟೌನ್, ಚಿನ್ನದಗುಡಿ ಹುಂಡಿ, ನರಸಾಂಬುಧಿ, ಕವಲಂದೆ, ಕೊಣನೂರು, ಬದನಗುಪ್ಪೆ ಮತ್ತು ಮರಿಯಾಲ ಗಂಗವಾಡಿ ನಿಲ್ದಾಣಗಳಲ್ಲಿ ಎರಡೂ ದಿಕ್ಕುಗಳಲ್ಲಿ ನಿಲುಗಡೆಯಾಗಲಿದೆ. ಈ ರೈಲು 16 ಎರಡನೇ ದರ್ಜೆಯ ಕೋಚ್‌ಗಳು, 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳನ್ನು ಹೊಂದಿರುತ್ತದೆ. ರೈಲಿನ ಎಸಿ ಕೋಚ್‌ಗಳು ಮುಚ್ಚಿದ ಸ್ಥಿತಿಯಲ್ಲಿ ಇರುತ್ತವೆ.

ರೈಲು ಸಂಖ್ಯೆ 06247 ಮೈಸೂರು–ಚಾಮರಾಜನಗರ ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷವು ಮೈಸೂರಿನಿಂದ ಅ.5ರಂದು ರಾತ್ರಿ 11–30 ಗಂಟೆಗೆ ಹೊರಟು ಮಧ್ಯರಾತ್ರಿ 1–10ಕ್ಕೆ ಚಾಮರಾಜನಗರವನ್ನು ತಲುಪಲಿದೆ.

ರೈಲು ಸಂಖ್ಯೆ 06248 ಚಾಮರಾಜನಗರ– ಮೈಸೂರು ಕಾಯ್ದಿರಿಸದ ಎಕ್ಸ್‌ಪ್ರೆಸ್ ವಿಶೇಷವು ಅ.6ರಂದು ಬೆಳಗ್ಗೆ 5 ಗಂಟೆಗೆ ಚಾಮರಾಜನಗರದಿಂದ ಹೊರಟು ಬೆಳಗ್ಗೆ 6–50ಕ್ಕೆ ಮೈಸೂರು ತಲುಪಲಿದೆ. ಈ ರೈಲು ಎರಡೂ ದಿಕ್ಕುಗಳಲ್ಲಿ ಚಾಮರಾಜಪುರಂ, ಅಶೋಕಪುರಂ, ಕಡಕೊಳ, ತಾಂಡವಪುರ, ಸುಜಾತಪುರಂ, ನಂಜನಗೂಡು ಟೌನ್, ಚಿನ್ನದಗುಡಿ ಹುಂಡಿ, ನರಸಾಂಬುಧಿ, ಕವಲಂದೆ, ಕೊಣನೂರು, ಬದನಗುಪ್ಪೆ ಮತ್ತು ಮರಿಯಾಲ ಗಂಗವಾಡಿ ರೈಲು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ. ಈ ರೈಲು 13 ಸಾಮಾನ್ಯ 2ನೇ ದರ್ಜೆ ಕೋಚ್‌ಗಳು ಮತ್ತು 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳನ್ನು ಹೊಂದಿರುತ್ತದೆ.

ರೈಲುಗಳ ತಾತ್ಕಾಲಿಕ ನಿಲುಗಡೆಗಳು

ಸೆ.29ರಿಂದ ಅ.6ರವರೆಗೆ ಎರಡೂ ಕಡೆಯಿಂದ ಪ್ರಯಾಣ ಪ್ರಾರಂಭಿಸುವ ರೈಲು ಸಂಖ್ಯೆ 17301/17302 ಮೈಸೂರು–ಧಾರವಾಡ–ಮೈಸೂರು ಎಕ್ಸ್‌ಪ್ರೆಸ್ ರೈಲು ಬೆಳಗುಳ, ಸಾಗರಕಟ್ಟೆ, ಹೊಸ ಅಗ್ರಹಾರ, ಅಕ್ಕಿಹೆಬ್ಬಾಳು ಮತ್ತು ಮಾವಿನಕೆರೆ ನಿಲ್ದಾಣಗಳಲ್ಲಿ ನಿಲುಗಡೆಯನ್ನು ಒದಗಿಸಲಾಗುತ್ತದೆ. ಅದರಂತೆ ರೈಲು ಸಂಖ್ಯೆ 17301 ಮೈಸೂರು–ಧಾರವಾಡ ಎಕ್ಸ್‌ಪ್ರೆಸ್ ರೈಲು ಬೆಳಗುಳ ತಲುಪುವ/ಹೊರಡುವ ವೇಳೆ –10–43/10–44 ಗಂಟೆ, ಸಾಗರಕಟ್ಟೆ – 10–57/10–58 ಗಂಟೆ, ಹೊಸ ಅಗ್ರಹಾರ – 11–25/11–:26 ಗಂಟೆ, ಅಕ್ಕಿಹೆಬ್ಬಾಳು–ರಾತ್ರಿ 11–:35/11–36 ಮತ್ತು ಮಾವಿನಕೆರೆ – ರಾತ್ರಿ 12.20/12–21 ಆಗಿರುತ್ತದೆ.

ಹಿಂದಿರುಗುವ ದಿಕ್ಕಿನಲ್ಲಿ ರೈಲು ಸಂಖ್ಯೆ 17302 ಧಾರವಾಡ–ಮೈಸೂರು ಎಕ್ಸ್‌ಪ್ರೆಸ್ ಮಾವಿನಕೆರೆಗೆ ಆಗಮಿಸುವ/ ನಿರ್ಗಮಿಸುವ ವೇಳೆ– ಮುಂಜಾನೆ 3–50/03–51 ಗಂಟೆ, ಅಕ್ಕಿಹೆಬ್ಬಾಳು– ಮುಂಜಾನೆ 4–36/4–37 ಗಂಟೆ, ಹೊಸ ಅಗ್ರಹಾರ– ಮುಂಜಾನೆ 4–46/4:47 ಗಂಟೆ, ಸಾಗರಕಟ್ಟೆ – ಬೆಳಗ್ಗೆ 5–15/5–16 ಗಂಟೆಗೆ ಬೆಳಗುಳ – ಬೆಳಗ್ಗೆ 5–39/5–40 ಗಂಟೆ ಆಗಿರುತ್ತದೆ.

ದಸರಾ ಪ್ರಯುಕ್ತ ಮೈಸೂರು ರೈಲ್ವೆ ವಸ್ತು ಸಂಗ್ರಹಾಲಯಕ್ಕೆ ವಿಶೇಷ ದೀಪಾಲಂಕಾರ

ಪ್ರವೇಶಾವಕಾಶ ರಾತ್ರಿ 8ರವರೆಗೆ ವಿಸ್ತರಣೆ

ಮೈಸೂರು, ಸೆ.21(ಆರ್‌ಕೆಬಿ)–ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ರೈಲ್ವೆ ನಿಲ್ದಾಣದ ಹಿಂಬದಿಯಲ್ಲಿರುವ ಮೈಸೂರು ರೈಲು ವಸ್ತು ಸಂಗ್ರಹಾಲಯವನ್ನು ದಸರಾ ಹಬ್ಬದ ಪ್ರಯುಕ್ತ ಸೆ.26ರಿಂದ ಅ.5ರವರೆಗೆ ದಸರಾ ಉತ್ಸವಗಳ ಸಮಯದಲ್ಲಿ ವೈವಿಧ್ಯಮಯ ದೀಪಾಲಂಕಾರ ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ ಪ್ರವೇಶ ಅವಧಿಯನ್ನೂ ರಾತ್ರಿ 8 ಗಂಟೆಯವರೆಗೆ ವಿಸ್ತರಿಸಲಾಗುವುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ರೈಲು ವಸ್ತುಸಂಗ್ರಹಾಲಯದ ವಿಂಟೇಜ್ ಸ್ಟೀಮ್ ಲೊಕೋಮೋಟಿವ್‌ಗಳು, ಕೋಚ್‌ಗಳು, ವ್ಯಾಗನ್‌ಗಳು, ಆಟಿಕೆ ರೈಲು, ಕೈಯಿಂದ ಚಾಲಿತ ಕ್ರೇನ್, ರೈಲ್ ಬಸ್ ಮತ್ತು ಸ್ಟೀಮ್ ಫೈರ್ ಪಂಪ್‌ನಂತಹ ದೊಡ್ಡ ಹೊರಾಂಗಣ ಪ್ರದರ್ಶನಗಳ ಅದ್ಭುತ ಪ್ರಕಾಶಿತ ನೋಟವನ್ನು ಪ್ರವಾಸಿಗರು ಸವಿಯಲು ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ರೈಲು ವಸ್ತುಸಂಗ್ರಹಾಲಯದ ಕೆಲಸದ ಸಮಯವನ್ನು ಸಹ 2 ಗಂಟೆಗಳಷ್ಟು, ಅಂದರೆ, ರಾತ್ರಿ 8 ಗಂಟೆಯವರೆಗೆ ವಿಸ್ತರಿಸಲಾಗಿದೆ ಎಂದು ತಿಳಿಸಿದ್ದಾರೆ.



ಅಲ್ಲದೆ ರೈಲು ವಸ್ತುಸಂಗ್ರಹಾಲಯವು ರಜಾ ದಿನಗಳಾದ ಸೆ.27 ಮತ್ತು ಅ.4ರಂದು ದಸರಾ ಅಂಗವಾಗಿ ಸಾರ್ವಜನಿಕರಿಗೆ ತೆರೆದಿರುತ್ತದೆ. ನಿಗದಿತ ಶುಲ್ಕದ ಪಾವತಿಯೊಂದಿಗೆ ಎಸ್‌ಎಲ್‌ಆರ್/ಡಿಎಸ್‌ಎಲ್‌ಆರ್ ಕ್ಯಾಮೆರಾಗಳನ್ನು ಛಾಯಾಗ್ರಹಣಕ್ಕೆ ಬಳಸುವ ಅವಕಾಶವಿರುತ್ತದೆ. ರೈಲು ವಸ್ತು ಸಂಗ್ರಹಾಲಯದ ಆವರಣದೊಳಗೆ ತಿಂಡಿ ತಿನಿಸುಗಳನ್ನು ಅನುಮತಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಎಲೆಕ್ಟ್ರಿಕ್ ಅಂಗಡಿಗೆ ಬಂದು) ಒಂದು ಕಪ್ಪು ಬಲ್ಬ್ ಕೊಡಿ.
ಅಂಗಡಿಯಾತ : ಕಪ್ಪು ಬಲ್ಬಾ! ಅದ್ಯಾಕೆ ಸಾರ್?
ಗಿರಾಕಿ : ಮಧ್ಯಾಹ್ನದ ಹೊತ್ತಲ್ಲಿ ಕತ್ತಲು ಮಾಡಿಕೊಂಡು ಮಲಗೋ ಮಜಾನೆ ಬೇರೆ ಗುರು!

ಮೈಸೂರು ಮಿತ್ರ

ಗುರುವಾರ, 22 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮ ಸ್ವರ ಕೊಟ್ಟೀತೆ

ನಿಮ್ಮ ಪತ್ರಗಳು

ಜಗನ್ಮೋಹನ ಅರಮನೆಯಲ್ಲಿ ಧ್ವನಿವರ್ಧಕ ಅವ್ಯವಸ್ಥೆ

ಮಾನ್ಯರೆ,

ಮೈಸೂರಿನ ಹೃದಯಭಾಗದಲ್ಲಿರುವ ಪುರಾತನ ಕಟ್ಟಡಗಳಲ್ಲೊಂದಾದ ಜಗನ್ಮೋಹನ ಅರಮನೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಪುನರಾರಂಭಗೊಂಡಿರುವುದು ಸಂತಸದ ವಿಷಯ.



ಕೆಲವು ದಿನಗಳಿಂದ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಆದರೆ ಇಲ್ಲಿ ಮುಖ್ಯವಾದ ಸಮಸ್ಯೆ ಏನೆಂದರೆ ಇಲ್ಲಿನ ಧ್ವನಿವರ್ಧಕಗಳು ಸ್ಪಷ್ಟವಾಗಿ ಕೇಳಿಸುತ್ತಿಲ್ಲ. ಎಕೋ (ಪ್ರತಿಧ್ವನಿ) ಬರುತ್ತದೆ. ಅದರ ಶಬ್ದ ಕಿರಿಕಿರಿಯನ್ನುಂಟು ಮಾಡುತ್ತದೆ. ಕಲಾವಿದರು ತಮ್ಮ ಶಕ್ತಿ ಮೀರಿ ಉತ್ತಮ ಹಾಡುಗಳನ್ನು ಆಯ್ಕೆ ಮಾಡಿಕೊಂಡು ಉತ್ತಮ ರೀತಿಯಲ್ಲಿಯೇ ಪ್ರಸ್ತುತಪಡಿಸಿದರೂ ಫಲಿತಾಂಶ ಮಾತ್ರ ಶೂನ್ಯ ಎಂಬಂತಾಗಿದೆ. ಮೊನ್ನೆ ನಡೆದ 'ಇಳೆಯರಾಜ' ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕಲಾರಸಿಕರು ಒಂದು ಹಾಡು ಕೇಳಿ ಮರು ಹಾಡಿಗೆ ಧ್ವನಿವರ್ಧಕದ ಅವ್ಯವಸ್ಥೆಯಿಂದ ಹೊರನಡೆದರು. ಇನ್ನೇನು ನಾಡಹಬ್ಬ ದಸರಾ ಸಮೀಪಿಸುತ್ತಿದೆ. ಆಗ ಪ್ರತಿನಿತ್ಯ ಒಂದಲ್ಲಾ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಲೇ ಇರುತ್ತವೆ. ಅಷ್ಟರೊಳಗೆ ಈ ಸಭಾಂಗಣದ ಉಸ್ತುವಾರಿ ವಹಿಸಿರುವ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರ ಆಪ್ತ ಸಹಾಯಕ ಎಂ.ಲಕ್ಷ್ಮೀನಾರಾಯಣ್ ಅವರು ಧ್ವನಿವರ್ಧಕವನ್ನು ಒಮ್ಮೆ ಪರಿಶೀಲಿಸಿ, ಸಮಸ್ಯೆಯನ್ನು ಪರಿಹರಿಸಲಿ. ಇದರ ಜೊತೆಗೆ ಇಲ್ಲಿನ ಶೌಚಾಲಯದ ವ್ಯವಸ್ಥೆ ಕೂಡ ಹದಗೆಟ್ಟಿದೆ. ಅದನ್ನು ತೆಗೆಸಿ ಆದಷ್ಟು ಬೇಗ ಹೊಸ ಶೌಚಾಲಯದ ವ್ಯವಸ್ಥೆಯನ್ನು ಸಾರ್ವಜನಿಕರಿಗೆ ಕಲ್ಪಿಸಿಕೊಡಬೇಕೆಂದು ನಮ್ಮೆಲ್ಲರ ಮನವಿ.

– ರೇಣುಕಾ ಪ್ರಸಾದ್, ಮ್ಯಾಂಡೋಲಿನ್ ಕಲಾವಿದ, ಮೈಸೂರು

ಮೈಸೂರಿಗೆ ಕಳಂಕ ತರುವ ರಸ್ತೆಗಳು

ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿನ ಬಹುಭಾಗ ರಸ್ತೆಗಳು ಸಂಪೂರ್ಣ ಗುಂಡಿಮಯವಾಗಿದ್ದು, ನಾಗರಿಕರು ಹಿಡಿ ಶಾಪ ಹಾಕುತ್ತಿದ್ದಾರೆ. ಈಗಾಗಲೇ ಹಲವು ಬಾರಿ ರಸ್ತೆ ದುರಸ್ತಿ ಬಗ್ಗೆ ಪ್ರತಿಭಟಿಸಿದರೂ ಸರ್ಕಾರ ಹಾಗೂ ಸಂಬಂಧಪಟ್ಟವರು ಇದುವರೆಗೂ ಅದನ್ನು ಮರೆತು ಕೈಕಟ್ಟಿ ಕುಳಿತು ಕೇವಲ ಭಾವನಾತ್ಮಕ ವಿಷಯ, ಮೋದಿ ಜಪದಲ್ಲೇ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಮೈಸೂರಿನಲ್ಲಿ ಅದ್ಧೂರಿಯಿಂದ ದಸರಾ ಮಹೋತ್ಸವ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೊರ ರಾಜ್ಯ, ದೇಶಗಳಿಂದ ಪ್ರವಾಸಿಗರು ಆಗಮಿಸುವುದುಂಟು. ಇದರಿಂದ ಪ್ರವಾಸಿಗರಿಗೆ ತೊಂದರೆಯಾಗಿ, ಮೈಸೂರಿನ ಹೆಮ್ಮೆಗೆ ಧಕ್ಕೆಯಾಗುವುದುಂಟು. ಆದ್ದರಿಂದ ಕೂಡಲೇ ಸಂಬಂಧಪಟ್ಟವರು ರಸ್ತೆ ದುರಸ್ತಿ ಮಾಡಬೇಕೆಂದು ಈ ಮೂಲಕ ಮನವಿ.

– ವಿನಯಮಾರ್ಗ ನಿವಾಸಿಗಳು, ಸಿದ್ಧಾರ್ಥ ಬಡಾವಣೆ, ಮೈಸೂರು.

ರೂಟ್ ನಂ.51ಬಿ ನಿಗದಿತ ಸ್ಥಳದಲ್ಲಿ ನಿಲ್ಲಿಸುತ್ತಿಲ್ಲ

ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣದಿಂದ ಬೋಗಾದಿಗೆ ಸಂಚರಿಸುವ ರೂಟ್ ನಂ.51ಬಿ ಕಡೇ ಸ್ಟಾಪ್‌ನಿಂದ ಮುಂದಿನ ಸ್ಟಾಪ್ ಇರುವ ಜಾಗದಲ್ಲಿ ನಿಲುಗಡೆಗೊಳಿಸುತ್ತಿಲ್ಲ. ಯಾರಾದರೂ ಒಬ್ಬ ಪ್ರಯಾಣಿಕ ಅಲ್ಲಿ ಬಸ್ಸಿಗಾಗಿ ಕಾಯುತ್ತಿದ್ದರೆ ಬಸ್ ನಿಲ್ಲಿಸದೇ ಜೋರಾಗಿ ಹೋಗುತ್ತಾರೆ. ಒಂದು ವೇಳೆ ನಿಲ್ಲಿಸಿದರೆ ಆ ಪ್ರಯಾಣಿಕರನ್ನು ಚಾಲಕ ದುರುಗುಟ್ಟಿ ನೋಡುವುದು ಸರ್ವೇಸಾಮಾನ್ಯವಾಗಿದೆ. ಅಲ್ಲಿ ಬಸ್ ನಿಲ್ದಾಣ ಇರುವುದರಿಂದ ಒಬ್ಬರೋ ಅಥವಾ ಇಬ್ಬರೋ ಬಸ್ಸಿಗಾಗಿ ಕಾಯುತ್ತಿರುತ್ತಾರೆ. ದಯವಿಟ್ಟು ಇನ್ನು ಮುಂದಾದರೂ ಬಸ್ಸಿನ ಚಾಲಕರು ನಿಲುಗಡೆಯ ಸ್ಥಳದಲ್ಲಿ ಬಸ್ಸನ್ನು ನಿಲ್ಲಿಸಲಿ.

–ರಾಘವೇಂದ್ರ, ಬೋಗಾದಿ 2ನೇ ಹಂತ, ಮೈಸೂರು

ದಲಿತರ ಪರ ಬಿಜೆಪಿ ಸರ್ಕಾರ

ಮಾನ್ಯರೆ,

ನಗರಸಭೆ, ಪುರಸಭೆ ಮತ್ತು ಇತರ ಪಟ್ಟಣ ಸ್ಥಳೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 11,133 ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ಸರ್ಕಾರಿ ನೌಕರರೆಂದು ನೇಮಕಾತಿ ಮಾಡುವ ಪ್ರಸ್ತಾವನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಪೌರಕಾರ್ಮಿಕರ ದುಡಿಮೆಗೆ ನ್ಯಾಯವನ್ನು ಒದಗಿಸುವ ಮೂಲಕ ಅವರ ಬಾಳಿಗೆ ಬೆಳಕನ್ನು ನೀಡಿದಂತಾಗಿದೆ.

ಈ ನೌಕರರು ಈಗ ರೂ.17,000–28,980 ವೇತನ ಶ್ರೇಣಿ ಅಡಿಯಲ್ಲಿ ಸೇವೆ ಸಲ್ಲಿಸುವಂತೆ ಅವಕಾಶ ಕಲ್ಪಿಸಲಾಗಿದೆ. ಪೌರ ಕಾರ್ಮಿಕ ಖಾಯಮಾತಿ ಆಗಿದ್ದು ರಾಜ್ಯದ ಇತಿಹಾಸದಲ್ಲಿಯೇ ಇದು ಮೊದಲ ಬಾರಿಯಾಗಿದೆ. ಇದರಿಂದ ದೀರ್ಘ ಕಾಲದಿಂದ ಹೋರಾಟ ಮಾಡುತ್ತಿದ್ದ ಪೌರಕಾರ್ಮಿಕರ ಹೋರಾಟಕ್ಕೆ ಬಿಜೆಪಿ ಸರ್ಕಾರ ನ್ಯಾಯ ಒದಗಿಸಿದೆ. ಈ ಮೂಲಕ ಬಿಜೆಪಿ ಸರ್ಕಾರವು ಬಡವರು ನೊಂದವರ ದಲಿತರ ಪರ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ.

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಬಿಜೆಪಿ ಎಸ್‌ಸಿ ಮೋರ್ಚಾ, ಮೈಸೂರು.

ರಸ್ತೆಗುಂಡಿ ಮುಚ್ಚಿ ಪುಣ್ಯ ಕಟ್ಟಿಕೊಳ್ಳಿ

ಮಾನ್ಯರೇ,

ದಸರೆಗಾಗಿ ಕೋಟ್ಯಂತರ ರೂಪಾಯಿ ಬಿಡುಗಡೆಯಾಗುತ್ತಿದೆ. ಅದನ್ನೆಲ್ಲಾ ಚೆನ್ನಾಗಿರುವ ಮುಖ್ಯ ರಸ್ತೆಗಳ ಉದ್ಧಾರಕ್ಕೆ ಪಾಲಿಕೆ ಖರ್ಚು ಮಾಡುತ್ತಿದೆ. ಅದರ ಬದಲು ಯಾರೂ ಕೇಳದ ಕುಲಗೆಟ್ಟ ರಸ್ತೆಗಳನ್ನೂ ಗುರುತಿಸಿ ಗುಂಡಿಗಳನ್ನು ಮುಚ್ಚಿ ಜನರ ಕಷ್ಟಗಳಿಗೆ ಪಾಲಿಕೆ ಸ್ಪಂದಿಸಲಿ. ಕೆಟ್ಟ, ಹಳ್ಳ ರಸ್ತೆಗಳಿಂದಾಗಿ ಮೂಳೆ ಮುರಿದುಕೊಂಡು ಆಸ್ಪತ್ರೆ ಸೇರಿರುವವರ ಜನರಿಗೇನೂ ಕಡಿಮೆಯಿಲ್ಲ. ರಸ್ತೆ ಗುಂಡಿಗಳಿಂದ ಆಗಿರುವ ಅಪಾಯ ಹೇಳತೀರದಾಗಿದೆ. ಪಾಲಿಕೆ ಈ ಬಗ್ಗೆ ಗಮನಹರಿಸಿ ರಸ್ತೆಗಳನ್ನು ಸರಿಪಡಿಸುವುದೇ?

–ಕೊ.ಸು. ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಪ್ರತಿಭಾ ಪಲಾಯನ ಫಲಾಫಲ

ವಿಶ್ವಸಂಸ್ಥೆಯ ಜನಸಂಖ್ಯಾ ವಿಭಾಗ ಪ್ರಕಟಿಸಿದ 'ಅಂತಾರಾಷ್ಟ್ರೀಯ ವಲಸೆ: 2020 ರ ಪ್ರಮುಖಾಂಶಗಳು' ವರದಿಯೂ ಕಳೆದ 20 ವರ್ಷಗಳಲ್ಲಿ ಒಂದು ಕೋಟಿ ಭಾರತೀಯರು ಹೊರ ದೇಶಗಳಿಗೆ ವಲಸೆ ಹೋಗಿದ್ದಾರೆ ಎಂದು ಉಲ್ಲೇಖಿಸಿದೆ. ಇದೇ ವರದಿ, ವಿಶ್ವದ ಅತಿ ಹೆಚ್ಚು ಅನಿವಾಸಿ ಜನಸಂಖ್ಯೆ ಭಾರತೀಯ ಮೂಲದವರೇ ಆಗಿದ್ದು, ಅವರ ಸಂಖ್ಯೆ 1.8 ಕೋಟಿಯಷ್ಟಿದೆ ಎಂದು ಕೂಡ ಸೂಚಿಸಿತ್ತು. ಇವರಲ್ಲಿ ಸುಮಾರು 35 ಲಕ್ಷ ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳಲ್ಲಿ, 27 ಲಕ್ಷ ಅಮೇರಿಕಾದಲ್ಲಿ ಮತ್ತು 25 ಲಕ್ಷ ಸೌದಿ ಅರೇಬಿಯಾದಲ್ಲಿ ಇದ್ದಾರೆ ಎಂದು ಈ ವರದಿ ತಿಳಿಸಿದೆ.

ನಮ್ಮ ದೇಶದಿಂದ ಪ್ರತಿ ವರ್ಷವೂ ಹೆಚ್ಚುತ್ತಿರುವ ಹೊರ ವಲಸೆಯಲ್ಲಿ ಗಮನಾರ್ಹವಾದ ಪ್ರಮಾಣ ಉನ್ನತ ಶಿಕ್ಷಣಾವಕಾಶಗಳನ್ನು ಅರಸಿ ಪಾಶ್ಚಿಮಾತ್ಯ ದೇಶಗಳತ್ತ ಹೋಗುತ್ತಿರುವ ವಿದ್ಯಾರ್ಥಿಗಳದ್ದು. ಇವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. 1970ರ ಆದಿ ಭಾಗದಲ್ಲೇ ಆರಂಭವಾದ ವಿದ್ಯಾರ್ಥಿಗಳ ವಲಸೆ, ಆ ನಂತರದಲ್ಲಿ ಅವರು ಸ್ವದೇಶಕ್ಕೆ ಹಿಂದಿರುಗದೆ ಅಲ್ಲೇ ಉದ್ಯೋಗಗಳನ್ನು ಹುಡುಕಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಯತ್ನಿಸುವುದು– ಈ ಪ್ರಕ್ರಿಯೆಯನ್ನು 'ಪ್ರತಿಭಾ ಪಲಾಯನ' ಎಂದು ಕರೆಯಲಾಯ್ತು. ಸಾಮಾನ್ಯವಾಗಿ ಪ್ರಥಮ ಪದವಿಯನ್ನು ನಮ್ಮ ದೇಶದಲ್ಲಿ ಪಡೆದು, ಸ್ನಾತಕೋತ್ತರ ಶಿಕ್ಷಣಕ್ಕೆ ಹೊರ ದೇಶಗಳಿಗೆ ಹೊರಟ್ಟಿದ್ದವರೇ ಈ ಗುಂಪಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಂತವರು. ಹೀಗೆ ಹೋಗಲಾರಂಭಿಸಿದ ವಿದ್ಯಾರ್ಥಿಗಳ ಜೊತೆ ಉನ್ನತ ಶಿಕ್ಷಣವನ್ನು ಭಾರತದಲ್ಲೇ ಪಡೆದು ಒಳ್ಳೆಯ ಆದಾಯವನ್ನು ತರುವ ಉದ್ಯೋಗಗಳಲ್ಲಿ ಇದ್ದವರೂ ಸೇರಿದ್ದರು. ಬಹು ಹೆಚ್ಚಿನವರು ಆಗ ಹೊರಟಿದ್ದು ಅಮೆರಿಕಾದತ್ತ. ಈಗಲೂ ಆ ದೇಶದಲ್ಲಿ ತಮ್ಮ ಭವಿಷ್ಯದ ಕನಸುಗಳನ್ನು ರೂಪಿಸಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿದೆ. 'ಅಮೆರಿಕನ್ ಡ್ರೀಮ್' (ಅಮೆರಿಕನ್ ಕನಸು) ಎಂಬ ಭಾವನೆ ಇದಕ್ಕೆ ಸಾಕ್ಷಿಯಾಗಿದೆ.

ಭಾರತದ ಸಾರ್ವಜನಿಕ ಸಂಪನ್ಮೂಲಗಳನ್ನು ಬಳಸಿ ಶಿಕ್ಷಣ ಪಡೆದವರ ಪ್ರತಿಭೆ, ಜ್ಞಾನ ಅಥವಾ ತರಬೇತಿ ನಮ್ಮ ದೇಶಕ್ಕೆ ಉಪಯೋಗವಾಗುತ್ತಿಲ್ಲ. ಇದರಿಂದ ಭಾರತಕ್ಕೆ ಉಂಟಾಗುತ್ತಿರುವ ಆರ್ಥಿಕ ನಷ್ಟದ ಪ್ರಮಾಣ ಹಾಗೂ ಅದರ ಪರಿಣಾಮಗಳ ಬಗ್ಗೆ 1970ರ ದಶಕದಲ್ಲಿ ಆರಂಭವಾದ ಚರ್ಚೆ ಇಂದಿಗೂ ಮುಂದುವರೆದಿದೆ. ಆಗಿನ ಕಾಲಘಟ್ಟದಲ್ಲೇ ಓರ್ವ ವೃತ್ತಿನಿರತ ಉದ್ಯೋಗಿಗೆ ತರಬೇತಿ ನೀಡಲು ತಗಲುವ ವೆಚ್ಚ 16000 ರೂಪಾಯಿಗಳು, 1962 –1970 ರ ಅವಧಿಯಲ್ಲಿ 30,000 ಕ್ಕೂ ಹೆಚ್ಚು ಭಾರತೀಯರು ತಮ್ಮ ಔದ್ಯೋಗಿಕ ಪರಿಣತಿಯ ಆಧಾರದ ಮೇಲೆ ಅಮೆರಿಕಾಕ್ಕೆ ತೆರಳಿದ್ದರು, ಅವರಲ್ಲಿ ಶೇ.40ರಷ್ಟು ಒಂದೇ ವರ್ಷದಲ್ಲಿ, ಎಂದರೆ 1970ರಲ್ಲಿ ಅಮೆರಿಕಾಗೆ ವಲಸೆ ಹೋದವರು ಎಂದು ಅಧ್ಯಯನವೊಂದು ತಿಳಿಸಿತ್ತು. ಇತ್ತೀಚೆಗೆ ಸುದ್ದಿ ವಾಹಿನಿ ವರ್ಲ್ಡ್ ಈಸ್ ಒನ್ ನ್ಯೂಸ್ ನೀಡಿದ ಮಾಹಿತಿಯ ಪ್ರಕಾರ 10–12ನೇ ಬೋರ್ಡ್ ಪರೀಕ್ಷೆಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು 1996–2015 ರ ಅವಧಿಯಲ್ಲಿ ಭಾರತದಿಂದ ವಲಸೆ ಹೋಗಿ ಅಲ್ಲಿಯೇ ಉದ್ಯೋಗಗಳನ್ನೂ ಪಡೆದುಕೊಂಡಿದ್ದಾರೆ. 2019–20ರ ಮುಂಗಡಪತ್ರದಲ್ಲಿ ಭಾರತ ಶಿಕ್ಷಣಕ್ಕೆಂದು ನಿಗದಿಪಡಿಸಿದ್ದ ಮೊತ್ತ 6.43 ಲಕ್ಷ ಕೋಟಿ ರೂ.ಗಳು, ಇದರಲ್ಲಿ ಪಾಲನ್ನು ಪಡೆದವರಲ್ಲಿ ನಮ್ಮ ದೇಶವನ್ನು ಬಿಟ್ಟು ಹೋಗಿ ಸಾರ್ವಜನಿಕ ವೆಚ್ಚದಲ್ಲಿ ಶಿಕ್ಷಣವನ್ನು ಪಡೆದವರೂ ಸೇರಿದ್ದಾರೆ. ತೀವ್ರ ಸ್ವರೂಪದ ಸಾಮಾಜಿಕ–ಆರ್ಥಿಕ ಅಸಮಾನತೆ ಇರುವ ಈ ದೇಶದಲ್ಲಿ ಇದು ಸರಿಯೇ ಎನ್ನುವ ಪ್ರಶ್ನೆ ಆಗ ಎದ್ದಿತ್ತು. ಈ ಪ್ರಶ್ನೆ ಸಾರ್ವಕಾಲಿಕ ಪ್ರಸ್ತುತಿಯನ್ನು ಹೊಂದಿದೆ ಎನ್ನುವುದನ್ನು ಕೂಡ ನಾವು ಒಪ್ಪಿಕೊಳ್ಳಲೇಬೇಕು. ಜಾಗತೀಕರಣದ ಯುಗ ಆರಂಭವಾದ ಮೇಲೆ ಮಾಹಿತಿ ತಂತ್ರಜ್ಞಾನ ಶರವೇಗದಲ್ಲಿ ಬೆಳೆಯುತ್ತಾ ಹೋಗಿ ಇಡೀ ವಿಶ್ವವೇ ಒಂದು 'ಜಾಗತಿಕ ಗ್ರಾಮ' ವಾಗಿ ಪರಿವರ್ತಿತವಾಗುತ್ತಾ ಹೋದದ್ದು, ಹೊಸ–ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಾ ಹೋಗಿ ವೈವಿಧ್ಯಮಯ ಆದಾಯ ಗಳಿಕಾ ಮಾರ್ಗಗಳ ಮಹಾಪೂರವೇ ಹರಿದದ್ದು–ಈ ಎಲ್ಲ ಕಾರಣಗಳಿಂದ ಶಿಕ್ಷಣ ಕ್ಷೇತ್ರದ ಸ್ವರೂಪವೇ ಬದಲಾಗುತ್ತಾ ಹೋಯಿತು. ಇದರಿಂದ ಭಾರತೀಯ ನವ ಪೀಳಿಗೆಯ ಮೇಲ್ಮುಖ ಚಲನೆಯ ಕನಸುಗಳು ಗರಿಗೆದರುತ್ತಾ ಹೋಗಲು ಪ್ರಶಸ್ತವಾದ ಪರಿಸರ ಸೃಷ್ಟಿಯಾಯಿತು. ಭಾರತದಲ್ಲಿ ಸರ್ಕಾರಿ ಸ್ವಾಮ್ಯ ನಿಧಾನವಾಗಿ ಹಿಂಚಲಿಸುತ್ತಾ ಹೋದ ಹಾಗೆ, ಎಲ್ಲ ಕ್ಷೇತ್ರಗಳ ಮೇಲೂ ಖಾಸಗಿ ವಲಯದ ಹಿಡಿತ ಹೆಚ್ಚುತ್ತಾ ಹೋಯಿತು. ಹೊಸ ಉದ್ಯೋಗಾವಕಾಶಗಳು, ಹೆಚ್ಚಿದ ವೇತನಗಳು, ಸರಳೀಕೃತವಾದ ಬ್ಯಾಂಕಿನ ವಹಿವಾಟುಗಳು, ಶಿಕ್ಷಣವನ್ನು ಪಡೆಯಲೆಂದು ಹೊರ ದೇಶಗಳಿಗೆ ವಲಸೆ ಹೋಗುವ ವಿದ್ಯಾರ್ಥಿಗಳಿಗೆ, ಬಹುಕಂತುಗಳಲ್ಲಿ ದೊರೆಯಲಾರಂಭಿಸಿದ ಸಾಲ ಸೌಲಭ್ಯ–ಇವೆಲ್ಲವೂ ಹೊರದೇಶಗಳಲ್ಲಿ ಶಿಕ್ಷಣವನ್ನು ಪಡೆಯುವ ಹಂಬಲಕ್ಕೆ ನೀರೆರೆದವು.

> 2019-20ರ ಮುಂಗಡ ಪತ್ರದಲ್ಲಿ ಭಾರತ ಶಿಕ್ಷಣಕ್ಕೆಂದು ನಿಗದಿಪಡಿಸಿದ್ದ ಮೊತ್ತ 6.43 ಲಕ್ಷ ಕೋಟಿ ರೂಪಾಯಿಗಳು, ಇದರಲ್ಲಿ ಪಾಲನ್ನು ಪಡೆದವರಲ್ಲಿ ನಮ್ಮ ದೇಶವನ್ನು ಬಿಟ್ಟು ಹೋಗಿ ಸಾರ್ವಜನಿಕ ವೆಚ್ಚದಲ್ಲಿ ಶಿಕ್ಷಣವನ್ನು ಪಡೆದವರೂ ಸೇರಿದ್ದಾರೆ. ತೀವ್ರ ಸ್ವರೂಪದ ಸಾಮಾಜಿಕ-ಆರ್ಥಿಕ ಅಸಮಾನತೆ ಇರುವ ಈ ದೇಶದಲ್ಲಿ ಇದು ಸರಿಯೇ ಎನ್ನುವ ಪ್ರಶ್ನೆ ಆಗ ಎದ್ದಿತ್ತು. ಈ ಪ್ರಶ್ನೆ ಸಾರ್ವಕಾಲಿಕ ಪ್ರಸ್ತುತಿಯನ್ನು ಹೊಂದಿದೆ ಎನ್ನುವುದನ್ನು ಕೂಡ ನಾವು ಒಪ್ಪಿಕೊಳ್ಳಲೇಬೇಕು.



ಕಾಲ ಕಳೆಯುತ್ತಾ ಹೋದ ಹಾಗೆಲ್ಲ ಆರ್ಥಿಕ ಉದಾರೀಕರಣ ತೆರೆದಿಟ್ಟ ಉದ್ಯೋಗಾವಕಾಶಗಳಿಂದ ಹಾಗೂ ಹೆಚ್ಚಿದ ವೇತನಗಳು ತಂದ ಆರ್ಥಿಕ ಅನುಕೂಲಗಳಿಂದ ನಮ್ಮ ದೇಶದಲ್ಲಿ ಒಂದು ನವ ಮಧ್ಯಮ ವರ್ಗ ಸೃಷ್ಟಿಯಾಗಿ ಅವರ ಕುಟುಂಬಗಳಲ್ಲಿನ ಎರಡನೇ ತಲೆಮಾರು ಹೊರದೇಶಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವ ಕನಸುಗಳನ್ನು ಕಟ್ಟತೊಡಗಿದ್ದು, ಅದನ್ನು ಸಾಕಾರವಾಗಿಸಿಕೊಳ್ಳಲು ಶಾಲಾ ಹಂತದಿಂದಲೇ ಪ್ರಯತ್ನಗಳನ್ನು ನಡೆಸತೊಡಗಿದ್ದು ಸಮಕಾಲೀನ ಕಾಲಘಟ್ಟ ಕಂಡ ವಿಶೇಷಗಳಲ್ಲಿ ಒಂದು. ಹಿಂದೆಂದೂ ಇರದ ಆಯ್ಕೆಯ ಸ್ವಾತಂತ್ರ್ಯ ದೊರೆತಾಗ ವಿಶೇಷವಾಗಿ ಯುವಜನತೆ, ಅದರಲ್ಲೂ ಮೇಲ್ ಮಧ್ಯಮ ವರ್ಗ ಮತ್ತು ಮೇಲ್ವರ್ಗಗಳ ಕೌಟುಂಬಿಕ ಹಿನ್ನೆಲೆಯಿಂದ ಬಂದವರು ಅಂತರ್ಜಾಲದ ಮೂಲಕ ಅವಕಾಶಗಳನ್ನು ಅರಸುತ್ತಾ ಹೋಗಿ ತಮ್ಮ ಆರ್ಥಿಕ–ಸಾಮಾಜಿಕ– ಶೈಕ್ಷಣಿಕ ಹಿನ್ನೆಲೆ ನೀಡಿದ ಅನುಕೂಲಗಳನ್ನು ಬಳಸಿಕೊಂಡು ಶಾಲಾ ಹಂತದಿಂದಲೇ ಹೊರ ದೇಶಗಳಿಗೆ ವಲಸೆ ಹೋಗಲು ನಿರ್ಧರಿಸಿ ತಮ್ಮ ಗುರಿ ಸಾಧನೆಗಾಗಿ ಏಕಾಗ್ರತೆಯಿಂದ ಪ್ರಯತ್ನಿಸುವುದರಿಂದಲೇ ಅವರಲ್ಲನೇಕರು ಹೊರ ದೇಶಗಳಿಗೆ ಹೋಗುತ್ತಿರುವುದು, ಅವರಲ್ಲಿ ಬಹುಸಂಖ್ಯಾತರು ತಮ್ಮ ವಿದ್ಯಾರ್ಹತೆಗೆ ತಕ್ಕ ವೃತ್ತಿಯನ್ನರಸಿ ಅಲ್ಲೇ ಉಳಿಯುವುದು.

ಯುವ ಜನತೆಗೆ ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಲು ಸ್ವದೇಶಕ್ಕಿಂತ ಹೊರ ದೇಶಗಳು ಹೆಚ್ಚು ಸೂಕ್ತ ಎಂಬ ಭಾವನೆ ಬರುತ್ತಿರುವುದೇತಕ್ಕೆ? ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಕೋರ್ಸ್‌ಗಳ ಆಯ್ಕೆಯ ಸ್ವಾತಂತ್ರ್ಯ ಕಡಿಮೆ, ತಮ್ಮ ಆಸಕ್ತಿ ಅಥವಾ ಬದಲಾಗುತ್ತಿರುವ ಜಾಗತಿಕ ಅಗತ್ಯಗಳಿಗೆ ಈ ಶಿಕ್ಷಣ ಸ್ಪಂದಿಸುತ್ತಿಲ್ಲ ಎಂಬ ಭಾವನೆಗಳು ನವ ಜನಾಂಗಕ್ಕೆ ಸೇರಿದ ಅನೇಕರಲ್ಲಿವೆ. ಹೊಸ ಶಿಕ್ಷಣ ನೀತಿ ಬಹು ಆಯ್ಕೆಗಳ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ನೀಡುತ್ತದೆ ಎಂಬ ಆಶಯ ವ್ಯಕ್ತವಾಗಿದ್ದರೂ ಇದು ಕಾರ್ಯರೂಪಕ್ಕೆ ಬರಲು ಇನ್ನೆಷ್ಟು ದಿನಗಳು ಬೇಕಾಗಬಹುದೋ ಎಂಬ ಅನುಮಾನವೂ ಇದೆ. ಶಿಕ್ಷಣ ವ್ಯವಸ್ಥೆ ಇಂದು ಖಾಸಗಿ ವಲಯದತ್ತ ಸರಿಯುತ್ತಿದ್ದು ದೇಶದ ಒಟ್ಟು ವಿಶ್ವವಿದ್ಯಾಲಯಗಳಲ್ಲಿ ಶೇ.40ರಷ್ಟು ಖಾಸಗಿ ಸ್ವಾಮ್ಯದಲ್ಲಿವೆ. ಇವುಗಳಲ್ಲಿ ಅನೇಕ ಸಂಸ್ಥೆಗಳು ಹೊರದೇಶಗಳಲ್ಲಿರುವ ವಿಶ್ವವಿದ್ಯಾಲಯಗಳೊಡನೆ ತಮಗೆ ಒಡಂಬಡಿಕೆಯಿದೆ, ತಮ್ಮಲ್ಲಿ ಪ್ರವೇಶವನ್ನು ಪಡೆದರೆ ಕೋರ್ಸಿನ ಅರ್ಧಾವಧಿಯನ್ನು ಅಲ್ಲಿ ಕಳೆಯಬಹುದು, ಡಿಗ್ರಿಯೂ ಕೂಡ ಆ ವಿಶ್ವವಿದ್ಯಾಲಯದಿಂದಲೇ ದೊರೆಯುತ್ತದೆ ಎಂಬ ಆಕರ್ಷಣೆಯನ್ನೂ ಒಡ್ಡುತ್ತಿವೆ. ಆರ್ಥಿಕ ಅನುಕೂಲಗಳಿರುವ ಪೋಷಕರು ತಮ್ಮ ಮಕ್ಕಳನ್ನು ಇಂಥ ಸಂಸ್ಥೆಗಳಿಗೆ ಸೇರಿಸುವ ಪ್ರವೃತ್ತಿಯೂ ನಿಧಾನವಾಗಿ ಹೆಚ್ಚುತ್ತಿದೆ ಇದು ಪ್ರತಿಭಾ ಪಲಾಯನದ ಮತ್ತೊಂದು ಮುಖ.

ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿರುವ ಶಿಕ್ಷಣ ಸಂಸ್ಥೆಗಳ ನಡುವೆ, ಶ್ರೀಮಂತ–ಬಡವರ ನಡುವೆ, ಗ್ರಾಮ–ನಗರಗಳ ನಡುವೆ ಹೆಚ್ಚಾಗುತಿರುವ ಅಂತರ ಒಂದೆಡೆ ಇದ್ದರೆ, ನಮ್ಮ ದೇಶದಲ್ಲಿಯೇ ಸಾರ್ವಜನಿಕ ಸಂಪನ್ಮೂಲಗಳು ಕ್ರಮೇಣ ಕಡಿಮೆಯಾಗಿ ಅನುಕೂಲಗಳಿಂದ ವಂಚಿತವಾದ ಒಂದು ವರ್ಗ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಅವಕಾಶಗಳಿಂದ ದೂರವಿರಿಸಲ್ಪಟ್ಟು ಮೂಲಭೂತ ಸೌಕರ್ಯಗಳೂ ಇಲ್ಲದ ವ್ಯವಸ್ಥೆಗಳಲ್ಲಿ ಶಿಕ್ಷಣವನ್ನು ಮುಂದುವರೆಸಿಕೊಂಡು ಹೋಗಬೇಕಾದ ಸ್ಥಿತಿ ಮತ್ತೊಂದೆಡೆ ಇದೆ. ಶಿಕ್ಷಣ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಮ ಸಮಾಜದ ನಿರ್ಮಾಣಕ್ಕೆ ಮಾರ್ಗವಾಗುತ್ತದೆ ಎಂಬ ಆಶಯ ಇಂದು ಬಹು ಮಟ್ಟಿಗೆ ಹುಸಿಯಾಗಿದೆ. ಈ ಶಿಕ್ಷಣ ವ್ಯವಸ್ಥೆಯಲ್ಲಿಯೇ ರಾಜ್ಯ ವಿಶ್ವವಿದ್ಯಾಲಯಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು, ವಿಶ್ವವಿದ್ಯಾಲಯಗಳೆಂದು ಪರಿಗಣಿತವಾದ ಸಂಸ್ಥೆಗಳು, ಉತ್ಕೃಷ್ಟ ಸಂಸ್ಥೆಗಳೆಂದು ಪರಿಗಣಿತವಾದ ವಿಶ್ವವಿದ್ಯಾಲಯಗಳು– ಹೀಗೆ ಬಗೆಬಗೆಯ ಸಂಸ್ಥೆಗಳಿವೆ. ಅಪಾರ ರಾಷ್ಟ್ರೀಯ ಆರ್ಥಿಕ ಸಂಪತ್ತನ್ನು ವ್ಯಯ ಮಾಡಿ ನಡೆಸುತ್ತಿರುವ ಉತ್ಕೃಷ್ಟ ಸಂಸ್ಥೆಗಳೆಂದು ಪರಿಗಣಿತವಾದ ವಿಶ್ವವಿದ್ಯಾಲಯಗಳ ಅನೇಕ ಪದವೀಧರರು ಹೊರ ದೇಶಗಳಿಗೆ ಹೋಗಿ ಅಲ್ಲೇ ನೆಲೆಸಿದಾಗ ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ವ್ಯಯವಾದ ಸಾರ್ವಜನಿಕ ಹಣವೇನಾಯಿತು ಎಂಬ ಪ್ರಶ್ನೆ ಬರುವುದು ಸಹಜವೇ. ದೇಶದ ಎಲ್ಲ ನಾಗರಿಕರಿಗೆ ಬದುಕಿನಲ್ಲಿ ಆಯ್ಕೆಯ ಸ್ವಾತಂತ್ರವಿದೆ, ನಿಜ . ಹೊರ ದೇಶಗಳಿಗೆ ವಲಸೆ ಹೋದ ಅನೇಕರು ತಾವು ಕಲಿತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನುವುದೂ ನಿಜ,. ಆದರೆ ನಮ್ಮ ಸಮಾಜದಲ್ಲಿ ಬೇರೂರಿರುವ ಅಸಮಾನತೆಯನ್ನು ಭೇದಿಸಲು ಈ ತೊಡಗಿಸುವಿಕೆಯಿಂದ ಸಾಧ್ಯವಾಗಿಲ್ಲ ಎನ್ನುವುದೂ ನಿಜ.

ಸ್ವಾತಂತ್ರ್ಯ ಸೇನಾನಿಗಳ ಸ್ಮರಣೆಯೊಂದಿಗೆ ಪರಿಸರ ಪ್ರಜ್ಞೆ ಸಾರಿದ ಯುವ ಸಂಭ್ರಮ



ಸೂಪರ್ ಸ್ಟಾರ್ ಸಿನಿಮಾ ನಾಯಕ ನಿರಂಜನ್ ಸುಧೀಂದ್ರ 'ಯುವ ಸಂಭ್ರಮ'ಕ್ಕೆ ಮೆರುಗು ನೀಡಿದರು.



'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಅವರ ಸಾಹಸ ಗಾಥೆಯ ಯಕ್ಷಗಾನ ಪ್ರದರ್ಶನ ನೀಡಿದ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ತಂಡ



'ಆಕ್ಸಿಜನ್' ಮಹತ್ವ ತಿಳಿಸಿದ ಪಿರಿಯಾಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ತಂಡ.

ಮೈಸೂರು, ಸೆ.21(ಎಂಕೆ)– ಸ್ವಾತಂತ್ರ್ಯ ಸೇನಾನಿಗಳ ಸ್ಮರಣೆಯ ಜೊತೆಗೆ ಪರಿಸರವನ್ನು ಸಂರಕ್ಷಿಸುವ ಕಾರ್ಯ ಪ್ರತಿಯೊಬ್ಬ ಮನುಷ್ಯನ ಆದ್ಯ ಕರ್ತವ್ಯ ಎಂಬುದನ್ನು ನೃತ್ಯದ ಮೂಲಕ ಪ್ರಮಾಣೀಕರಿಸಲಾಯಿತು.

ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ವೀರ ಸೈನಿಕರ ಯಶೋಗಾಥೆಯೊಂದಿಗೆ 'ಕಾಡಿನ ನಾಶ, ನಮ್ಮೆಲ್ಲರ ವಿನಾಶ', 'ಮರವನ್ನು ಬೆಳೆಸೋಣ, ನಾಡನ್ನು ಉಳಿಸೋಣ', ಮರವೇ ದೈವ. ಅನ್ನ–ನೀರಿನ ಹೊರತು ಹಣವನ್ನು ತಿನ್ನಲು ಸಾಧ್ಯವಿಲ್ಲ ಎಂಬುದನ್ನು ಅರ್ಥವತ್ತಾಗಿ ತಿಳಿಸಲಾಯಿತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಾಹಸಗಾಥೆಯನ್ನು ಯಕ್ಷಗಾನದ ಬಯಲಾಟದ ಮೂಲಕ ಪ್ರಸ್ತುತಪಡಿಸಿದ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ತಂಡ 'ಯುವ ಸಂಭ್ರಮ'ಕ್ಕೆ ಭರ್ಜರಿ ಆರಂಭ ನೀಡಿದರು. ರಾಯಣ್ಣನ ವೀರಾವೇಶ, ಬ್ರಿಟಿಷರ ಮೋಸದಾಟವನ್ನು ಅಚ್ಚುಕಟ್ಟಾಗಿ ನೃತ್ಯಾಭಿನಯದ ಮೂಲಕ ತೆರೆದಿಟ್ಟ ಕಲಾವಿದರು, 'ಹುಲಿಯೂ ಹುಟ್ಟಿತು ಕಿತ್ತೂರಿನ ಸಂಗೊಳ್ಳಿ ಎಂಬ ಊರ್ಯಾಗಾ...' ಎಂಬ ಹಾಡಿನಿಂದ ನೋಡುಗರೆದೆಯಲ್ಲಿ ಕ್ರಾಂತಿ ಕಿಡಿ ಹಚ್ಚಿದರು.

ಪರಿಸರವೇ ದೈವ: ಪಿರಿಯಾಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಹುಣಸೂರಿನ ಶ್ರೀ ಮಹಾವೀರ್ ಬಿ.ಇಡಿ ಕಾಲೇಜು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಸೋಮವಾರಪೇಟೆ ಆಲೂರು ಸಿದ್ದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪರಿಸರವೇ ದೈವ ಎಂದು ಸಾರಿದರು. 'ಹಸಿರೇ ನಮ್ಮ ಉಸಿರು', ಪ್ರಕೃತಿಗೆ ನಾವು ನೀಡಿದ್ದನ್ನು ವಾಪಸ್ ನೀಡುವುದು ಪ್ರಕೃತಿಯ ಗುಣವಾಗಿದೆ ಎಂದರಲ್ಲದೆ ಕೊರೊನಾ ಸಂದರ್ಭದಲ್ಲಿ ಆಕ್ಸಿಜನ್ ಅಲೆದಾಟದ ಸಂಕಷ್ಟದ ದಿನಗಳನ್ನು ಪ್ರತ್ಯಕ್ಷ ದರ್ಶನ ಮಾಡಿಸುವ ಮೂಲಕ ಜಾಗೃತಿ ಮೂಡಿಸಿದರು.

ವೀರ ಸೈನಿಕರ ಯಶೋಗಾಥೆ: ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಸ್ಮರಣೆ ಜೊತೆಗೆ ವೀರ ಸೈನಿಕರ ಕರ್ತವ್ಯ ನಿಷ್ಠೆ, ತ್ಯಾಗ–ಬಲಿದಾನವನ್ನು ಸ್ಮರಿಸಲಾಯಿತು. ಕೆ.ಆರ್.ನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಹಾಗೂ ಭಾಗಮಂಡಲದ ಡಿ.ಚೆನ್ನಮ್ಮ ಕಾಲೇಜು ವಿದ್ಯಾರ್ಥಿಗಳು ಸೈನಿಕರಂತೆ ವಸ್ತ್ರತೊಟ್ಟು, ಬಂದೂಕು ಹಿಡಿದು ಸಾಹಸ ನೃತ್ಯ ಪ್ರದರ್ಶನ ನೀಡುವ ಮೂಲಕ ದೇಶ ಕಾಯುವ ಯೋಧರಿಂದಲೇ ನಾವುಗಳು ಕ್ಷೇಮವಾಗಿದ್ದೇವೆ ಎಂಬುದನ್ನು ಮನದಟ್ಟು ಮಾಡಿಕೊಟ್ಟರು.

ಪ್ರೋತ್ಸಾಹ ನೀಡಿ: ಹೆಣ್ಣುಮಕ್ಕಳಿಗೆ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ನೀಡಿ ಪ್ರೋತ್ಸಾಹಿಸಿದರೆ ಸಾಧಿಸುತ್ತಾಳೆ. ದೇಶವನ್ನು ಕಾಯುವ ಶಕ್ತಿ ಹೆಣ್ಣುಮಕ್ಕಳಿಗೂ ಇದೆ ಎಂಬುದನ್ನು ಮನೋಜ್ಞ ಸಂಗೀತ–ನೃತ್ಯದೊಂದಿಗೆ ತಿಳಿಸಿಕೊಟ್ಟ ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು, ಸಮಾನ ಅವಕಾಶ, ಪ್ರೋತ್ಸಾಹ ನೀಡಿ ಎಂದು ಮನವಿ ಮಾಡಿದರು.

ಉಘೇ ಮಾದಪ್ಪ: ಬಯಲು ರಂಗಮಂದಿರದಲ್ಲಿ ಜಾನಪದ ಸೊಗಡನ್ನು ಪಸರಿಸಿದ ಮೈಸೂರಿನ ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ), ಶ್ರೀರಂಗಪಟ್ಟಣದ ಓಂ ಶ್ರೀನಿಕೇತನ ಕಾಂಪೋಸಿಟ್ ಪಿಯು ಕಾಲೇಜು ಹಾಗೂ ಚಾ.ನಗರದ ವಿದ್ಯಾವಿಕಾಸ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕಂಸಾಳೆ, ಪೂಜಾ ಕುಣಿತ, ಡೊಳ್ಳು ಕುಣಿತದೊಂದಿಗೆ ಜಾನಪದ ವೈಭವ ಮೆರೆದು ಮಾದಪ್ಪನ ಕೃಪೆಗೆ ಪಾತ್ರರಾದರು. ಹಾಗೆಯೇ ಯರಗನಹಳ್ಳಿಯ ನಿತ್ಯನಿರಂತರ ಟ್ರಸ್ಟ್, ಸುಕೃತ ಸ್ವತಂತ್ರ ಪದವಿ ಪೂರ್ವ ಕಾಲೇಜು ಹಾಗೂ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನ ವಿಶೇಷಚೇತನ ಮಕ್ಕಳು 'ರಾಮಾಯಣ ಕಥಾ ಪ್ರಸಂಗ', 'ಶಿವ ತಾಂಡವ' ನೃತ್ಯದ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರರಾದರಲ್ಲದೆ ಶಿಳ್ಳೆ–ಚಪ್ಪಾಳೆಗಳ ಸುರಿಮಳೆ ಗಿಟ್ಟಿಸಿದರು.

ತಾರಾ ಮೆರಗು ನೀಡಿದ ಉದಯೋನ್ಮುಖ ನಟ, ನಟಿಯರು....

'ದಿಯಾ' ಸಿನಿಮಾ ಮೂಲಕ ಬೆಳ್ಳಿ ತೆರೆಯಲ್ಲಿ ಕಾಣಿಸಿಕೊಂಡ ನಟಿ ಖುಷಿ, 'ಸ್ಕೂಕಿ ಕಾಲೇಜ್' ಸಿನಿಮಾ ನಟ ವಿವೇಕ್ ಹಾಗೂ ಸೂಪರ್ ಸ್ಟಾರ್ ಸಿನಿಮಾ ನಾಯಕ ನಟ ನಿರಂಜನ್ ಸುಧೀಂದ್ರ 'ಯುವ ಸಂಭ್ರಮ'ಕ್ಕೆ ತಾರಾ ಮೆರುಗು ನೀಡಿದರು. ಈ ವೇಳೆ ನಟಿ ಖುಷಿ ಹಾಗೂ ನಟ ವಿವೇಕ್, ಡಾ.ಪುನೀತ್ ರಾಜ್‌ಕುಮಾರ್ ಅವರ 'ಬೊಂಬೆ ಹೇಳುತೈತೆ' ಹಾಡನ್ನು ಹಾಡುವ ಮೂಲಕ ಸ್ಮರಿಸಿದರು. ಬಳಿಕ ಮುಂಬರುವ ದಿನಗಳಲ್ಲಿ ಬಿಡುಗಡೆಯಾಗುವ 'ಸ್ಕೂಕಿ ಕಾಲೇಜ್' ಹಾಗೂ 'ಸೂಪರ್ ಸ್ಟಾರ್' ಸಿನಿಮಾ ಟೀಸರ್‌ಗಳನ್ನು ಪ್ರದರ್ಶಿಸಲಾಯಿತು.

ಪೇಪರ್ ಕಟಿಂಗ್‌ನಲ್ಲಿ ಮೂಡಿದ ಪವರ್ ಸ್ಟಾರ್...

ಪೇಪರ್ ಕಟಿಂಗ್ ಕಲಾವಿದ ಟಿ.ಎಸ್.ಚಂದನ್, ಐದಾರು ನಿಮಿಷಗಳಲ್ಲಿ ಪೇಪರ್ ಕಟಿಂಗ್ ಮಾಡುವ ಮೂಲಕ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರ ಚಿತ್ರಿಸಿ ಗಮನ ಸೆಳೆದರು. ಇದಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ — ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮನೆಯಲ್ಲಿ ಇದ್ದು ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು, ಮಹಿಳೆಯರು 8th, 9th, SSLC, PUC ಪಾಸ್, ಫೇಲ್ ಆದ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಹೋಮ್ ನರ್ಸಿಂಗ್ ಟ್ರೈನಿಂಗ್ ನಾವೇ ಕೊಡುತ್ತೇವೆ ಸಂಬಳ: 22,000/– ಸಂಪರ್ಕಿಸಿ.
8951717070

ಬೇಕಾಗಿದ್ದಾರೆ
ನುಡಿ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಶ್ರೀ ರೇಣುಕಾ ಎಂಟರ್ ಪ್ರೈಸಸ್, ಪೂರ್ವ ಉಪ-ನೋಂದಣಾಧಿಕಾರಿಗಳ ಕಛೇರಿ ಎದುರು, ಡಾ|| ರಾಜ್‌ಕುಮಾರ್ ರಸ್ತೆ, ತ್ರಿವೇಣಿ ವೃತ್ತ ಸಾತಗಳ್ಳಿ ಬಡಾವಣೆ, ಮೈಸೂರು. ಎಸ್.ಚಂದ್ರಶೇಖರ್:
9986030489

SPANDANA MUSIC EVENTS
LIVE MUSIC & ORCHESTRA (KANNADA, HINDI, TAMIL, TELUGU) OLD & NEW FILM SONGS, DEVOTIONAL & LIGHT MUSIC FOR MARRIGE, BIRTHDAY, PARTIES AND ALL TYPES OF STAGE SHOWS
CONTACT
RAVI RAJ: 8015205238, 9686276488, 8618072325

20X30 / 30X40 / 30X50
ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಮಂಟಪ ಮನೆ

ನಮ್ಮಲ್ಲಿ ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634
9036742526

SITE FOR SALE
30x40 South West Corner Site for Sale Visvaprajna Layout (Gaddige Road, Bogadi) Near Rainbow School, Call:
9880273834

ತಕ್ಷಣ ಬೇಕಾಗಿದ್ದಾರೆ
SSLC / PUC / ITI Pass or Fail ಆಗಿದ್ದರು ಫ್ಯಾಕ್ಟರಿಯಲ್ಲಿ Helper ಕೆಲಸಕ್ಕೆ ಯುವಕರು / ಹುಡುಗರು ಸಂಪರ್ಕಿಸಿ. ESI / PF ಊಟದ ಸೌಲಭ್ಯವಿರುತ್ತದೆ ಹೌಸ್‌ಕೀಪಿಂಗ್ / ಸೆಕ್ಯೂರಿಟಿಗಾರ್ಡ್‌ಗಳು ಸಹ ಸಂಪರ್ಕಿಸಿ.
9035367083
6361548626

ಸೈಟು ಬೇಕಾಗಿದೆ
30x40
ವಿಜಯನಗರ 4ನೇ ಸ್ಟೇಜ್, 2ನೇ ಫೇಸ್ or ವಿಜಯನಗರ 3ನೇ ಸ್ಟೇಜ್, Please Brokers Excuse, Direct Owner Call
8660681118
Immidiate Registration

WANTED
Empulse Research and Data Analytics, Hiring for Data Analyst / Advanced Process Analyst. Required Fresh Graduates, Post Graduates (B.Com, B.Sc, M.Sc, MCom, MBA, B.E) Day Shift (Both Male and Female) Night Shift (Only Male Preferred) Good Communication and Basic Computer knowledge are required. Preferred Mechanical Engineer. Please forward resume to careers@empulseglobal.com
Contact: **8951195389**

SRA Package Tours
4 ದಿನಗಳ ಕೇರಳ ಪ್ರವಾಸ ಅನಂತ ಪದ್ಮನಾಭ ದೇವಸ್ಥಾನ, ಆಲೆಪ್ಪಿ, ಕೊಚಿನ್, ಕೋವಲಂ ಬೀಚ್, ಗುರುವಾಯೂರು, ಚೋಟಾನಿಕರ ದೇವಿ ದೇವಸ್ಥಾನ, ಜಟಾಯು ಅರ್ಥ್ ಸೆಂಟರ್. ಪ್ಯಾಮಿಲಿಗೆ ಪ್ರತ್ಯೇಕ ಕೊಠಡಿ. ಶುದ್ಧ ಸಸ್ಯಾಹಾರ, ವಿಶನರ್ ವಾಟರ್, ಕಾಫಿ / ಟೀ. ಕೇವಲ ರೂ. 5300/–. ಹೊರಡುವ ದಿನಾಂಕ: 28–10–2022 ಸಂಜೆ 6 ಗಂಟೆಗೆ. ಸಂಪರ್ಕಿಸಿ:
Mob: 70222-71023

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ಖೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು
Mob.: 9986926101

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
6/10: ಶಿರಡಿ, ಪಂಡರಾಪುರ, ಶನಿ ಶಿಂಗನಾಪುರ, ಎಲ್ಲೋರ, ಘೃಶ್ನೇಶ್ವರ ಜ್ಯೋತಿರ್ಲಿಂಗ, ಸೋಲಾಪುರ. 1/11: ದೆಹಲಿ, ಕಾಶಿ, ಅಯೋಧ್ಯೆ, ಗಯಾ, ಪ್ರಯಾಗ್‌ರಾಜ್, ಆಗ್ರಾ, ಮಥುರಾ. 14/11: ಗುಜರಾತ್, ನಾಗನಾಥ್, ಸೋಮನಾಥ್, ನಿಷ್ಕಳಂಕ ಮಹದೇವ್, ದ್ವಾರಕಾ, ಬೇಟ್ ದ್ವಾರಕಾ, ಸರ್ದಾರ್ ವಲ್ಲಭ್‌ಭಾಯ್ ಪಟೇಲ್.
9964527782, 9591017782

SPRINT CONSTRUCTIONS
WORK WITH QUALITY
* CIVIL ENGINEERS * BUILDERS
20x30 SITE FOR SALE- 18 LAKHS
20x30 HOME - 36LAKHS
(MUDA, NEAR BELVADI, CLOSE TO HIGHWAY).
484, Chaduranga Road, R.K.Nagar, Mysuru-22
Ph: 9538525456, 0821-4525966
Web: www.sprintconstructions.net
BY SPRINT VENTURES PVT LTD.

PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ : 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ:
9108418233
9743217566

ಬೇಕಾಗಿದ್ದಾರೆ
ಮೈಸೂರಿನ ಬೋಗಾದಿ ರಿಂಗ್ ರೋಡ್‌ನಲ್ಲಿ ಇರುವ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಗ್ರಾಫಿಕ್ ಡಿಸೈನರ್ ಬೇಕಾಗಿದ್ದಾರೆ.
9900251990
7899007585

ಗೃಹ ಪ್ರವೇಶ, ಸತ್ಯನಾರಾಯಣ ಪೂಜೆ, ಗಣಪತಿ ಪೂಜೆಗಳಿಗೆ ಕರೆ ಮಾಡಿ
9164996391

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5400
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ & ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮಡಿಕೇರಿಯಲ್ಲಿ ಕಾರ್ಯನಿರ್ವಹಿಸಲು ಊಟ, ತಿಂಡಿ & ವಸತಿ ಸೌಲಭ್ಯವಿದೆ. ವಾರದ ರಜೆ ಇರುತ್ತದೆ. ESI, PF ಇದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ ಮತ್ತು KST ಹುಡುಗರು ಸಹ ಬೇಕಾಗಿರುತ್ತಾರೆ. (Washing Boys)
6364560079
6364448999

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

WANTED
* AUTOMOBILE STORE MANAGER
* SALES MAN
Above 2 years experience
Call : 93411 44444, Mysore

DOCUMENTS LOST
I, Pushpavalli, W/o. Late Ramakrishnarao, residing at Isro Layout, Bengaluru City have lost the **sale deed of the vacant site Janjar No. 455** on 17.9.2022 near Srirangapatna Bus stop.
Finders please contact: Vishnu Murthy: 9980658915

HIRING FOR OFFICE ADMIN
Company Name: Studio Edifice, Skill: MS office, Qualification: PUC or any Degree, Salary: Rs.8,000 to 10,000/-
9741621513

ಶ್ರೀ ಕಾಳಿ ಅಸೋಸಿಯೇಷನ್
ಜಮೀನು ಮಾರಾಟಕ್ಕೆ ಅಥವಾ ಖರೀದಿಗೆ, ಸೈಟು ಮಾರಾಟ, ಖರೀದಿಗೆ ದೊರೆಯುತ್ತದೆ. ಮನೆ ಸಾಲ, ಮನೆ ಕಟ್ಟುವುದಕ್ಕೆ ಸಾಲ, 11ಎ, 11ಬಿ ಮತ್ತು ಕಾರ್ಪೋರೇಷನ್ ಸೈಟು ಅಥವಾ ಮನೆ ಕಟ್ಟುವುದಕ್ಕೆ ಸಾಲ ದೊರೆಯುತ್ತದೆ.
ಸಂಪರ್ಕಿಸಿ:
7975453083 / 7259784408

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ **30x40 (G/F, F/F, S/F, T/F)** ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ **1.75 Cr. (Slightly Negotiable).** ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ
7996504996

WANTED
Lecturers
M.Sc in Biochemistry- 5 post
B.Sc/M.sc in Cardiology- 5 post
9886654463

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೆಟ್ಟಿಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:– **12,818 + ESI & PF** ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ESIGN INDIA PVT. LTD.
REQUIRES
1) Techinical Backed -1 Post
2) Field Executive - 1 Post
Walk in interview on Today & Tomorrow. #290, 1st Floor, Ramaswamy Towers Opp. ICICI Bank, Ramavilasa Road.
9902516988

REQUIRED
10 Female Telecallers, Qualification: SSLC & Above, Languages: Kannada, English, Hindi, Tamil, Telugu, Malayalam
9964885548

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed,) ವಿವಾಹ ನೊಂದಣಿಗೆ ಕರೆ ಮಾಡಿ (2nd Marriage also)
9164743059

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596



SUNZONE SOLAR SYSTEM
VM Double Road, Kuvempunagar, Mysuru
9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಶ್ರೀ ರಾಘವೇಂದ್ರ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಪಂ.ಎಸ್.ಕ.ಪ್ರಶಾಂತ್ ಆಚಾರ್ಯ
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ ದಾಂಪತ್ಯ ಸಮಸ್ಯೆ, ನಾಗದೋಷ, ಕುಜ ದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲಭಾದೇ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ತಿಳಿಸುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ ಕಾಂಪ್ಲೆಕ್ಸ್, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ) ಮೈಸೂರು.
9740947045

Shop for Sale in MUDA Complex
Ramakrishnanagar, Mysore.
Contact:
Mob: 9483358399

SITE FOR SALE
In Prime Location 30x40, 30x50 MUDA Approved On Bogadi Gaddige Main Road, Ready for Construction To Buy Directly - Call
9036750192

ಬೇಕಾಗಿದ್ದಾರೆ
ಫೋಟೋ ಶಾಪ್, ಕೋರಲ್ ಡ್ರಾ ಗೊತ್ತಿರುವ, ಚಾಮರಾಜನಗರದಲ್ಲಿ ಕೆಲಸ ಮಾಡಲು ಇಚ್ಛಿಸುವವರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ
9480850464
9449080086

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಪ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

WANTED
For Wholesale Medical Stores
Order Boys - 3 Nos.
Delivery Boys - 3 Nos.
Office Assistants (Ladies) - 3 Nos.
10th, PUC, any Degree pass / fail. Contact:
8884777320, 9739377827

Change of Name
I, Polamarasetty Ramesh, residing at No. 583, Ground Floor, 2nd Cross, KRS Road, Kaveri Badavane, Hootagalli, Mysore-570 018. My name is wrongly spelled in my driving license as Ramesh. P. for the correction of my name from Ramesh. P. to Polamarasetty Ramesh on my free will, sworn in before Notary B.S. Vijayalakshmi, Mysuru, vide affidavit dated 20-09-2022.
Sd/- Polamarasetty Ramesh

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಿ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಠಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

FOR LEASE
2 bedroom house, ground floor with one attached bathroom available for lease only. Near Kamakshi Hospital, Saraswathipuram, Mysore. Expected 15 Lakhs.
Brokers excuse. *Contact:*
9731748108, 9845484733

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ.
ಸಂಪರ್ಕಿಸಿ
9449380528
7026498386

FOR SALE
A) Commercial in Ring Road facing 40x60 and 50x80 Hunsur Road and Bannur Road
B) 30x40 New Duplex House Near Hari Vidyalaya
C) 30x40 40x60 New RT Nagar attch
D) 30x40 12 Lakhs 30x50 15 L sites available attch Brahmins E blk Layout
PRAKRUTHI PROPERTIES
90359 90359 / 95386 90359

HOUSE FOR RENT
Ground floor, 2 BHK house for rent with all facilities in 'H' Block, Ramakrishnanagar for Veg. only.
Brokers excuse. Contact:
Mob: 8073049940

Change of Name
I, Mysore Channappa Lilavathi, residing at Ramamandira Beedi, Srirangapatna Taluk, Bidarahalli, Mandya-571415, has changed my name as M.C. Leelavathi on my own free will in front of Notary C. Mangala on 20-9-2022 at Mysore.
Sd/- **M.C. Leelavathi**

PG Available for Girls / Boys in Bogadi.
Mob: 9972080466

Wanted / Required
Supervisor, Civil Work for Madikeri Resort Construction site with PUC / Diploma / Engineering / Any Degree.
Mob: 9739247788

HOUSE FOR SALE
30x40, GF, 2 BHK, FF, 2 BHK, furnished near Hari Vidyalaya School, Bogadi.
Mob: 9482883566

ತಕ್ಷಣವೇ ಬೇಕಾಗಿದ್ದಾರೆ
ಆಸ್ಪತ್ರೆಯ ರೋಗಿಗಳನ್ನು ನೋಡಿಕೊಳ್ಳಲು ಹೌಸ್ ಕೀಪಿಂಗ್ ಲೇಡೀಸ್, ಹುಡುಗರು, ವಾರ್ಡ್ ಬಾಯ್ಸ್, ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
8884286123 / 8884286321
8884339446

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ.
Salalry: 13,000 - 21,000+ ESI, PF ಇಂದೇ ಸಂಪರ್ಕಿಸಿ
9035734821

Document Lost
Mohammed Shsmshur Rehaman, Door No. 810 A-Zone, 3rd Stage, Rajivnagar, Mysore-570 019, lost original khata paper belongs plot #3554, 3rd Stage, N.R. Mohalla.
Finders please contact:
Mob: 9845662740

Change of Name
I, **Nagaraj Kashyap B.K.,** (Aadhar No. 9620 7747 5540), residing at No. 79, Near Bisilumaramma Temple, 1st Stage, Telecom Layout, Bogadi, Mysuru-570 009, have changed my name as **Nagaraj Kashyap Banavara** on my own free will, in front of Notary G.V. Sudha on 21.9.2022.
Sd/- Nagaraj Kashyap Banavara

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಿವಾಹ ಭಾಗ್ಯ
ಗ್ಲೋಬಲ್ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
FREE REGISTRATION
79751-42004

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 10,500/– ESI & PF ಸೌಲಭ್ಯವಿರುತ್ತದೆ.
8431589810
9164181853

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 14000/-
Ph.9380142144

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
7676844160
6361056646

ಕಳೆದಿದೆ
ಮುನಾವರ್ ಬೇಗ್, ನಂ. 522/ಎ, ಎಂ.ಜಿ. ರಸ್ತೆ ಬನುಮಯ್ಯ ಕಾಲೇಜು ಎದುರು, ಉದಯಗಿರಿ, ಮೈಸೂರು. ತಮ್ಮ ಮನೆಯನ್ನು ಮಂಡಿ ಮೊಹಲ್ಲಾದಿಂದ ಉದಯಗಿರಿಗೆ ವರ್ಗಾಯಿಸುವಾಗ ಸದರಿ ರವರ ಮನೆ ನಂ. 2158, ತುರಬಲಿ ಸ್ಟ್ರೀಟ್, ಮಂಡಿ ಮೊಹಲ್ಲಾ ವಿಳಾಸದ ದಾಖಲಾತಿ ಪತ್ರ ಕಳೆದುಹೋಗಿದೆ.
ಸಿಕ್ಕಿದವರು ಸಂಪರ್ಕಿಸಿ:
Mob: 9886607413

ಕಳೆದಿದೆ
ಮೇಘ ಎಸ್. ಬಿನ್ ಸುಬ್ಬಣ್ಣ, ಅಯ್ಯನಪುರ ಗ್ರಾಮ, ಚಂದಕವಾಡಿ ಹೋಬಳಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಸೇರಿದ ಡಿಪ್ಲೋಮಾ ಮೂರು ವರ್ಷದ ಆರು ಸೆಮಿಸ್ಟರ್‌ನ ಎಲ್ಲಾ ಮೂಲ ಅಂಕಪಟ್ಟಿಗಳು (ರಿಜಿಸ್ಟರ್ ನಂ. 130ಸಿಎಸ್14030) ಮತ್ತು ಡಿಪ್ಲೋಮಾ ಸರ್ಟಿಫಿಕೇಟ್ ದಿನಾಂಕ 25–7–2022ರಂದು ಕಳೆದು ಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9113085533

WANTED
Drivers Wanted for TATA 1109 and Eicher 1110 Ginger Load from Mysore to Chennai & Hyderabad. Contact:
9538811425
9448550972

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ಕೆಲಸಕ್ಕೆ ಕ್ಯಾಷಿಯರ್, ಹೆಲ್ಪರ್, ಹುಡುಗರು – ಹುಡುಗಿಯರು ಬೇಕಾಗಿದ್ದಾರೆ. ಹಿನಕಲ್, ಮೈಸೂರು. ಸಂಪರ್ಕಿಸಿ:
9538811425
8088393837

HOUSE FOR RENT
Single King Size bedroom 2nd floor with balcony at Gokulam, Mysore.
Contact:
9900237315

WANTED
Service Technician
ITI holder/ 2nd PUC for Home Appliances Authorized Service Center & KENT RO Water Purifier Service Center. *Contact:*
9900237315, 9845963421

MICROWAVE OVEN SERVICES INDIAN / IMPORTED
9900237315 / 9845963421
08214266495

COOK
Senior Brahmin Lady Available to Cook
7.30 am - 9.30 am or 1.30 pm - 4.30 pm, Gokulam, Vontikoppal, J.L.Puram Area, Bramin Home Preferred
9342575289
7019351482

WE ARE HIRING
Business Development Associates All over Karnataka Salary attractive Salary + Incentives, Qualification: SSLC, PUC, Any Degree. Contact:
9886457675
9341965625

ಮೈತ್ರಿ ಅಸೋಸಿಯೇಟ್ಸ್
ನಮ್ಮಲ್ಲಿ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ಮಾಡಿಸಿ ಕೊಡಲಾಗುತ್ತದೆ. ಪರ್ಸನಲ್ ಲೋನ್, ಬಿಜಿನೆಸ್ ಲೋನ್, ಆಸ್ತಿ ಮೇಲೆ, ಗೃಹ ನಿರ್ಮಾಣ, ಸೈಟ್ ಖರೀದಿ, ಮನೆ ಖರೀದಿ, ರೆವಿನ್ಯೂ ಸೈಟ್, 11 ಎ, 11 ಬಿ, ಖಾತೆಗಳಿಗೆ ಸಾಲ ಹಾಗೂ ವಾಹನಗಳ ಇನ್ಸೂರೆನ್ಸ್ ಕೂಡ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7353853281
9845418798

ಸೈಟು ಮಾರಾಟಕ್ಕಿದೆ
30x50 Site No. 561/B ನೊಂದಣಿಗೆ ರೆಡಿ ಇದೆ. ಶ್ರೀ ನಂಜುಡೇಶ್ವರ ನಗರ, ತಳೂರು ಗ್ರಾಮ, ಜಯಪುರ ಹೋಬಳಿ, ಮೈಸೂರು ತಾ||
9448063043
9980888843

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಕೂಡಲೇ ಸಂಪರ್ಕಿಸಿ.
ಡಾ. ಗುರೂಜಿ ಮೈಸೂರು
6361740552
www.bhandhana.com

IMMEDIATE HIRING IN MYSORE
Qualification: 10th, ITI, Diploma, PUC, Any Degree, Technicain - Post
Salary- 15,000 - 30,000, Age: 35 Below, Applicable for Male Candidates only
9880151303
6366638189

ಸಾಲ ಸೌಲಭ್ಯ ದೊರೆಯುತ್ತದೆ
ನಮ್ಮಲ್ಲಿ 11ಬಿ, 11ಎ, ರೆವಿನ್ಯು (**Registered Deed / Tax Paid**) **Property** ಗಳಿಗೆ ಸಾಲ ದೊರೆಯುತ್ತದೆ ಹಾಗೂ ಪಿಂಚಣಿದಾರರು (**Age <65**) ಆಟೋ ಚಾಲಕರು, ಬೀದಿಬದಿ ವ್ಯಾಪಾರಿ, ದಿನಕೂಲಿ ಕಾರ್ಮಿಕರು ಹಾಗೂ **ITR** ಇಲ್ಲದವರಿಗೂ ಸಹ ಮನೆ ಕಟ್ಟಲು, ಮನೆ ಕೊಳ್ಳಲು ಹಾಗೂ ಮನೆ ಅಡಮಾನ ಸಾಲ ಸೌಲಭ್ಯಗಳು ದೊರೆಯುತ್ತದೆ.
9606062114

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಸಹೋದರಿಯ ತಿಥಿ ಕಾರ್ಡ್ ಹಂಚಲು ಹೋದ ಸಹೋದರ ಸಾವು

- ದಾರಿ ಮಧ್ಯದಲ್ಲಿ ಕಾದು ಕುಳಿತಿದ್ದ ಜವರಾಯ
- ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ
- ಪಾಂಡವಪುರದ ಹೈಮಾಸ್ಟ್ ವೃತ್ತದಲ್ಲಿ ಬೈಕ್‌ಗೆ ಬಸ್ ಡಿಕ್ಕಿ


ವಸಂತರಾಜ್

ಪಾಂಡವಪುರ, ಸೆ.21– ವಾರದ ಹಿಂದಷ್ಟೇ ಸಾವನ್ನಪ್ಪಿದ್ದ ಸಹೋದರಿಯ 11ನೇ ದಿನದ ಕಾರ್ಯಕ್ಕೆ ಬಂಧುಗಳಿಗೆ ಕಾರ್ಡ್ ನೀಡಲು ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಯುವಕನೊಬ್ಬ ಸಾವನ್ನಪ್ಪಿರುವ ಮನಕಲಕುವ ಘಟನೆ ಪಟ್ಟಣದ ಹೈಮಾಸ್ಟ್ ವೃತ್ತದಲ್ಲಿ ಬುಧವಾರ ನಡೆದಿದೆ.

ತಾಲೂಕಿನ ಅಂತನಹಳ್ಳಿ ಗ್ರಾಮದ ಲೋಕೇಶ್ ಅವರ ಪುತ್ರ ವಸಂತರಾಜ್(32) ಮೃತಪಟ್ಟ ಬೈಕ್ ಸವಾರ. ಈತನೊಂದಿಗೆ ತೆರಳುತ್ತಿದ್ದ ಅದೇ ಗ್ರಾಮದ ಮಹದೇವಪ್ಪ ಅವರ ಪುತ್ರ ಮಂಜು(37) ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಯ ವಿವರ: ವಸಂತ್‌ರಾಜ್ ಹಾಗೂ ಮಂಜು ಸೋದರರ ಮಕ್ಕಳಾಗಿದ್ದು, ವಾರದ ಹಿಂದೆಯಷ್ಟೆ ವಸಂತ್‌ರಾಜ್ ಅವರ ಸಹೋದರಿ ಸಾವನ್ನಪ್ಪಿದ್ದರು. ಆಕೆಯ 11ನೇ ದಿನದ ಕಾರ್ಯದ ಕಾರ್ಡ್‌ನ್ನು ಸಂಬಂಧಿಕರಿಗೆ ನೀಡಲು ಇವರಿಬ್ಬರು ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಪಾಂಡವಪುರದ ಹೈಮಾಸ್ಟ್ ವೃತ್ತದಲ್ಲಿ ಎದುರಿನಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ವಸಂತ್‌ರಾಜ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಹಿಂಬದಿ ಸವಾರ ಮಂಜು ಗಂಭೀರವಾಗಿ ಗಾಯಗೊಂಡಿದ್ದಾನೆ. ಈತನನ್ನು ಸ್ಥಳೀಯರು ಪಾಂಡವಪುರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಾರದ ಹಿಂದಷ್ಟೇ ಮಗಳನ್ನು ಕಳೆದುಕೊಂಡಿದ್ದ ಕುಟುಂಬ ಈಗ ಮಗನನ್ನೂ ಕಳೆದುಕೊಂಡಿದೆ.

ಗ್ರಾಮಸ್ಥರ ಪ್ರತಿಭಟನೆ: ಬಸ್ ಡಿಕ್ಕಿಯಾಗಿ ಬೈಕ್ ಸವಾರ ಸಾವನ್ನಪ್ಪಿದ ವಿಚಾರ ತಿಳಿದ ಸ್ಥಳೀಯರು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಘಟನೆಗೆ ಬಸ್ ಚಾಲಕನ ಅಜಾಗರೂಕ ಚಾಲನೆಯೇ ಕಾರಣ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು. ಮುಖಂಡ ಬೊಮ್ಮರಾಜು ನೇತೃತ್ವದಲ್ಲಿ ಸಮಾವೇಶಗೊಂಡ ಗ್ರಾಮಸ್ಥರು ಪಟ್ಟಣದಲ್ಲಿ ಹಾದು ಹೋಗಿರುವ ಶ್ರೀರಂಗಪಟ್ಟಣ–ಬೀದರ್ ರಸ್ತೆಯನ್ನು ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು. ಅಲ್ಲದೇ ಸ್ಥಳಕ್ಕೆ ಸಾರಿಗೆ ಅಧಿಕಾರಿಗಳು ಬರಬೇಕು. ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪಟ್ಟಣದ ಹೈಮಾಸ್ಟ್ ವೃತ್ತದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕರು ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುತ್ತಿಲ್ಲ. ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುತ್ತಿದ್ದಾರೆ ಎಂದು ಸ್ಥಳಕ್ಕೆ ಬಂದ ಸಾರಿಗೆ ಅಧಿಕಾರಿಗಳಿಗೆ ದೂರಿದರು.

ಅಪಹೃತ ಪುತ್ರಿ ಪಾರು ಮಾಡುವಲ್ಲಿ ಪೊಲೀಸರ ನಿರ್ಲಕ್ಷ್ಯ ಆರೋಪ

ನೊಂದ ತಂದೆ ಆತ್ಮಹತ್ಯೆ

- ಗ್ರಾಮಸ್ಥರಿಂದ ಪೊಲೀಸ್ ಠಾಣೆ ಮುಂದೆ ಶವ ಇಟ್ಟು ಪ್ರತಿಭಟನೆ
- ಎಸ್ಪಿ ಭರವಸೆ ಹಿನ್ನೆಲೆಯಲ್ಲಿ ಧರಣಿ ಸ್ಥಗಿತ



ಕೆ.ಆರ್.ಪೇಟೆ, ಸೆ.21– ಅಪಹರಣಗೊಂಡಿರುವ ಪುತ್ರಿಯನ್ನು ರಕ್ಷಿಸಿ, ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಮನನೊಂದು ರೈತನೊರ್ವ ನೇಣಿಗೆ ಶರಣಾಗಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಬಿ.ಬಾಚನಹಳ್ಳಿ ಗ್ರಾಮದಿಂದ ವರದಿಯಾಗಿದ್ದು, ಪೊಲೀಸರೇ ಅಮಾಯಕನ ಆತ್ಮಹತ್ಯೆಗೆ ಕಾರಣ ಎಂದು ಆರೋಪಿಸಿ ಗ್ರಾಮಸ್ಥರು ಕೆ.ಆರ್.ಪೇಟೆ ಗ್ರಾಮಾಂತರ ಠಾಣೆ ಮುಂಭಾಗ ಶವವಿಟ್ಟು ಪ್ರತಿಭಟನೆ ನಡೆಸಿದರು.

ಬಿ.ಬಾಚನಹಳ್ಳಿ ಗ್ರಾಮದ ರವಿ(45) ಆತ್ಮಹತ್ಯೆಗೆ ಶರಣಾದ ರೈತನಾಗಿದ್ದು, ಸೆಪ್ಟೆಂಬರ್ 16ರಿಂದ ಈತನ ಅಪ್ರಾಪ್ತ ಪುತ್ರಿ ನಾಪತ್ತೆಯಾಗಿದ್ದಳು. ತಾನು ಹಾಗೂ ಪತ್ನಿ ಜಮೀನಿಗೆ ಹೋಗಿದ್ದಾಗ ಅಂದು ಬೆಳಗ್ಗೆ 10.30ರ ಸುಮಾರಿಗೆ ಅದೇ ಗ್ರಾಮದ ನರಸಿಂಹೇಗೌಡ ಎಂಬುವರ ಮಗ ಅಭಿ(26) ಮತ್ತು ತಿಮ್ಮೇಗೌಡ ಎಂಬುವರ ಮಗ ಸುನೀಲ್(31) ಅವರು ಬೈಕ್‌ನಲ್ಲಿ ಮನೆ ಬಳಿಗೆ ಬಂದು ಮಗಳನ್ನು ಪುಸಲಾಯಿಸಿ ಬೈಕ್‌ನಲ್ಲಿ ಕರೆದುಕೊಂಡು ಹೋಗಿದ್ದಾರೆ. ಇವರಿಬ್ಬರ ಮನೆಗಳಿಗೆ ಹೋಗಿ ನೋಡಿದಾಗ ಅವರು ಕೂಡ ಮನೆಯಲ್ಲಿರಲಿಲ್ಲ. ಮಗಳು ಮೊಬೈಲ್ ಸಂಪರ್ಕಕ್ಕೂ ಸಿಗುತ್ತಿಲ್ಲ. ತನ್ನ ಮಗಳು ಅಪ್ರಾಪ್ತಳಾಗಿರುವುದರಿಂದ ಈಕೆಯನ್ನು ಅಪಹರಿಸಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ರವಿ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಗೆ ಸೆಪ್ಟೆಂಬರ್ 17ರಂದು ದೂರು ಸಲ್ಲಿಸಿದ್ದರು. ತನ್ನ ಮಗಳನ್ನು ಅಭಿ ಮತ್ತು ಸುನೀಲ್ ಪುಸಲಾಯಿಸಿ ಕರೆದೊಯ್ಯಲು ಪಲ್ಲವಿ ಎಂಬಾಕೆಯೂ ಕೂಡ ಕಾರಣ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದರು. ಈ ಸಂಬಂಧ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು.

ಈ ನಡುವೆ ಬುಧವಾರ ಬೆಳಗ್ಗೆ ರವಿ ತನ್ನ ಜಮೀನಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರು ರವಿ ಶವವನ್ನು ಪೊಲೀಸ್ ಠಾಣೆ ಮುಂಭಾಗ ಇರಿಸಿ ಪ್ರತಿಭಟನೆ ಆರಂಭಿಸಿದರು. ರವಿ ಮಗಳನ್ನು ಹುಡುಕುವ ಪ್ರಯತ್ನವನ್ನೇ ಪೊಲೀಸರು ಮಾಡಿಲ್ಲ. ಅವರು ಬಾಲಕಿಯನ್ನು ಹುಡುಕಿ ಕೊಟ್ಟಿದ್ದರೆ ರವಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಈ ಆತ್ಮಹತ್ಯೆಗೆ ಪೊಲೀಸರೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಜೆ 7.30ರ ಸುಮಾರಿನಲ್ಲಿ ಜಿಲ್ಲಾ ಎಸ್ಪಿ ಯತೀಶ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ನಾಪತ್ತೆಯಾಗಿರುವ ರವಿ ಮಗಳ ಶಾಲಾ ದಾಖಲಾತಿಗಳನ್ನು ಪರಿಶೀಲಿಸಿ, ಆಕೆ ಅಪ್ರಾಪ್ತಳು ಎಂಬುದು ದೃಢಪಟ್ಟರೆ ಆಕೆಯನ್ನು ಕರೆದೊಯ್ದಿರುವವರನ್ನು ಬಂಧಿಸಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ನಂತರ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದುಕೊಂಡರು.

ಟ್ರಾವೆಲ್ಸ್‌ಗೆ ಬಾಡಿಗೆಗೆ ಬಿಟ್ಟ ಕಾರುಗಳ ಅಡಮಾನ ಮಾಡಿ ವಂಚನೆ: ವ್ಯಕ್ತಿ ಬಂಧನ



ಹಲಗೂರು, ಸೆ.21– ಟ್ರಾವೆಲ್ಸ್‌ಗೆ ಬಾಡಿಗೆಗೆಂದು ಪಡೆದ ಕಾರುಗಳ ನಂಬರ್ ಪ್ಲೇಟ್ ಬದಲಾಯಿಸಿ, ಅವುಗಳನ್ನು ಅಡಮಾನವಿಟ್ಟಿದ್ದ ವ್ಯಕ್ತಿಯನ್ನು ಬಂಧಿಸಿರುವ ಹಲಗೂರು ಠಾಣಾ ಪೊಲೀಸರು 19 ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ. ತಿ.ನರಸೀಪುರ ತಾಲೂಕು ಕೆಂಡನಕೊಪ್ಪಲು ಗ್ರಾಮದ ಕುಮಾರಸ್ವಾಮಿ ಎಂಬಾತನೇ ಬಂಧನಕ್ಕೊಳಗಾದವನಾಗಿದ್ದು, ತಾನು ಟ್ರಾವೆಲಿಂಗ್ ಏಜೆನ್ಸಿ ನಡೆಸುತ್ತಿರುವುದಾಗಿ ನಂಬಿಸುತ್ತಿದ್ದ ಈತ, ಟ್ಯಾಕ್ಸಿ ಮಾಲೀಕರಿಂದ ತನ್ನ ಟ್ರಾವೆಲ್ಸ್‌ಗೆ ಎಂದು ಕಾರುಗಳನ್ನು ಬಾಡಿಗೆಗೆ ಪಡೆದು, ಅವುಗಳನ್ನು ಅಡಮಾನವಿಡುತ್ತಿದ್ದ. ಅಲ್ಲದೇ, ಮಾತನಾಡಿರುವಂತೆ ಟ್ಯಾಕ್ಸಿ ಮಾಲೀಕರಿಗೆ ಬಾಡಿಗೆಯನ್ನು ಕೊಡುತ್ತಿರಲಿಲ್ಲ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ.

ವಿವರ: ಮಳವಳ್ಳಿ ಟೌನ್ ಎನ್‌ಇಎಸ್ ಬಡಾವಣೆ ನಿವಾಸಿ ಪುನೀತ್‌ಗೌಡ ಎಂಬುವರು ಸ್ವಿಫ್ಟ್ ಡಿಸೈರ್ (ಕೆಎ–09,ಸಿ.2119) ಖರೀದಿಸಿ ಟ್ಯಾಕ್ಸಿ ಚಾಲನೆ ಮಾಡುತ್ತಿದ್ದರು. ಅವರಿಗೇ ಮಳವಳ್ಳಿಯ ವಿದ್ಯಾವಿಕಾಸ ಶಾಲೆಯಲ್ಲಿ ವಾಹನ ಚಾಲನೆ ಕೆಲಸ ಸಿಕ್ಕಿದ ಕಾರಣ ತನ್ನ ಟ್ಯಾಕ್ಸಿಯನ್ನು ಟ್ರಾವೆಲ್ ಏಜೆನ್ಸಿಗೆ ಬಾಡಿಗೆಗೆ ಬಿಡಲು ನಿರ್ಧರಿಸಿದ್ದರು.

ಈ ವೇಳೆ ಪರಿಚಯಸ್ಥರ ಮೂಲಕ ಪುನೀತ್ ಗೌಡರನ್ನು ಹಲಗೂರಿನ ಹಾಡ್ಲಿ ಸರ್ಕಲ್‌ನ ಹೋಟೆಲೊಂದರಲ್ಲಿ ಭೇಟಿ ಮಾಡಿದ ಕುಮಾರಸ್ವಾಮಿ, ಟ್ಯಾಕ್ಸಿಯನ್ನು ಪಡೆದುಕೊಂಡು ತಿಂಗಳಿಗೆ 23 ಸಾವಿರ ರೂ. ಬಾಡಿಗೆ ಕೊಡುವುದಾಗಿ ಕರಾರು ಮಾಡಿಕೊಂಡಿದ್ದಾನೆ. ಕಾರನ್ನು ತೆಗೆದುಕೊಂಡು ಹೋದ ಕುಮಾರಸ್ವಾಮಿ ಎರಡು ತಿಂಗಳಾದರೂ ಪುನೀತ್ ಗೌಡರಿಗೆ ಬಾಡಿಗೆಯನ್ನೇ ಕೊಡಲಿಲ್ಲ. ಅಲ್ಲದೇ ತನ್ನ ಕಾರಿನ ಹಳದಿ ಬಣ್ಣದ ನಂಬರ್ ಪ್ಲೇಟ್‌ನ್ನು (ವಾಣಿಜ್ಯ ಬಳಕೆಗಾಗಿ ಬಳಸುವ ವಾಹನಗಳಿಗೆ ಅಳವಡಿಸುವ ನಂಬರ್ ಪ್ಲೇಟ್). ಬಿಳಿ ಬಣ್ಣದ ನಂಬರ್ ಪ್ಲೇಟ್ ಆಗಿ (ಖಾಸಗಿ ವಾಹನಗಳಿಗೆ ಅಳವಡಿಸುವ ನಂಬರ್ ಪ್ಲೇಟ್) ಬದಲಾಯಿಸಿ ಕಾರನ್ನು ಅಡಮಾನ ಇಟ್ಟಿರುವುದು ಗೊತ್ತಾಗಿದೆ. ಅದು ಮಾತ್ರವಲ್ಲದೇ ಈತ ಮಳವಳ್ಳಿ ಟೌನ್‌ನ ಅಭಿಷೇಕ್ ಎಂಬುವರ ಕಾರನ್ನು ಕೂಡ ಇದೇ ರೀತಿ ಪಡೆದು ಅಡಮಾನ ಇಟ್ಟಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಪುನೀತ್ ಗೌಡ ಹಲಗೂರು ಠಾಣೆ ಪೊಲೀಸರಿಗೆ ಸೆ.15 ರಂದು ದೂರು ಸಲ್ಲಿಸಿದ್ದರು. ತನಿಖೆ ನಡೆಸಿದ ಪೊಲೀಸರು, ಇಂದು ಆರೋಪಿ ಕುಮಾರಸ್ವಾಮಿಯನ್ನು ಬಂಧಿಸಿ ಅಡಮಾನ ವಿಟ್ಟಿದ್ದ 19 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಪ್ರಿಯಕರನೊಂದಿಗೆ ಸೇರಿ ಪತಿಯ ಹತ್ಯೆ ಮಾಡಿದ ಪತ್ನಿ

ಇಬ್ಬರೂ ಆರೋಪಿಗಳ ಬಂಧನ


ಹೇಮಂತ್ ನಾಗಮಣಿ

ಮಳವಳ್ಳಿ, ಸೆ.21– ತಮ್ಮ ಪ್ರೀತಿಗೆ ಅಡ್ಡಿಯಾಗಿದ್ದಾನೆ ಎಂಬ ಕಾರಣಕ್ಕಾಗಿ ಪತ್ನಿಯೋರ್ವಳು ಪ್ರಿಯಕರನೊಡಗೂಡಿ ಪತಿಯನ್ನೇ ಹತ್ಯೆಗೈದಿರುವ ಪ್ರಕರಣವನ್ನು ಭೇದಿಸಿರುವ ಮಳವಳ್ಳಿ ಟೌನ್ ಪೊಲೀಸರು ಪತ್ನಿ ಹಾಗೂ ಪ್ರಿಯಕರನನ್ನು ಬಂಧಿಸಿದ್ದಾರೆ.

ಮಳವಳ್ಳಿ ಟೌನ್‌ನ ಎನ್‌ಇಎಸ್ ಬಡಾವಣೆ ನಿವಾಸಿ ಶಶಿಕುಮಾರ್(33), ಪ್ರೀತಿಸಿ ಮದುವೆಯಾದ ಪತ್ನಿಯಿಂದಲೇ ಹತ್ಯೆಗೀಡಾದವನಾಗಿದ್ದು, ಈತನ ಪತ್ನಿ ನಾಗಮಣಿ(29) ಮತ್ತು ಆಕೆಯ ಪ್ರಿಯಕರ ಕನಕಪುರದ ಹೇಮಂತ್(25) ಬಂಧನಕ್ಕೊಳಗಾಗಿದ್ದಾರೆ.

ವಿವರ: ಹತ್ಯೆಗೀಡಾದ ಶಶಿಕುಮಾರ್ ಮತ್ತು ನಾಗಮಣಿ ಕಳೆದ 12 ವರ್ಷದ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ಇವರಿಗೆ 9 ಮತ್ತು 12 ವರ್ಷದ ಗಂಡು ಮಕ್ಕಳಿದ್ದಾರೆ. ಈ ನಡುವೆ ನಾಗಮಣಿ ಕನಕಪುರದ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋಗುತ್ತಿದ್ದು, ಅಲ್ಲಿ ತನ್ನ ಸಹೋದ್ಯೋಗಿಯಾಗಿದ್ದ ಹೇಮಂತ್‌ನ ಪ್ರೀತಿಯ ಬಲೆಗೆ ಬಿದ್ದಿದ್ದಾಳೆ. ಈ ವಿಷಯ ತಿಳಿದು ಶಶಿಕುಮಾರ್ ಪದೇ ಪದೆ ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಈ ವೇಳೆ ಆತನ ಮನೆಯಲ್ಲೇ ವಾಸವಿದ್ದ ತಾಯಿ ತಾಯಮ್ಮ ಮತ್ತು ಸಂಬಂಧಿಕರು ದಂಪತಿ ಸಮಾಧಾನಪಡಿಸಿ, ನಾಗಮಣಿಗೆ ಬುದ್ಧಿವಾದ ಹೇಳುತ್ತಿದ್ದರು ಎನ್ನಲಾಗಿದೆ.

ಕನಕಪುರದ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋದರೆ ಹೇಮಂತ್‌ನ ಜೊತೆಗಿನ ಸಂಬಂಧ ಮುಂದುವರೆಯುತ್ತದೆ ಎಂದು ಭಾವಿಸಿದ ಶಶಿಕುಮಾರ್, ಕಳೆದ ಎರಡು ತಿಂಗಳಿಂದ ಪತ್ನಿಯನ್ನು ಕೆಲಸಕ್ಕೆ ಕಳುಹಿಸಿರಲಿಲ್ಲ ಎಂದು ಹೇಳಲಾಗಿದೆ. ಪ್ರಿಯಕರನ ಭೇಟಿ ಮಾಡಲಾಗದೇ ಮನೆಯಲ್ಲೇ ಉಳಿದಿದ್ದ ನಾಗಮಣಿ, ತನ್ನ ಪತಿಗೆ ಬೇರೊಬ್ಬ ಮಹಿಳೆ ಜೊತೆ ಅನೈತಿಕ ಸಂಬಂಧವಿದೆ ಎಂದು ಜಗಳ ತೆಗೆದಿದ್ದಾಳೆ. ಆಗಲೂ ಕೂಡ ಸಂಬಂಧಿಕರು ಸಮಾಧಾನಪಡಿಸಿದ್ದಾರೆ.

ಪತಿ ಕೊಲ್ಲಲು ಜಗಳವಾಡಿ ಅತ್ತೆ ಯನ್ನೇ ಓಡಿಸಿದ್ದಳು: ಹೇಮಂತ್‌ನೊಂದಿಗಿನ ಪ್ರೀತಿಗೆ ಅಡ್ಡಲಾಗಿರುವ ಪತಿಯನ್ನು ಹತ್ಯೆ ಮಾಡಬೇಕೆಂದು ಸಂಚು ರೂಪಿಸಿದ್ದ ನಾಗಮಣಿ, ಮನೆಯಲ್ಲೇ ಇರುತ್ತಿದ್ದ ಅತ್ತೆಯನ್ನು ಓಡಿಸಲು ಪ್ಲಾನ್ ಮಾಡಿದ್ದಾಳೆ. ಸೆ.16ರಂದು ಇದ್ದಕ್ಕಿದ್ದಂತೆ ಅತ್ತೆ ಮೇಲೆ ಹರಿಹಾಯ್ದ ನಾಗಮಣಿ "ನಾನು ಕೊಟ್ಟ ಕೂಳು ತಿನ್ನುತ್ತಿದ್ದೀಯಾ" ಎಂಬುದು ಸೇರಿದಂತೆ ಅತ್ತೆಯ ಮನಸ್ಸಿಗೆ ಬೇಸರವಾಗುವಂತೆ ಮಾತನಾಡಿದ್ದಾಳೆ. ಇದರಿಂದ ಮನನೊಂದ ತಾಯಮ್ಮ, ಅದೇ ದಿನ ಬೆಂಗಳೂರಿನ ಜೆಪಿ ನಗರದಲ್ಲಿರುವ ಮಗಳ ಮನೆಗೆ ಹೋಗಿದ್ದಾರೆ. ಇದರಿಂದಾಗಿ ಪತಿಯನ್ನು ಕೊಲ್ಲಲು ನಾಗಮಣಿಗೆ ಅವಕಾಶ ದೊರೆಯಿತು.

ಸೆ.18ರಂದು ರಾತ್ರಿ ಪ್ರಿಯಕರನನ್ನು ಮನೆಗೆ ಕರೆಸಿಕೊಂಡ ನಾಗಮಣಿ, ನಿದ್ರೆ ಮಾಡುತ್ತಿದ್ದ ಪತಿಯ ಮುಖಕ್ಕೆ ದಿಂಬು ಅದುಮಿ ಹಾಗೂ ದುಪ್ಪಟ್ಟಾದಿಂದ ಕುತ್ತಿಗೆಯನ್ನು ಬಿಗಿದು ಹತ್ಯೆ ಮಾಡಿದ ನಂತರ ಬೆಂಗಳೂರಿಗೆ ಕರೆ ಮಾಡಿ ಪತಿಯನ್ನು ಯಾರೋ ಕೊಲೆ ಮಾಡಿದ್ದಾರೆ ಎಂದು ಅತ್ತೆಗೆ ತಿಳಿಸಿದ್ದಾಳೆ. ತನ್ನನ್ನು ಹಾಗೂ ಮಗನನ್ನು ಪತಿಯೇ ಕಟ್ಟಿಹಾಕಿ ರೂಮಿಗೆ ದೂಡಿ ಚಿಲಕ ಹಾಕಿಕೊಂಡಿದ್ದ. ಆತ ಹೇಗೆ ಸತ್ತ ಎಂಬುದು ಗೊತ್ತಿಲ್ಲ ಎಂದು ಕೂಡ ಹೇಳಿದ್ದಳು. ಆಕೆಯ ವರ್ತನೆ ಹಾಗೂ ಘಳಿಗೆಗೊಂದು ರೀತಿ ಮಾತನಾಡುತ್ತಿದ್ದರಿಂದ ಸಂಶಯಗೊಂಡು ತಾಯಮ್ಮ ಮಳವಳ್ಳಿ ಟೌನ್ ಠಾಣೆಗೆ ತನ್ನ ಮಗನನ್ನು ಕೊಲೆ ಮಾಡಲಾಗಿದೆ ಎಂದು ಸೆ.19ರಂದು ದೂರು ಸಲ್ಲಿಸಿದ್ದರು.

ಘಟನಾ ಸ್ಥಳಕ್ಕೆ ಮಂಡ್ಯ ಜಿಲ್ಲಾ ಎಸ್ಪಿ ಯತೀಶ್, ಮಳವಳ್ಳಿ ಡಿವೈಎಸ್ಪಿ ನವೀನ್‌ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಎ.ಕೆ. ರಾಜೇಶ್ ಭೇಟಿ ನೀಡಿ ಪರಿಶೀಲಿಸಿದಾಗ ಹೊರಗಿನಿಂದ ಯಾರೋ ಬಂದು ಕೊಲೆ ಮಾಡಿದಂತೆ ಕಂಡು ಬಂದಿಲ್ಲ. ಈ ಹಿನ್ನೆಲೆಯಲ್ಲಿ ನಾಗಮಣಿಯನ್ನು ತೀವ್ರವಾಗಿ ವಿಚಾರಣೆಗೊಳಪಡಿಸಿದಾಗ ಆಕೆಯೇ ತನ್ನ ಪ್ರಿಯಕರನೊಡಗೂಡಿ ಪತಿಯನ್ನು ಹತ್ಯೆ ಮಾಡಿರುವುದು ಬಯಲಾಗಿದೆ. ಪೊಲೀಸರು ನಾಗಮಣಿ ಮತ್ತು ಪ್ರಿಯಕರ ಹೇಮಂತ್‌ನನ್ನು ಮಂಗಳವಾರ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಕಾರು ಉಡುಗೊರೆ, ಹಣ ಡಬ್ಬಲ್ ನೀಡುವ ಆಮಿಷ: ಅಮಾಯಕರಿಗೆ ಲಕ್ಷಾಂತರ ರೂ. ವಂಚನೆ

ಮುಂದುವರೆದ ಆನ್‌ಲೈನ್ ದೋಖಾ

ಮಂಡ್ಯ, ಸೆ.21–ಕಾರು ಬಹುಮಾನ ಬಂದಿದೆ ಎಂದು ಪೋಸ್ಟ್ ಮೂಲಕ ಮಾಹಿತಿ ನೀಡಿ ಇಬ್ಬರಿಗೆ ಲಕ್ಷಾಂತರ ರೂ. ವಂಚನೆ ಹಾಗೂ ಆನ್‌ಲೈನ್ ಮೂಲಕ ಟಾಸ್ಕ್ ನಿರ್ವಹಿಸಿದರೆ ಹಣ ದುಪ್ಪಟ್ಟಾಗುತ್ತದೆ ಎಂದು ನಂಬಿಸಿ ವಿದ್ಯಾರ್ಥಿನಿಗೆ 1.65 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮಂಡ್ಯ ತಾಲೂಕು ಗೆಜ್ಜಲಗೆರೆ ಟೌನ್‌ನ ಜಿ.ಎಸ್.ಮನೋಹರ್ (41) ಎಂಬುವರಿಗೆ ಸ್ಪೀಡ್ ಪೋಸ್ಟ್‌ವೊಂದು ಬಂದಿದ್ದು, ಅದರಲ್ಲಿ ನ್ಯಾಪ್‌ಟಾನ್ ಆನ್‌ಲೈನ್ ಶಾಪಿಂಗ್ ಕಂಪನಿಯಿಂದ 8.20 ಲಕ್ಷ ರೂ. ಮೌಲ್ಯದ ಸ್ವಿಫ್ಟ್ ಡಿಸೈರ್ ಬಹುಮಾನ ಬಂದಿದೆ ಎಂದು ತಿಳಿಸಲಾಗಿದೆ. ಕೂಪನ್‌ನಲ್ಲಿದ್ದ ನಂಬರ್‌ಗೆ ಅವರು ಕರೆ ಮಾಡಿದಾಗ, ನಿಮಗೆ ಕಾರು ಅಥವಾ ಹಣ ನೀಡುತ್ತೇವೆ ಎಂದು ತಿಳಿಸಿದ ವ್ಯಕ್ತಿಯು ಹಣ ಪಡೆಯಲು 9,400 ರೂ. ರಿಜಿಸ್ಟ್ರೇಷನ್ ಫೀಸ್ ಕಟ್ಟಬೇಕೆಂದು ತಿಳಿಸಿದ್ದಾನೆ. ಅವರು ಹಣ ಪಾವತಿಸಿದ ನಂತರ ಜಿಎಸ್‌ಟಿ ಹಾಗೂ ಡಿಟಿಎಸ್ ಚಾರ್ಜ್ ಎಂದು ತಿಳಿಸಿ ಒಟ್ಟು 97,600 ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಆನಂತರ ಅವರಿಗೆ ಯಾವುದೇ ರೀತಿಯ ಬಹುಮಾನ ಹಣ ಬಂದಿಲ್ಲ.

ಮತ್ತೊಂದು ಪ್ರಕರಣದಲ್ಲಿ ಪಾಂಡವಪುರ ತಾಲೂಕು ಅರಳಕುಪ್ಪೆ ಗ್ರಾಮದ ವಿದ್ಯಾರ್ಥಿ ಮದನ್(23) ಎಂಬಾತನ ಸಹೋದರಿ ಸಹನಾ ಎಂಬಾಕೆಯ ಹೆಸರಿಗೆ ಮೀಸೋ ಎಂಬ ಕಂಪನಿಯಿಂದ ಸ್ಪೀಡ್ ಪೋಸ್ಟ್ ಬಂದಿದ್ದು, 14.80 ಲಕ್ಷ ರೂ. ಮೌಲ್ಯದ ಕಾರು ಬಹುಮಾನ ಬಂದಿರುವುದಾಗಿ ತಿಳಿಸಲಾಗಿದೆ. ನಂತರ ಮೀಸೋ ಕಂಪನಿಯವರು ಎಂದು ಕರೆ ಮಾಡಿದವರು ಕಾರಿನ ಬದಲು ಹಣ ಬೇಕೆಂದರೆ ಶೇ.4ರಷ್ಟು ತೆರಿಗೆ ಪಾವತಿಸಬೇಕೆಂದು ತಿಳಿಸಿ, ಮೊದಲಿಗೆ 48 ಸಾವಿರ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ನಂತರ ಜಿಎಸ್‌ಟಿ, ಆರ್‌ಬಿಐ ತೆರಿಗೆ, ಆರ್‌ಬಿಐನಿಂದ ಎನ್‌ಓಸಿ ಪಡೆಯಲು ಶುಲ್ಕ ಎಂದೆಲ್ಲಾ ತಿಳಿಸಿ ಒಟ್ಟು 1,63,400 ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಮಂಡ್ಯ ನಗರದ ಬಿಡಿಓ ಕ್ವಾರ್ಟರ್ಸ್ ನಲ್ಲಿ ವಾಸವಿರುವ ವಿದ್ಯಾರ್ಥಿನಿ ಬಿ.ಯು.ನಿಶ್ಚಿತಾ (23) ಎಂಬಾಕೆಗೆ ಸ್ನೇಹಿತೆ ಅನುಸೂಯಾ ಎಂಬಾಕೆ ಕರೆ ಮಾಡಿ, ವ್ಯಾಕ್ಸ್ ವರ್ಕ್ ಫ್ರಮ್ ಹೋಂ ಎಂಬ ವೆಬ್‌ಸೈಟ್ ಮೇಲೆ ಕ್ಲಿಕ್ ಮಾಡಿ ಅವರು ನೀಡುವ ಟಾಸ್ಕ್‌ಗಳನ್ನು ಪೂರ್ಣಗೊಳಿಸಿದರೆ ನಾವು ರೀಚಾರ್ಜ್ ಮಾಡಿದ ಹಣಕ್ಕೆ ಡಬ್ಬಲ್ ಹಣ ಕೊಡುತ್ತಾರೆ ಎಂದು ತಿಳಿಸಿದ್ದಾಳೆ. ಅದನ್ನು ನಂಬಿದ ನಿಶ್ಚಿತಾ, ವೆಬ್‌ಸೈಟ್ ಮೇಲೆ ಕ್ಲಿಕ್ ಮಾಡಿ, ಒಮ್ಮೆ ಟಾಸ್ಕ್‌ಗಳನ್ನು ಪೂರೈಸಿದಾಗ ಅವರ ಖಾತೆಯಿಂದ 42,371 ರೂ. ಕಡಿತಗೊಂಡಿದೆ. ಮಾರನೇ ದಿನವೂ ಟಾಸ್ಕ್ ಪೂರೈಸಿದಾಗ 1,23,468 ರೂ. ಸೇರಿದಂತೆ ಒಟ್ಟಾರೆ 1,65,839 ರೂ. ಕಡಿತವಾಗಿದೆ.

ತನ್ನ ಹಣ ಡಬ್ಬಲ್ ಆಗಿದೆ ಎಂದು ನಂಬಿದ ನಿಶ್ಚಿತಾ, ತನಗೆ ಹಣ ನೀಡಿ ಎಂದು ಕರೆ ಮಾಡಿ ಕೇಳಿದಾಗ ಮಾತನಾಡಿದ ವ್ಯಕ್ತಿಯು, ನಿಮ್ಮ ಹಣ ಡಬ್ಬಲ್ ಆಗಿದೆ. ಅದನ್ನು ಪಡೆಯಬೇಕಾದರೆ ಶೇ.15ರಷ್ಟು ಜಿಎಸ್‌ಟಿ ಪಾವತಿಸಬೇಕು ಎಂದು ತಿಳಿಸಿದ್ದಾನೆ. ಅಷ್ಟರಲ್ಲಿಯೇ ತಾನು ಮೋಸ ಹೋಗಿರುವುದನ್ನು ಮನವರಿಕೆ ಮಾಡಿಕೊಂಡ ವಿದ್ಯಾರ್ಥಿನಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಈ ಮೂರು ಪ್ರಕರಣಗಳು ಮಂಡ್ಯ ಸೆನ್ ಠಾಣೆಯಲ್ಲಿ ದಾಖಲಾಗಿವೆ.


ಸಾಲ ಬಾಧೆ; ರೈತ ಆತ್ಮಹತ್ಯೆ



ಕೆ.ಆರ್.ಪೇಟೆ, ಸೆ.21– ಸಾಲ ಬಾಧೆಯಿಂದ ರೈತನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಿಕ್ಕೇರಿ ಸಮೀಪದ ಶಂಕರಪುರ ಗ್ರಾಮದಲ್ಲಿ ಬುಧವಾರ ನಡೆದಿದೆ. ಗ್ರಾಮದ ಬೋಜೇಗೌಡ ಅಲಿಯಾಸ್ ಚೇತು(31) ಮೃತಪಟ್ಟ ರೈತ. ಈತ ತನ್ನ ಜಮೀನಿನಲ್ಲಿ ಮೂರ್‍ನಾಲ್ಕು ವರ್ಷದಿಂದ ಶುಂಠಿ ಸೇರಿದಂತೆ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದು, ಆದರೆ, ಕಳೆದ ಎರಡು ವರ್ಷಗಳಿಂದ ಶುಂಠಿಗೆ ಸರಿಯಾದ ಬೆಲೆ ದೊರೆಯದೆ ನಷ್ಟ ಅನುಭವಿಸಿದನು. ಅಲ್ಲದೇ ಇತ್ತೀಚೆಗೆ ಸುರಿದ ಮಳೆಯಿಂದ ಶುಂಠಿ ಸಂಪೂರ್ಣವಾಗಿ ನಾಶವಾಗಿ ಅಪಾರ ಪ್ರಮಾಣದಲ್ಲಿ ನಷ್ಟ ಅನುಭವಿಸಿತ್ತು. ಈತ ಕೆಲವು ಸಂಘಗಳಲ್ಲಿ ಸೇರಿದಂತೆ ಹಲವೆಡೆಯಿಂದ ಲಕ್ಷಾಂತರ ರೂಪಾಯಿ ಸಾಲ ಮಾಡಿ, ತೀರಿಸಲಾಗದೆ ಮನನೊಂದು ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತ ಬಲಿಷ್ಠ ರಾಷ್ಟ್ರ

- ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅಭಿಮತ
- ಮೋದಿ ಜನ್ಮದಿನ ಪ್ರಯುಕ್ತ ರಕ್ತದಾನ ಶಿಬಿರ


ಮೈಸೂರಿನ ಗಾಯಿತ್ರಿಪುರಂನಲ್ಲಿ ಎನ್‌ಆರ್ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರಧಾನಿ ಮೋದಿಯವರ ಜನ್ಮದಿನದ ಪ್ರಯುಕ್ತ ಬುಧವಾರ ಹಮ್ಮಿಕೊಂಡಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಹಲವರು ರಕ್ತದಾನ ಮಾಡಿದರು.

ಮೈಸೂರು, ಸೆ.21(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರು ದೇಶ ಕಂಡ ಒಬ್ಬ ಅಪ್ರತಿಮ, ಧೀಮಂತ ನಾಯಕರು. ಭಾರತ ಅವರ ನಾಯಕತ್ವದಲ್ಲಿ ಜಗತ್ತಿನ ಒಂದು ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹೇಳಿದರು.

ಮೈಸೂರಿನ ಗಾಯಿತ್ರಿಪುರಂನಲ್ಲಿ ಎನ್‌ಆರ್ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರ 72ನೇ ಜನ್ಮದಿನದ ಪ್ರಯುಕ್ತ ಬುಧವಾರ ಹಮ್ಮಿಕೊಂಡಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಪಕ್ಷವು ವಿವಿಧ ಸಮಾಜ ಸೇವಾ ಕಾರ್ಯಗಳನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದೆ. ಇಡೀ ವಿಶ್ವವೇ ಇಂದು ಭಾರತದ ಕಡೆಗೆ ತಿರುಗಿ ನೋಡುತ್ತಿದೆ. ಇದಕ್ಕೆ ಮೋದಿಯವರ ಉತ್ತಮ ಆಡಳಿತ ಕಾರಣ. ಅಂತಹ ಮಹಾನ್ ವ್ಯಕ್ತಿಯ ಜನ್ಮದಿನದಂದು ಕ್ಷೇತ್ರದ ಯುವ ಮೋರ್ಚಾ ಕಾರ್ಯಕರ್ತರು ರಕ್ತದಾನ ಶಿಬಿರ ಆಯೋಜಿಸಿರುವುದು ಸಂತಸ ತಂದಿದೆ. ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷದ ಇನ್ನಷ್ಟು ಗಟ್ಟಿಯಾಗಿ ನೆಲೆಯೂರುವ ಮೂಲಕ ಮೋದಿಯವರ ಕೊಡುಗೆ ದೇಶಕ್ಕೆ ಇನ್ನಷ್ಟು ಲಭಿಸುವಂತಾಗಲಿ ಎಂದು ಆಶಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಮಾತನಾಡಿ, ದೇಶ ಸೇವೆಯೇ ನನ್ನ ಉಸಿರು ಎಂದು ತಿಳಿದು ದೇಶಕ್ಕಾಗಿ ದಿನದ 18 ಗಂಟೆಗಳ ಕಾಲ ಕೆಲಸ ಮಾಡುತ್ತಿರುವ ಮೋದಿಯವರ ನಾಯಕತ್ವ ದೇಶಕ್ಕೆ ನಮ್ಮೆಲ್ಲರ ಸುದೈವ. ರಕ್ತ ದಾನದಂತಹ ಮಹತ್ಕಾರ್ಯದ ಮೂಲಕ ಮೋದಿಯವರ ಮೇಲಿನ ಅಭಿಮಾನ ವ್ಯಕ್ತಪಡಿಸಿರುವ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಕಾರ್ಯ ಶ್ಲಾಘನೀಯ ಎಂದು ನುಡಿದರು.

ಸ್ವಯಂ ಪ್ರೇರಿತರಾಗಿ 24 ಯುವಕರು ರಕ್ತದಾನ ಮಾಡಿದರು. ಬಿಜೆಪಿ ನಗರ ಉಪಾಧ್ಯಕ್ಷರಾದ ದಿನೇಶ್, ಟಿ.ರಮೇಶ್, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯದರ್ಶಿ ಸು.ಮುರಳಿ, ನಗರ ಯುವ ಮೋರ್ಚಾ ಉಪಾಧ್ಯಕ್ಷ ಕಾರ್ತಿಕ್ ಕುಮಾರ್, ಎಸ್‌ಟಿ ಮೋರ್ಚಾ ಕ್ಷೇತ್ರದ ಅಧ್ಯಕ್ಷ ನಾರಾಯಣ ಲೋಲಪ್ಪ, ಹಿಂದುಳಿದ ವರ್ಗಗಳ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಮಣಿರತ್ನಂ, ನಗರ ಕಾರ್ಯಕಾರಣಿ ಸದಸ್ಯರಾದ ಶಿವಾನಂದರಾವ್, ಕೃಷ್ಣಮೂರ್ತಿ, ಎಸ್‌ಸಿ ಮೋರ್ಚಾ ಮಾಜಿ ರಾಜ್ಯ ಕಾರ್ಯದರ್ಶಿ ಗಿರಿಧರ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಧನರಾಜ್, ನವೀನ್ ಶೆಟ್ಟಿ, ವಾರ್ಡ್ ಅಧ್ಯಕ್ಷ ಕಿರಣ್, ಮುಖಂಡರಾದ ಜೀವನ್, ಜಗದೀಶ್, ನಾಣಿ, ಬಸವರಾಜು, ಸಂತೋಷ್, ಮಹಾದೇವ, ಭವಾನಿ, ಶಿಲ್ಪಾ, ಆನಂದ್, ರವಿ, ರಾಜು, ಪ್ರಸಾದ್ ಹಾಜರಿದ್ದರು.

ಮೈಸೂರು ಮಿತ್ರ ಗುರುವಾರ 22 ಸೆಪ್ಟೆಂಬರ್ 2022

ಒಂದನೇ ಪುಟದಿಂದ

ಪೇ ಸಿಎಂ ಪೋಸ್ಟರ್

ಬಿಡಿಸಿಡಲು ತೀರ್ಮಾನಿಸಿದ್ದಾರೆ. ಈ ಘಟನೆಯ ನಂತರ ಬಿಜೆಪಿ ಶಾಸಕ ಪಿ. ರಾಜೀವ್ ಮೂಲಕ ಸಿದ್ದರಾಮಯ್ಯ ಆಡಳಿತದಲ್ಲಿ ನಡೆದಿರುವ ನೇಮಕಾತಿ ಮತ್ತು ಹಗರಣಗಳಿಗೆ ಸಂಬಂಧಿಸಿದಂತೆ ನಿಯಮ 69 ರಡಿ ಚರ್ಚಿಸಲು ಅವಕಾಶ ಮಾಡಿಕೊಡುವಂತೆ ವಿಧಾನಸಭಾಧ್ಯಕ್ಷರನ್ನು ಕೋರಿದ್ದಾರೆ. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕೂಡಾ 40 ಪರ್ಸೆಂಟ್ ಕಮಿಷನ್ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಂತೆ ಮುಖ್ಯ ಮಂತ್ರಿಯವರು ಇದಕ್ಕೆ ಅವಕಾಶ ಮಾಡಿಕೊಡಿ, ನಾವು ಮತ್ತು ಇತರ ಸದಸ್ಯರು ಈ ಚರ್ಚೆಯಲ್ಲಿ ಪಾಲ್ಗೊಂಡು ಭ್ರಷ್ಟಾಚಾರದ ಎಳೆಯನ್ನು ಹೊರಗೆ ತೆಗೆದಿಡೋಣ ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ತೆಲಂಗಾಣದಲ್ಲಿ ನಲವತ್ತು ಪರ್ಸೆಂಟ್ ಕಮಿಷನ್ ಮುಖ್ಯಮಂತ್ರಿ ಎಂಬ ಬೋರ್ಡ್, ಪೋಸ್ಟರುಗಳ ಧಾಳಿಯನ್ನು ಇದೀಗ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಮುಂದುವರಿಸಿದ್ದು,ಪೇಸಿಎಂ ಆ್ಯಪ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ಬಿಜೆಪಿ ಸರ್ಕಾರಕ್ಕೆ ಮುಜುಗರವುಂಟು ಮಾಡಿದೆ. ಈ ಪೇಸಿಎಂ ಆ್ಯಪ್‌ಗೆ ನೀಡಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದರೆ ಸರ್ಕಾರದ ವಿರುದ್ಧದ ನಲವತ್ತು ಪರ್ಸೆಂಟ್ ಕಮಿಷನ್ನಿನ ಆರೋಪದ ಬಗ್ಗೆ, ಬಿಟ್ ಕಾಯಿನ್ ಹಗರಣದ ಬಗ್ಗೆ ಮಾಹಿತಿ ಲಭ್ಯವಾಗುತ್ತಿದೆ. ಒಂದು ಲಕ್ಷಕ್ಕೂ ಹೆಚ್ಚು ಮಂದಿ ಈ ಆ್ಯಪ್ ಅನ್ನು ಬಳಸಿದ್ದು, ಬಳಕೆ ಮಾಡಿದ ಕೂಡಲೇ ಸರ್ಕಾರದ ವಿರುದ್ಧ ಇಲ್ಲಿ ದೂರು ದಾಖಲಿಸ ಬಹುದು ಎಂದು ಹೇಳಲಾಗುತ್ತಿದೆ. ಸರ್ಕಾರದ ವಿರುದ್ಧದ ಈ ಅಭಿಯಾನಕ್ಕೆ ತಮ್ಮೊಂದಿಗೆ ಕೈ ಜೋಡಿಸಲು ಪ್ರತಿಪಕ್ಷ ಕಾಂಗ್ರೆಸ್ ನೀಡಿರುವ ಕರೆಗೆ ಲಕ್ಷಾಂತರ ಮಂದಿ ಪ್ರತಿಕ್ರಿಯಿಸಿರುವ ರೀತಿ ಖುದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮತ್ತು ಬಿಜೆಪಿಗೆ ಭಾರೀ ಮುಜುಗರ ತಂದಿದೆ. ಆದರೆ ಭದ್ರತೆಗಳೆಲ್ಲದರ ನಡುವೆಯೂ ಮುಖ್ಯಮಂತ್ರಿಗಳ ನಿವಾಸದ ಬಳಿ ಇದನ್ನು ಅಂಟಿಸಿರುವ ಬೆಳವಣಿಗೆ ವ್ಯಾಪಕ ಕೋಲಾಹಲ ಸೃಷ್ಟಿಸಿದ್ದು, ಬಿಜೆಪಿ–ಕಾಂಗ್ರೆಸ್ ನಡುವಣ ಸಂಘರ್ಷಕ್ಕೆ ಮುನ್ನುಡಿ ಬರೆದಂತಿದೆ. ಕೆಲ ದಿನಗಳ ಹಿಂದೆ ತೆಲಂಗಾಣದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಲು ಹೋದಾಗ, ಅವರು ಹೋಗುವ ದಾರಿಯ ಇಕ್ಕೆಲಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಲವತ್ತು ಪರ್ಸೆಂಟ್ ಸಿಎಂ ಎಂದು ಗುರುತಿಸುವ ಪೋಸ್ಟರುಗಳು, ಬೋರ್ಡುಗಳನ್ನು ಹಾಕಲಾಗಿತ್ತು. ಈ ಬೆಳವಣಿಗೆಯಿಂದ ಕ್ರುದ್ಧರಾಗಿದ್ದ ಸಿಎಂ ಬೊಮ್ಮಾಯಿ, ಈ ಬೆಳವಣಿಗೆ ರಾಜ್ಯ ರಾಜ್ಯಗಳ ನಡುವಣ ಸೌಹಾರ್ದತೆಗೆ ಧಕ್ಕೆ ತರಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಇದೀಗ ಕರ್ನಾಟಕದಲ್ಲಿ ಅದರ ಮುಂದುವರಿದ ಭಾಗವಾಗಿ ಪೇಸಿಎಂ ಆ್ಯಪ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ಪ್ರತಿಪಕ್ಷ ಕಾಂಗ್ರೆಸ್ ವಿಧ್ಯುಕ್ತವಾಗಿಯೇ ಆಡಳಿತಾರೂಢ ಬಿಜೆಪಿಗೆ ಸವಾಲೆಸೆದಿದೆ. ಈ ಬೆಳವಣಿಗೆ ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ ಭ್ರಷ್ಟಾಚಾರದ ಹಗರಣಕ್ಕೆ ಸಂಬಂಧಿಸಿದಂತೆ ಭಾರೀ ಸಂಘರ್ಷ ನಡೆಯುವ ಸೂಚನೆ ಎಂದು ಬಣ್ಣಿಸಲಾಗುತ್ತಿದ್ದು,ಈ ಸಂಘರ್ಷದ ಮೂಲಕ ಜನತಾ ನ್ಯಾಯಾಲಯಕ್ಕೆ ಹೋಗಲು ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಿರ್ಧರಿಸಿರುವುದು ಸ್ಪಷ್ಟವಾಗಿದೆ.

ಪೋಸ್ಟರ್ ಹಾಕಿದವರ ವಿರುದ್ಧ ಎಫ್‌ಐಆರ್

ಸಾರ್ವಜನಿಕ ಸ್ಥಳಗಳ ವಿರೂಪ ಕಾಯಿದೆಯಡಿ ಒಂದು ಪ್ರಕರಣ ದಾಖಲಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸಿ.ಎಚ್.ಪ್ರತಾಪ್ ರೆಡ್ಡಿ ತಿಳಿಸಿದ್ದಾರೆ. ಎಲ್ಲಾ ಡಿಸಿಪಿಗಳು ತಮ್ಮ ವಿಭಾಗಗಳಲ್ಲಿ ಇಂತಹ ಪೋಸ್ಟರ್‌ಗಳನ್ನು ಪರಿಶೀಲಿಸಿ ಪ್ರಕರಣ ದಾಖಲಿಸುವಂತೆ ಆಯುಕ್ತರು ಸೂಚನೆ ನೀಡಿದ್ದಾರೆ. ಪೋಸ್ಟರ್‌ಗಳಿಗೆ ಸಂಬಂಧಿಸಿದಂತೆ ಹೈಗ್ರೌಂಡ್ಸ್ ಪೊಲೀಸರು ಒಂದು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ ಮತ್ತು ಕೇಂದ್ರ ವಿಭಾಗದ ಉಪ ಪೊಲೀಸ್ ಆಯುಕ್ತರು(ಡಿಸಿಪಿ) ಈ ವಿಷಯವನ್ನು ಖುದ್ದಾಗಿ ಪರಿಶೀಲಿಸುತ್ತಿದ್ದಾರೆ. ಬೇರೆಡೆ ಪೋಸ್ಟರ್‌ಗಳು ಕಂಡುಬಂದರೆ ಸಂಬಂಧಪಟ್ಟ ಪೊಲೀಸರು ಪ್ರಕರಣ ದಾಖಲಿಸುತ್ತಾರೆ. ಪೋಸ್ಟರ್‌ಗಳು ಪತ್ತೆಯಾಗಿರುವ ಹೊಟೇಲ್‌ನ ಸಿಸಿಟಿವಿ ದೃಶ್ಯಾವಳಿಗಳನ್ನೂ ಪೊಲೀಸರು ಪರಿಶೀಲಿಸಿದ್ದಾರೆ ಎಂದು ಆಯುಕ್ತರು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಪೋಸ್ಟರ್‌ಗಳನ್ನು ಬಸ್ ನಿಲ್ದಾಣಗಳಲ್ಲಿ ಮತ್ತು ನಿರ್ಮಾಣ ಸ್ಥಳದಲ್ಲಿ ಅಂಟಿಸಲಾಗಿದೆ. ಮೇಖ್ರಿ ವೃತ್ತ, ಅರಮನೆ ರಸ್ತೆ, ಬಾಳೇಕುಂದ್ರಿ ವೃತ್ತ ಮತ್ತಿತರ ಕಡೆ ಹಾಕಲಾಗಿದ್ದ, ಬಹುತೇಕ ಪೋಸ್ಟರ್‌ಗಳನ್ನು ಪೌರಕಾರ್ಮಿಕರು ಈಗಾಗಲೇ ತೆರವುಗೊಳಿಸಿದ್ದಾರೆ.

ಬೆಳೆ ಹಾನಿಗೆ ಪರಿಹಾರ ದುಪ್ಪಟ್ಟು

ಹುದ್ದೆ ಕೊಡಿ ಎಂದು ಮನವಿ ಮಾಡಿದರು. ಪ್ರತಿ ವರ್ಷ ಬೆಳೆ ನಷ್ಟ ನಿಗದಿ ಮಾಡಿ ಪರಿಹಾರ ಕೊಡಬೇಕು. ಬ್ಯಾರಿಕೇಡ್ ಕೊಟ್ಟಿದ್ದಾರೆ. ಆದರೆ ಶಾಶ್ವತ ಪರಿಹಾರ ನೀಡಬೇಕು ಹಾಗೂ ಆನೆಗಳನ್ನು ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಇದಕ್ಕೆ ಉತ್ತರ ನೀಡಿದ ಸಿಎಂ ಬೊಮ್ಮಾಯಿ, ಅರಣ್ಯ ಅಂಚಿನಲ್ಲಿರುವ ಜಿಲ್ಲೆಗಳಲ್ಲಿ ಆನೆ ಹಾವಳಿ ಇದೆ. ಆದರೆ ಆನೆಗಳನ್ನು ಒಕ್ಕಲೆಬ್ಬಿಸುವುದು ಸುಲಭದ ಕೆಲಸ ಅಲ್ಲ, ಅವು ಗುಂಪಿನಲ್ಲಿ ಇರುತ್ತವೆ. ಕಾಡಾನೆ ಹಾವಳಿ ತಡೆಗೆ ರೈಲ್ವೇ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ. ಬಂಡೀಪುರದಲ್ಲಿ ಹೊಸ ರೀತಿಯ ಬೇಲಿಯನ್ನು ಪ್ರಾಯೋಗಿಕ ವಾಗಿ ಅಳವಡಿಸಲಾಗುತ್ತಿದೆ ಎಂದರು. ಕಾಡಾನೆ ಹಾವಳಿ ತಡೆಯಲು ಹಾಸನ ಜಿಲ್ಲೆಯಲ್ಲಿ 74 ಕಿ ಮೀ ತಡೆ ಬೇಲಿ ಹಾಕಲಾಗುತ್ತದೆ ಇದಕ್ಕಾಗಿ 100 ಕೋಟಿ ಖರ್ಚು ಮಾಡಲಾಗುತ್ತಿದೆ. ಆನೆ ದಾಳಿಯಿಂದ ಬೆಳೆ ಹಾನಿಯಾದರೆ ಪರಿಹಾರ ದುಪ್ಪಟ್ಟು ಮಾಡಲಾಗುತ್ತದೆ. ಪ್ರಾಣ ಹಾನಿ ಪರಿಹಾರ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು. ಕಾಟ ಕೊಡುವ ಆನೆಗಳನ್ನು ಕಾಡಿಗೆ ಅಟ್ಟಲು ಕ್ರಮ ಕೈಗೊಳ್ಳಲಾಗುವುದು. ಎಚ್ಚರಿಕೆ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮ ಪ್ರಮಾಣದಲ್ಲಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು

ಮಗು ರಕ್ಷಣೆ; ಓರ್ವನ ಬಂಧನ



ಆಸ್ಪತ್ರೆ ಸುಪರ್ದಿಗೆ ಮಗು.

ಸ್ಥಿರವಾಗಿದ್ದು, ಮಗುವಿಗೆ ತಿಂಗಳು ಆಗದಿರುವುದರಿಂದ ಆಸ್ಪತ್ರೆಯಲ್ಲೇ ಇರಿಸುವುದು ಅನಿವಾರ್ಯವಾಗಿದೆ. ವಿವಿಧ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ಜಿಲ್ಲಾ ಸರ್ಜನ್ ಡಾ. ಕೃಷ್ಣಪ್ರಸಾದ್ ತಿಳಿಸಿದ್ದಾರೆ. ಬಸವನಿಗೆ ಮಗುವನ್ನು ಪಡೆದ ದಂಪತಿಯ ಪರಿಚಯ ಇರಲಿಲ್ಲ ಎಂದು ತಿಳಿದು ಬಂದಿದೆ. ಖಾಸಿಫ್ ಬಸವನಿಂದ ಮಗುವನ್ನು ಪಡೆದ ದಂಪತಿಗೆ ತಲುಪಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಬಿಡಿಎ ಅವ್ಯವಹಾರದಲ್ಲಿ ನನ್ನ ಪಾತ್ರವಿಲ್ಲ

ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಿಸಿದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸೋಮಶೇಖರ್ ಅವರನ್ನು ಕರೆಸಿಕೊಂಡು ಮುನ್ನೆಚ್ಚರಿಕೆ ಕ್ರಮವಾಗಿ ಒಂದು ನಿರೀಕ್ಷಣಾ ಜಾಮೀನು ಪಡೆಯುವಂತೆ ಸಲಹೆ ನೀಡಿದರು.

ಸಲಹೆಯನ್ನು ಸೌಮ್ಯವಾಗಿ ತಳ್ಳಿ ಹಾಕಿದ ಸಚಿವರು ಈ ಹಗರಣಕ್ಕೂ ನನಗೂ ಸಂಬಂಧವಿಲ್ಲ. ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದುದೇ ಸ್ವಲ್ಪ ಕಾಲ. ಇದಲ್ಲದೆ ಬಿಡಿಎ ಅಧ್ಯಕ್ಷ ಸ್ಥಾನಕ್ಕೆ ನಾನು ರಾಜೀನಾಮೆ ನೀಡಿದ ನಂತರ ಅಧಿಕಾರಿಗಳು ಐದು ದಿನಗಳ ಹಿಂದಿನ ದಿನಾಂಕವನ್ನು ನಮೂದಿಸಿ ವರ್ಕ್ ಆರ್ಡರ್ ನೀಡಿದ ದಾಖಲೆ ಸೃಷ್ಟಿಸಿದ್ದಾರೆ. ಇದರಲ್ಲಿ ಅಂದಿನ ಬಿಡಿಎ ಆಯುಕ್ತರು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಒಬ್ಬರು ಇದಕ್ಕೆ ಕಾರಣರಾಗಿದ್ದು, ಈ ವ್ಯವಹಾರದಲ್ಲಿ ನನ್ನ ಯಾವ ಪಾತ್ರವೂ ಇಲ್ಲ ಎಂದು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಲೋಕಾಯುಕ್ತದ ಮುಂದೆ ಈ ಕುರಿತ ಎಲ್ಲ ವಿಚಾರಣೆ ಸಂದರ್ಭದಲ್ಲಿ ದಾಖಲೆಗಳನ್ನು ನೀಡುತ್ತೇನೆ ಎಂದ ಸೋಮಶೇಖರ್, ಇದರಲ್ಲಿ ನನ್ನ ಯಾವ ಪಾತ್ರವೂ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ ಎಂದರು. ಅಧಿಕಾರಿಗಳು ಮತ್ತು ರಾಜಕಾರಣಿಗಳ ಷಡ್ಯಂತ್ರ ಮಾಡಿ ನನ್ನನ್ನು ಈ ಹಗರಣದಲ್ಲಿ ಸಿಲುಕಿಸಿದ್ದಾರೆ. ಆದರೆ ಈ ವಿಷಯದಲ್ಲಿ ನಾನು ಕಳಂಕ ರಹಿತ ಎಂದರಲ್ಲದೆ,ಈ ಕುರಿತ ಹಲವು ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವುದರಿಂದ ನಿಮ್ಮ ಮುಂದೆ ಮುಕ್ತವಾಗಿ ಹೇಳಲು ನನಗೆ ಸಾಧ್ಯವಾಗಿದೆ ಎಂದರು.

ಕಾನ್‌ಸ್ಟೇಬಲ್ ಸಸ್ಪೆಂಡ್

ಏನೋ ಮೈಸೂರು ನಗರದಲ್ಲಿ ಅವ್ಯಾಹತವಾಗಿ ಮಟ್ಕಾ ದಂಧೆ ನಡೆಯುತ್ತಿದ್ದರೂ ಯಾವುದೇ ಠಾಣೆಯ ಪೊಲೀಸರೂ ಕೂಡ ಈ ದಂಧೆಯನ್ನು ಪತ್ತೆ ಮಾಡಿರಲಿಲ್ಲ. ಅಥವಾ ಅವರ ಗಮನಕ್ಕೆ ಬಂದಿರಲಿಲ್ಲ ಎಂದೆನಿಸುತ್ತದೆ. ಆದರೆ ಸಿಸಿಬಿ ಪೊಲೀಸರು ಇದೇ ತಿಂಗಳಲ್ಲಿ ನಿನ್ನೆ (ಮಂಗಳವಾರ) ಸೇರಿದಂತೆ ಮೂರು ದಾಳಿಗಳನ್ನು ನಡೆಸಿ ಮಟ್ಕಾ ದಂಧೆಕೋರರನ್ನು ಬಂಧಿಸಿದ್ದಾರೆ. ಸೆ.12ರಂದು ಮಂಡಿ ಮೊಹಲ್ಲಾದ ಪಾಲಿಕೆಯ ರಸ್ತೆಯಲ್ಲಿರುವ ಕರ್ನಾಟಕ ಆಟೋ ಕುಷನ್ ಮೇಲೆ ದಾಳಿ ಮಾಡಿದ ಸಿಸಿಬಿ ಪೊಲೀಸರು, ಓರ್ವನನ್ನು ಬಂಧಿಸಿ ಮಟ್ಕಾ ದಂಧೆಯಲ್ಲಿ ಆತ ಸಂಗ್ರಹಿಸಿದ್ದ 70 ಸಾವಿರ ರೂ. ನಗದು ಹಾಗೂ 4 ಮಟ್ಕಾ ಚೀಟಿಗಳನ್ನು ವಶಪಡಿಸಿಕೊಂಡಿದ್ದರು. ನಂತರ ಸೆ.15ರಂದು ಕೆ.ಎನ್.ಪುರ ಟೆಂಟ್ ರಸ್ತೆಯಲ್ಲಿರುವ ಆರ್.ಜೆ. ಟೀ ಸ್ಟಾಲ್ ಮೇಲೆ ದಾಳಿ ನಡೆಸಿ ಓರ್ವನನ್ನು ಬಂಧಿಸಿ 20 ಸಾವಿರ ರೂ. ನಗದು ಹಾಗೂ 4 ಮಟ್ಕಾ ಚೀಟಿಗಳನ್ನು ವಶಪಡಿಸಿಕೊಂಡಿದ್ದರು. ನಿನ್ನೆ (ಮಂಗಳವಾರ) ಎನ್.ಆರ್.ಠಾಣಾ ಸರಹದ್ದಿನ ಬಜಾರ್ ರಸ್ತೆಯಲ್ಲಿರುವ ಹಂಸಾ ಟೀ ಸ್ಟಾಲ್ ಮುಂಭಾಗ ಮಟ್ಕಾ ದಂಧೆ ನಡೆಸುತ್ತಿದ್ದ ಗೌಸಿಯಾನಗರ ನಿವಾಸಿ ಕೈಸರ್ ಪಾಷಾ ಅಲಿಯಾಸ್ ಶಾಕೀರ್ ಎಂಬಾತನನ್ನು ಬಂಧಿಸಿ 40 ಸಾವಿರ ರೂ. ನಗದು ಹಾಗೂ 6 ಮಟ್ಕಾ ಚೀಟಿಗಳನ್ನು ವಶಪಡಿಸಿಕೊಂಡಿದ್ದರು. ಸಿಸಿಬಿ ಪೊಲೀಸರು ಸತತವಾಗಿ ದಾಳಿ ನಡೆಸಿ ಮಟ್ಕಾ ದಂಧೆಕೋರರನ್ನು ಬಂಧಿಸುತ್ತಿದ್ದಂತೆಯೇ ಈ ದಂಧೆಯ ಪ್ರಮುಖ ಬುಕ್ಕಿ ಅಬ್ದುಲ್ ಜಮೀರ್ ಜೊತೆ ಕಾನ್ಸ್‌ಟೇಬಲ್ ಸುರೇಶ್ ನಿಕಟ ಸಂಪರ್ಕ ಹೊಂದಿರುವುದು ಬಯಲಾಗಿದ್ದು, ತಕ್ಷಣವೇ ಆತನನ್ನು ಪೊಲೀಸ್ ಆಯುಕ್ತರು ಅಮಾನತುಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಐಕ್ಯತಾ ಯಾತ್ರಾದಿಂದ ಬಿಜೆಪಿಯಲ್ಲಿ ಆತಂಕ

● ಬಿಜೆಪಿಗರು ನಕಲಿ ದೇಶಭಕ್ತರು; ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಾಗ್ದಾಳಿ ● ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ವಿರುದ್ಧ ಕಿಡಿನುಡಿ

ಮೈಸೂರು, ಸೆ.21(ಪಿಎಂ)– ಭಾರತ ಐಕ್ಯತಾ ಯಾತ್ರೆ ಬಗ್ಗೆ ಟೀಕಿಸಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಕಾಂಗ್ರೆಸ್‌ನವರಿಗೆ ದೇಶದ ಬಗ್ಗೆ ಚಿಂತನೆ ಇಲ್ಲ, ನಕಲಿ ಗಾಂಧಿ ಕುಟುಂಬದ ಬಗ್ಗೆ ಇವರ ಚಿಂತನೆ ಇದೆ ಎಂದು ಹೇಳಿಕೆ ನೀಡಿದ್ದಾರೆ. ವಾಸ್ತವವಾಗಿ ಬಿಜೆಪಿಗರೇ ನಕಲಿ ದೇಶಭಕ್ತರು ಎಂದು ಕಿಡಿಕಾರಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಐಕ್ಯತಾ ಯಾತ್ರೆಗೆ ವ್ಯಕ್ತವಾಗುತ್ತಿರುವ ಜನ ಬೆಂಬಲ ನೋಡಿ ಬಿಜೆಪಿಯವರಿಗೆ ಭಯ ಶುರುವಾಗಿದೆ ಎಂದು ಟೀಕಾಪ್ರಹಾರ ನಡೆಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮೊನ್ನೆ ಮೈಸೂರಿನಲ್ಲಿ ಕಾಂಗ್ರೆಸ್ ಬಗ್ಗೆ ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ. ಭಾರತ ಐಕ್ಯತಾ ಯಾತ್ರೆ ಮೂಲಕ ಕಾಂಗ್ರೆಸ್‌ನವರು ರಾಜಕೀಯ ಲಾಭದ ಭ್ರಮೆಯಲ್ಲಿದ್ದಾರೆ ಎಂದು ಆರೋಪಿಸಿದ್ದಾರೆ ಎಂದ ಅವರು, ಈ ಪಾದಯಾತ್ರೆ ಪಕ್ಷಾತೀತವಾಗಿ ನಡೆಯುತ್ತಿದೆ. ಬೇರೆ ಯಾವುದೇ ಪಕ್ಷ ಇಂತಹ ದೊಡ್ಡ ಪಾದಯಾತ್ರೆ ಮಾಡಿಲ್ಲ. ಇದಕ್ಕೆ ವ್ಯಕ್ತವಾಗುತ್ತಿರುವ ಜನಬೆಂಬಲ ನೋಡಿ ಬಿಜೆಪಿಯವರಿಗೆ ಆತಂಕ ಶುರುವಾಗಿದೆ. ಜನತೆಗೆ ಸುಳ್ಳು ಹೇಳಿ ಮೂರ್ಖರನ್ನಾಗಿ ಮಾಡಬಹುದು ಎಂಬ ಭ್ರಮೆ ಬಿಜೆಪಿಯವರಲ್ಲಿಯೇ ಇದೆ. ಪ್ರತಿ ಭಾರತೀಯನ ಖಾತೆಗೆ 15 ಲಕ್ಷ ಹಾಕುತ್ತೇವೆ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಆಶ್ವಾಸನೆ ನೀಡಿ ಜನತೆಗೆ ಭ್ರಮೆ ಹುಟ್ಟಿಸಿದ್ದವರು ಬಿಜೆಪಿಯವರೇ ಹೊರತು ಕಾಂಗ್ರೆಸ್‌ನವರಲ್ಲ ಎಂದು ತಿರುಗೇಟು ನೀಡಿದರು.

ಬಿಜೆಪಿಯವರು ನಕಲಿ ದೇಶ ಭಕ್ತರು. ಅಧಿಕಾರಕ್ಕೆ ಬಂದು 8 ವರ್ಷಗಳಾದರೂ ಇವರ ಕೊಡುಗೆ ಏನು? ಪ್ರಹ್ಲಾದ್ ಜೋಷಿಯವರು ಕೇಂದ್ರ ಸರ್ಕಾರ, ಕರ್ನಾಟಕಕ್ಕೆ ಕೊಟ್ಟ ಕೊಡುಗೆ ಬಗ್ಗೆ ಹೇಳಬೇಕಿತ್ತು. ಅದನ್ನು ಬಿಟ್ಟು ಪಲಾಯನವಾದ ಮಾಡಿದ್ದಾರೆ. ಕಾಶ್ಮೀರಿ ಪಂಡಿತರನ್ನು ಉಗ್ರರು ಗುಂಡಿಕ್ಕಿ ಕೊಲ್ಲುತ್ತಿದ್ದಾರೆ. ಚೀನಾದಿಂದ ಭಾರತದ ಭೂ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲಾಗುತ್ತಿದೆ. ಹೀಗಿರುವಾಗ ದೇಶದ ಸುರಕ್ಷತೆ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಯವರಿಗೆ ಇಲ್ಲ ಎಂದು ಹೇಳಿದರು. ರಾಹುಲ್ ಗಾಂಧಿಯವರ ಪಾದಯಾತ್ರೆಗೆ ಬೇರೆ ಬೇರೆ ಪಕ್ಷದ ನಾಯಕರೂ ಬೆಂಬಲ ನೀಡಿದ್ದಾರೆ. ರೈತ ನಾಯಕ ಯೋಗೇಂದ್ರ ಯಾದವ್, ತಮಿಳುನಾಡು ಸಿಎಂ ಸ್ಟಾಲಿನ್ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡುವುದು ನಮ್ಮ ಉದ್ದೇಶ. ರಾಜಕೀಯ ಲಾಭಕ್ಕಾಗಿ ಪಾದಯಾತ್ರೆ ಮಾಡುತ್ತಿಲ್ಲ ಎಂದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿದರು. ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿ'ಸೋಜಾ, ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಕೆ.ಎಸ್.ಈಶ್ವರಪ್ಪ ಒಬ್ಬ ದಡ್ಡರು: ಆರ್ಥಿಕವಾಗಿ ಸಬಲರಾದವರಿಗೆ ಮೀಸಲಾತಿ ರದ್ದುಪಡಿಸಬೇಕು ಎಂಬ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ, ಈಶ್ವರಪ್ಪ ಒಬ್ಬ ದಡ್ಡರು. ನನ್ನ ಪ್ರಕಾರ ಅವರು ಯಾವ ವಿಷಯ ಪ್ರಸ್ತಾಪ ಮಾಡುತ್ತಾರೆ ಎಂಬ ಬಗ್ಗೆ ಅವರಿಗೇ ಅರಿವು ಇರುವುದಿಲ್ಲ. ದಲಿತರು ಎಷ್ಟೇ ಆರ್ಥಿಕವಾಗಿ ಮುಂದುವರೆದರೂ ಅಸ್ಪೃಶ್ಯತೆ ಆಚರಣೆ ನಿಂತಿಲ್ಲ. ಹಾಗಾಗಿ ಆರ್ಥಿಕವಾಗಿ ಸಬಲರಾದರೂ ಅಸ್ಪೃಶ್ಯತೆ ನಿಲ್ಲುವವರೆಗೂ ಮೀಸಲಾತಿ ಮುಂದುವರೆಯಬೇಕು ಎಂದು ಹೇಳಿದರು.

ದಲಿತರು ಎಷ್ಟೇ ಆರ್ಥಿಕವಾಗಿ ಸಬಲರಾದರೂ ಮೀಸಲು ಕ್ಷೇತ್ರ ಬಿಟ್ಟು ಚುನಾವಣೆಯಲ್ಲಿ ಸ್ಪರ್ಧಿಸುವುದು ಕಷ್ಟಸಾಧ್ಯ. ಮೀಸಲು ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವುದು ನಮ್ಮ ಹಕ್ಕು ಎಂದರು.

ಐಸಿಸ್ ಉಗ್ರ ಸಂಘಟನೆ ಜೊತೆ ನಂಟು ಹೊಂದಿರುವ ಆರೋಪದಡಿ ಶಿವಮೊಗ್ಗದಲ್ಲಿ ಯುವಕರಿಬ್ಬರ ಬಂಧನ ಸಂಬಂಧ ಪ್ರತಿಕ್ರಿಯಿಸಿ, ಉಗ್ರ ಸಂಘಟನೆ ಸಂಪರ್ಕ ಹೊಂದಿರುವವರ ವಿರುದ್ಧ ಯಾರೇ ಆದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟ ಡಿ'ಸೋಜಾ, ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಅಧಿಕಾರ ನೀಡಿದರೆ ನಿರುದ್ಯೋಗ ನಿವಾರಣೆ

ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮೊಹಮ್ಮದ್ ನಲಪಾಡ್ ಭರವಸೆ

ಮೈಸೂರು, ಸೆ.21(ಪಿಎಂ)– ರಾಜ್ಯದಲ್ಲಿ ಜನತೆ ಕಾಂಗ್ರೆಸ್ ಅಧಿಕಾರಕ್ಕೆ ತಂದರೆ ನಿರುದ್ಯೋಗ ನಿವಾರಣೆ ಮಾಡಲಾಗುವುದು ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಹ್ಯಾರಿಸ್ ಹೇಳಿದರು.

ಮೈಸೂರಿನ ಮಂಡಿ ಮೊಹಲ್ಲಾದ ಶ್ರೀ ಎಲ್ಲಮ್ಮಾಂಬ ವೃತ್ತದಲ್ಲಿರುವ ಎಲ್ಲಮ್ಮಾಂಬ ತಾಯಿ ದೇವಸ್ಥಾನದಲ್ಲಿ ಬುಧವಾರ ಪೂಜೆ ಸಲ್ಲಿಸುವ ಮೂಲಕ ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ ಯುವ ಕಾಂಗ್ರೆಸ್‌ನಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಯುವ ಕಾಂಗ್ರೆಸ್‌ನ ಉದ್ಯೋಗ ಸೃಷ್ಟಿ (ಮೈಸೂರು ನಗರ ವ್ಯಾಪ್ತಿ) ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಪ್ರಧಾನಿ ನರೇಂದ್ರ ಮೋದಿಯವರ ಭರವಸೆ ಹುಸಿಯಾಗಿದೆ. ಈ 8 ವರ್ಷಗಳಲ್ಲಿ 16 ಕೋಟಿ ಉದ್ಯೋಗ ನೀಡಬೇಕಿತ್ತು. ಆದರೆ ಕೋಟ್ಯಾಂತರ ಯುವ ಜನತೆ ಪದವಿ ಪಡೆದರೂ ಉದ್ಯೋಗವಿಲ್ಲದೆ ಸಂಕಷ್ಟದಲ್ಲಿದ್ದಾರೆ. 2014ರಲ್ಲಿ ನರೇಂದ್ರ ಮೋದಿಯವರು ದೇಶದಲ್ಲಿ ಅಚ್ಚೆ ದಿನ್ ತರುತ್ತೇವೆ ಎಂದಿದ್ದರು. ಈಗ ಪೆಟ್ರೋಲ್, ಅಡುಗೆ ಅನಿಲ ಎಲ್ಲವೂ ದುಬಾರಿಯಾಗಿದ್ದು, ಇದೇನಾ ಇವರ ಅಚ್ಚೆ ದಿನ್ ಎಂದು ಪ್ರಶ್ನಿಸಿದರು.

ಇವರು ಧರ್ಮದ ಆಧಾರದಲ್ಲಿ ಸಮುದಾಯಗಳನ್ನು ಒಡೆಯುತ್ತಿದ್ದರೆ, ನಮ್ಮ ನಾಯಕ ರಾಹುಲ್ ಗಾಂಧಿಯವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ ಐಕ್ಯತಾ ಯಾತ್ರೆ ಕೈಗೊಂಡು ಎಲ್ಲರನ್ನು ಒಂದಾಗಿಸಲು ಹೊರಟಿದ್ದಾರೆ. ನಾವೆಲ್ಲರೂ ಭಾರತೀಯರು ಎಂಬುದು ಮುಖ್ಯವೇ ಹೊರತು. ಜಾತಿ–ಧರ್ಮವಲ್ಲ. ರಾಜ್ಯ ಬಿಜೆಪಿ ಸರ್ಕಾರ 40 ಪರ್ಸೆಂಟ್‌ನಲ್ಲಿ ಖ್ಯಾತನಾಮವಾಗಿದೆ. ಇದು ಜನಪರ ಸರ್ಕಾರವಲ್ಲ ಎಂದು ಕಿಡಿಕಾರಿದರು.



ಮೈಸೂರಿನ ಮಂಡಿ ಮೊಹಲ್ಲಾದ ಶ್ರೀ ಎಲ್ಲಮ್ಮಾಂಬ ತಾಯಿ ದೇವಸ್ಥಾನದಲ್ಲಿ ಬುಧವಾರ ಪೂಜೆ ಸಲ್ಲಿಸುವ ಮೂಲಕ ಯುವ ಕಾಂಗ್ರೆಸ್‌ನ ಉದ್ಯೋಗ ಸೃಷ್ಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ರಾಹುಲ್ ಗಾಂಧಿ ಜತೆ ಯುವ ಜನತೆ

ಸಂವಾದ: ಇದಕ್ಕೂ ಮುನ್ನ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಮೊಹಮ್ಮದ್ ನಲಪಾಡ್, ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ ಕೈಗೆತ್ತಿಕೊಂಡಿದ್ದೇವೆ. ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆ ರಾಜ್ಯಕ್ಕೆ ಪ್ರವೇಶ ಪಡೆದ ಸಂದರ್ಭದಲ್ಲಿ ಯುವ ಜನತೆ ಅವರೊಂದಿಗೆ ಸಂವಾದ ನಡೆಸಲಿದ್ದಾರೆ. ಉದ್ಯೋಗ ಸೃಷ್ಟಿ ಕಾರ್ಯಕ್ರಮದಲ್ಲಿ ನೋಂದಣಿ (www.udyogasrishti.in) ಮಾಡಿಕೊಂಡವರಲ್ಲಿ ರಾಹುಲ್ ಗಾಂಧಿಯವರೊಂದಿಗೆ ಸಂವಾದದಲ್ಲಿ ಭಾಗವಹಿಸಲು ಅವಕಾಶ ದೊರೆಯಲಿದೆ. ಅವರಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ ದೊರೆಯುವ ವಿಶ್ವಾಸವಿದೆ ಎಂದು ತಿಳಿಸಿದರು.

ಮಾಜಿ ಶಾಸಕ ವಾಸು, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಪಕ್ಷದ ಮುಖಂಡ ಡಿ.ನಾಗಭೂಷಣ್, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್, ಪ್ರಧಾನ ಕಾರ್ಯದರ್ಶಿ ನಿಶಾಂತ್ ಮತ್ತಿತರರು ಹಾಜರಿದ್ದರು.

ನೆರವಿನ ನೆಪದಲ್ಲಿ ವೃದ್ಧೆಯ ಸರ ಕಳವು

ಸೋಮವಾರಪೇಟೆ, ಸೆ.21–ಬಸ್ ಹತ್ತಲು ಸಹಾಯ ಮಾಡುವ ನೆಪದಲ್ಲಿ ವೃದ್ಧೆಯೊಬ್ಬರ ಮಾಂಗಲ್ಯ ಸರ ಎಗರಿಸಿರುವ ಘಟನೆ ಸೋಮವಾರಪೇಟೆ ಬಸ್ ನಿಲ್ದಾಣದಲ್ಲಿ ನಡೆದಿದೆ.

ಸೋಮವಾರಪೇಟೆ ತಾಲೂಕು ಹೊಸಬೀಡು ಗ್ರಾಮದ ಜಾನಕಿ(70) ಸರ ಕಳೆದುಕೊಂಡವರಾಗಿದ್ದು, ಇವರು ಸೋಮವಾರಪೇಟೆ ಸಂತೆಯಲ್ಲಿ ಸಾಮಾನು ಖರೀದಿಸಿ ಊರಿಗೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದಾಗ ಸುಮಾರು 45 ವರ್ಷ ವಯೋಮಾನದ ಮಹಿಳೆ ಜಾನಕಿ ಅವರನ್ನು ಬಸ್‌ಗೆ ಹತ್ತಿಸಲು ಸಹಾಯ ಮಾಡುವುದಾಗಿ ತಿಳಿಸಿ ಅವರನ್ನು ಬಸ್‌ನ ಸೀಟ್‌ನಲ್ಲಿ ಕುಳ್ಳಿರಿಸಿ ತೆರಳಿದ್ದಾರೆ. ಈ ವೇಳೆ ಮಹಿಳೆ ಜಾನಕಿ ಅವರ ಕತ್ತಿನಲ್ಲಿದ್ದ 20 ಗ್ರಾಂ ತೂಕದ ಮಾಂಗಲ್ಯ ಸರವನ್ನು ಅಪಹರಿಸಿರಬಹುದು ಎಂಬ ಶಂಕೆ ವ್ಯಕ್ತಪಡಿಸಿ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ. ಈ ಸಂಬಂಧ ಸೋಮವಾರಪೇಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕೆಪಿಸಿಸಿ ಮಹಿಳಾ ಘಟಕದ ಸ್ತ್ರೀ ಸಹಾಯವಾಣಿಗೆ ಚಾಲನೆ

ಮೈಸೂರು, ಸೆ.21(ಪಿಎಂ)– ಕಳೆದ 8 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ದೇಶದ ಮಹಿಳಾ ಸಮುದಾಯದ ಸಂಕಷ್ಟಕ್ಕೆ ಸ್ಪಂದಿಸಿಲ್ಲ ಎಂದು ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟ ಡಿ'ಸೋಜಾ ದೂರಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಘಟಕಗಳ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಮಹಿಳಾ ಘಟಕ ರೂಪಿಸಿರುವ ಸ್ತ್ರೀ ಸಹಾಯವಾಣಿಗೆ (1800–203–0589 ಉಚಿತ ಸಹಾಯವಾಣಿ) ಚಾಲನೆ ನೀಡಿ ಹಿಂದಿಯಲ್ಲಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳೆಯರಿಗೆ ಮೋಸ ಮಾಡಿದೆ. ಅಗತ್ಯ ವಸ್ತುಗಳ ಬೆಲೆ ಗಗನ ಮುಟ್ಟಿದೆ. ಗ್ಯಾಸ್ ಸಿಲಿಂಡರ್ ಬೆಲೆ ಸಾವಿರ ರೂ.ಗೆ ಏರಿಕೆಯಾಗಿದೆ. ಮಹಿಳೆಯರ ಕಷ್ಟಕ್ಕೆ ಈ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ತಿಳಿಸಿದರು.

ರಾಜಕೀಯ ಪಕ್ಷವೊಂದು ಮಹಿಳೆಯರಿಗಾಗಿ ಸಹಾಯವಾಣಿ ಆರಂಭಿಸಿರುವುದು ದೇಶದಲ್ಲಿಯೇ ಮೊದಲು. ಇದು ಐತಿಹಾಸಿಕವಾದ ಸಂಗತಿ. ಭವಿಷ್ಯದ ಮಹಿಳೆಯರಿಗೆ ಅನುಕೂಲವಾಗಲಿದೆ. ಮಹಿಳೆಯರು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಪಾರ್ಸಿ ಇತ್ಯಾದಿ ಧರ್ಮಗಳನ್ನು ಮೀರಿದ್ದಾರೆ ಇಡೀ ಮಹಿಳಾ ಸಮುದಾಯವೇ ಒಂದು ಧರ್ಮ. ಮಹಿಳೆಯರು ಸಂಕೋಲೆಗಳನ್ನು ಮೀರಿ ಅವಕಾಶಗಳನ್ನು ಬಳಸಿಕೊಂಡು ಮುನ್ನಡೆಯಬೇಕು ಎಂದು ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಮೊದಲಿಂದಲೂ ಕಾಂಗ್ರೆಸ್ ಪಕ್ಷ ಮಹಿಳೆಯರ ಪರವಾಗಿದೆ. ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಕೊಟ್ಟಿದೆ. ಇಂದಿರಾ ಗಾಂಧಿ 12 ವರ್ಷ ಪ್ರಧಾನಿಯಾಗಿದ್ದರು. ಸೋನಿಯಾ ಗಾಂಧಿ ಪಕ್ಷದ ಅಧ್ಯಕ್ಷರಾಗಿದ್ದಾರೆ. ಬಿಜೆಪಿಯಲ್ಲಿ ಮಹಿಳಾ ಪ್ರಧಾನಿಯನ್ನು ಕಾಣಲು ಸಾಧ್ಯವೇ? ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಲ್ಲಿ ಮುಖ್ಯಸ್ಥರಾಗಬಹುದೇ? ಎಂದು ಪ್ರಶ್ನಿಸಿದರು.

ಮಹಿಳೆಯರು ಯಾವಾಗಲೂ ಡಾ.ಅಂಬೇಡ್ಕರ್ ಅವರನ್ನು ಸ್ಮರಿಸಬೇಕು. ಕೇಂದ್ರದ ಮೊದಲ ಕಾನೂನು ಮಂತ್ರಿಯಾಗಿ ಹಿಂದೂ ಕೋಡ್ ಬಿಲ್ ಮಂಡಿಸಿದರು. ಇದಕ್ಕೆ ನೆಹರೂ ಸಮ್ಮತಿ ಇತ್ತು. ಆದರೆ ಆರ್‌ಎಸ್‌ಎಸ್, ಹಿಂದೂಪರ ಸಂಘಟನೆಗಳು ವಿರೋಧಿಸಿದವು. ಬಿಲ್ ಮಂಡನೆಯಾಗದಿದ್ದಾಗ ಅಂಬೇಡ್ಕರ್ ಮನನೊಂದು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು ಎಂದು ಹೇಳಿದರು. ರಾಹುಲ್ ಗಾಂಧಿಯವರ ಪಾದಯಾತ್ರೆ ಮೈಸೂರಿಗೆ ಬಂದಾಗ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು. ಈಗಾಗಲೇ 5 ಜಿಲ್ಲೆಯ ಜನರು ಎಲ್ಲಿಗೆ ಬರಬೇಕೆಂದು ತಿಳಿಸಲಾಗಿದೆ. ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ರಾಹುಲ್ ಗಾಂಧಿ ಅವರಿಗೆ ಆರತಿ ಮಾಡಿ ಸ್ವಾಗತಿಸಬೇಕು ಎಂದು ಹೇಳಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಕೆಪಿಸಿಸಿ ಮಹಿಳಾ ಘಟಕ ರೂಪಿಸಿರುವ ಸ್ತ್ರೀ ಸಹಾಯವಾಣಿಗೆ ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟ ಡಿ'ಸೋಜಾ ಚಾಲನೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, 1800–203–0589 ಉಚಿತ ಸಹಾಯವಾಣಿಗೆ ಕರೆ ಮಾಡಿ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಬಹುದು. ಸಾಮಾಜಿಕ ಸಮಸ್ಯೆ, ನೆರೆಹೊರೆಯವರಿಂದ ಕಿರುಕುಳ ಮತ್ತು ಕೌಟುಂಬಿಕ ಸಮಸ್ಯೆಗಳನ್ನು ತಿಳಿಸಬಹುದು. ಪರಿಹಾರಕ್ಕೆ ಮಹಿಳಾ ಕಾಂಗ್ರೆಸ್ ಪ್ರಯತ್ನಿಸಲಿದೆ. ಈ ಸಂಖ್ಯೆಯನ್ನು ಕಾಂಗ್ರೆಸ್ ಕಾರ್ಯಕರ್ತೆಯರು ಮನೆ ಮನೆಗೆ ತಲುಪಿಸಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಉಪಾಧ್ಯಕ್ಷ ಸುಧೀಂದ್ರ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಹಿಳಾ ಕಾಂಗ್ರೆಸ್ ಮುಖಂಡರಾದ ಡಾ.ಸೀಮಾ, ಪುಷ್ಪಾಲತಾ ಚಿಕ್ಕಣ್ಣ, ಲತಾ ಸಿದ್ಧಶೆಟ್ಟಿ, ಪುಷ್ಪವಲ್ಲಿ ಮತ್ತಿತರರು ಹಾಜರಿದ್ದರು.

ಮೈಸೂರು ದಸರಾದಲ್ಲಿ ಸ್ವಚ್ಛತೆಗೆ ಆದ್ಯತೆ

ಹೊರಗುತ್ತಿಗೆ ಆಧಾರದ ಮೇಲೆ ಹೆಚ್ಚುವರಿ 350 ಪೌರಕಾರ್ಮಿಕರನ್ನೂ ಬಳಸಿಕೊಳ್ಳಲು ನಿರ್ಧಾರ

ಮೈಸೂರು, ಸೆ.21(ಜಿಎ)– ಮೈಸೂರು ದಸರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಿದ್ದು, ಇದಕ್ಕಾಗಿ 350ಕ್ಕೂ ಹೆಚ್ಚು ಪೌರಕಾರ್ಮಿಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಸ್ವಚ್ಛತೆ ಮತ್ತು ವ್ಯವಸ್ಥೆಯ ದಸರಾ ಉಪ ಸಮಿತಿ ನಿರ್ಧರಿಸಿದೆ.



ನವರಾತ್ರಿಯ ಒಂಭತ್ತು ದಿನಗಳು ಮೈಸೂರನ್ನು ಸ್ವಚ್ಛವಾಗಿ ಕಾಣುವಂತೆ ಮಾಡಲು ಈಗಾಗಲೇ ಇರುವ ಪೌರ ಕಾರ್ಮಿಕರೊಂದಿಗೆ ಹೊರಗುತ್ತಿಗೆ ಪೌರ ಕಾರ್ಮಿಕರನ್ನು ಹಗಲು ಮತ್ತು ರಾತ್ರಿ ಎರಡು ಪಾಳಿಗಳಲ್ಲಿ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ದೇಶ–ವಿದೇಶ ಸೇರಿದಂತೆ ಲಕ್ಷಾಂತರ ಪ್ರವಾಸಿಗರು ದಸರಾ ಉತ್ಸವವನ್ನು ಕಣ್ಣು ತುಂಬಿಕೊಳ್ಳಲು ಮೈಸೂರಿಗೆ ಬರುವುದರಿಂದ ಅವರಿಗೆ ಸ್ವಚ್ಛತೆ ಮತ್ತು ಅಗತ್ಯ ವ್ಯವಸ್ಥೆ ಮಾಡುವುದು ಮುಖ್ಯವಾಗಿದ್ದು, ಅದಕ್ಕಾಗಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಮೈಸೂರು ಅರಮನೆ ಮುಂಭಾಗ ಸಾಂಸ್ಕೃತಿಕ ಕಾರ್ಯಕ್ರಮ, ಮಹಾರಾಜ ಕಾಲೇಜು ಮೈದಾನದಲ್ಲಿ ಯುವ ದಸರಾ, ಕುಸ್ತಿ, ಚಲನಚಿತ್ರೋತ್ಸವ, ಕವಿಗೋಷ್ಠಿ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ಕ್ರೀಡಾ ದಸರಾ, ಯೋಗ ದಸರಾ, ಲಲಿತಾ ಕಲೆ, ಆಹಾರ ಮೇಳ ಹಾಗೂ ದೀಪಾಲಂಕಾರ ವೀಕ್ಷಿಸಲು ಲಕ್ಷಾಂತರ ಜನರು ಪ್ರತಿನಿತ್ಯ ಭೇಟಿ ನೀಡಲಿದ್ದು, ಈ ಎಲ್ಲಾ ಕಾರ್ಯಕ್ರಮದ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವುದು ಮುಖ್ಯವಾಗಿರುವುದರಿಂದ 350ಕ್ಕೂ ಹೆಚ್ಚು ಹೊರ ಗುತ್ತಿಗೆ ಪೌರಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿರುವ ಪೌರಕಾರ್ಮಿಕ ಎಂದಿನಂತೆ ಮನೆ ಮನೆಗಳ ಕಸ ಸಂಗ್ರಹಣೆ ಮಾಡಿ ಅದರ ವಿಂಗಡಣೆ ಮಾಡಲಿದ್ದು, ಅವರನ್ನು ಸೇರಿದಂತೆ ಹೊರ ಗುತ್ತಿಗೆ ಪೌರಕಾರ್ಮಿಕರನ್ನು ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಹಗಲು ಮತ್ತು ರಾತ್ರಿ ಎರಡು ಪಾಳಿಯಲ್ಲಿ ಸ್ಥಳಕ್ಕೆ ಅವಶ್ಯವಿರುವಂತೆ ಪೌರಕಾರ್ಮಿಕರನ್ನು ಬಳಸಿಕೊಂಡು ಸ್ವಚ್ಛತಾ ಕಾರ್ಯ ನಡೆಯಲಿದೆ ಎಂದು ಸ್ವಚ್ಛತೆ ಮತ್ತು ವ್ಯವಸ್ಥೆಯ ದಸರಾ ಉಪ ಸಮಿತಿ ಉಪ ವಿಶೇಷಾಧಿಕಾರಿ ಆದ ಪಾಲಿಕೆ ಆಯುಕ್ತ ಲಕ್ಷ್ಮಿ ಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಸೆ.24 ರಿಂದಲೇ ಕಾರ್ಯಕ್ರಮಗಳನ್ನು ನಡೆಯುವ ಸ್ಥಳಗಳಲ್ಲಿ ಅ.5ರವರೆಗೂ ಪೌರಕಾರ್ಮಿಕರನ್ನು ನೇಮಿಸಲಾಗುವುದು. 12 ದಿನಗಳು ಪೌರಕಾರ್ಮಿಕರು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಬೀಳುವ ಕಸವನ್ನು ಸಂಗ್ರಹಿಸಿ ಅಲ್ಲಿಯೇ ವಿಂಗಡಣೆ ಮಾಡಿ ವಿಲೇವಾರಿ ಮಾಡುತ್ತಾರೆ ಎಂದರು.

ಅ.2ರಂದು ಕಡಕೊಳ ಗ್ರಾಮಕ್ಕೆ ಭಾರತ ಐಕ್ಯತಾ ಯಾತ್ರೆ ಆಗಮನ


ಬಿಜೆಪಿ ದುರಾಡಳಿತದ ಬಗ್ಗೆ ಯಾತ್ರೆಯಲ್ಲಿ ಜಾಗೃತಿ ಮೂಡಿಸಬೇಕು; ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ

ಮೈಸೂರು, ಸೆ.21(ಪಿಎಂ)– ಭಾರತ ಐಕ್ಯತಾ ಯಾತ್ರೆಯಲ್ಲಿ ಬಿಜೆಪಿ ದುರಾಡಳಿತದ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸಬೇಕಿದೆ. ಯಾತ್ರೆಯು ಅ.2ರಂದು ಕಡಕೊಳ ಗ್ರಾಮಕ್ಕೆ ಬರಲಿದೆ ಎಂದು ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಹೇಳಿದರು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಕಡಕೊಳ ಕಾಳಿಬೀರೇಶ್ವರ ದೇವಸ್ಥಾನದ ಆವರಣದಲ್ಲಿ ಭಾರತ ಐಕ್ಯತಾ ಯಾತ್ರೆ ಹಾಗೂ ಬೂತ್ ಮಟ್ಟದ ಪದಾಧಿಕಾರಿಗಳ ಆಯ್ಕೆ ಕುರಿತು ಬುಧವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಹುಲ್‌ಗಾಂಧಿಯವರ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ ಐಕ್ಯತಾ ಯಾತ್ರೆ ನಡೆಯುತ್ತಿದ್ದು, ಈ ಯಾತ್ರೆಯಲ್ಲಿ ಬಿಜೆಪಿ ದುರಾಡಳಿತ, ಭ್ರಷ್ಟಾಚಾರ, ಹಗರಣಗಳನ್ನು ಜನರ ಮುಂದಿಟ್ಟು ಜನರಲ್ಲಿ ಜಾಗೃತಿ ಮೂಡಿಸಬೇಕು. ಯಾತ್ರೆಯಲ್ಲಿ ಬರಲಿರುವ ರಾಹುಲ್‌ಗಾಂಧಿ, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಕಡಕೊಳ ಗ್ರಾಮದಲ್ಲಿ ಅದ್ಧೂರಿಯಾಗಿ ಸ್ವಾಗತಿಸಬೇಕು. ಪಾದಯಾತ್ರೆಯಲ್ಲಿ 20 ಸಾವಿರ ಜನ ಸೇರುವ ನಿರೀಕ್ಷೆ ಇದೆ ಎಂದು ಹೇಳಿದರು.

ಕಾಂಗ್ರೆಸ್ ಈ ದೇಶ ಕಟ್ಟಿದ ಪಕ್ಷ. ಬ್ರಿಟಿಷರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಮೊಘಲರು ದಾಳಿ ಮಾಡಿ ದೇಶದ ಸಂಪತ್ತನ್ನೆಲ್ಲಾ ದೋಚಿಕೊಂಡು ಹೋಗಿದ್ದರು. ಇದರಿಂದ ಈ ದೇಶ ಬರಿದಾಗಿತ್ತು



ಅಂತಹ ದೇಶವನ್ನು 65 ವರ್ಷಗಳ ಕಾಲ ಆಳಿದ ಕಾಂಗ್ರೆಸ್‌ನ ನೆಹರು, ಇಂದಿರಾ ಗಾಂಧಿ, ರಾಜೀವ್‌ಗಾಂಧಿ, ನರಸಿಂಹರಾವ್, ಮನಮೋಹನಸಿಂಗ್ ಅವರು ತಮ್ಮ ದೂರದೃಷ್ಟಿ ಯೋಜನೆಗಳ ಮೂಲಕ ಹಂತ ಹಂತವಾಗಿ ಕಟ್ಟಿದ್ದಾರೆ. ಆದರೆ ಈಗಿರುವ ಕೇಂದ್ರ ಬಿಜೆಪಿ ಸರ್ಕಾರ ಎಲ್ಲಾ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಖಾಸಗೀಕರಣ ಮಾಡುತ್ತಿದೆ ಎಂದು ಕಿಡಿಕಾರಿದರು.

ಈ ಬಿಜೆಪಿಯವರಿಗೆ ತಕ್ಕ ಪಾಠ ಕಲಿಸಲು ಭಾರತ ಐಕ್ಯತಾ ಯಾತ್ರೆ ನಡೆಯುತ್ತಿದ್ದು, ಇದನ್ನು ಎಲ್ಲರೂ ಒಗ್ಗಟ್ಟಿನಿಂದ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಜಿಪಂ ಮಾಜಿ ಸದಸ್ಯರಾದ ಪಟೇಲ್ ಜವರೇಗೌಡ, ನಾರಾಯಣ, ತಾಪಂ ಮಾಜಿ ಸದಸ್ಯರಾದ ಶ್ರೀಕಂಠತೊಂಡೇಗೌಡ, ನಾಗರಾಜ್, ಕಾಳಿಬೀರೇಶ್ವರ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಮುಖಂಡ ರಾದ ಶಿವಲಿಂಗೇಗೌಡ ಕೆ.ಪಿ.ಮಹಾದೇವ, ರವಿಗೌಡ, ರಮೇಶ್, ರಫೀಕ್‌ಪಾಷ, ಮಂಜುನಾಥ್ ಕುಮಾರ್, ಶಿವಲಿಂಗ, ನಾರಾಯಣ ನಾಯ್ಕ ದಾಸಪ್ಪ ಮತ್ತಿತರರು ಹಾಜರಿದ್ದರು.

ಹೃದಯದ ಸಮಸ್ಯೆ: ಮೆಗ್ಗಾನ್ ಆಸ್ಪತ್ರೆಗೆ ಮುರುಘಾ ಶ್ರೀ ಶಿಫ್ಟ್



ಚಿತ್ರದುರ್ಗ: ಪೋಕ್ಸೋ ಪ್ರಕರಣ ಸಂಬಂಧ ನ್ಯಾಯಾಂಗ ಬಂಧನದಲ್ಲಿರುವ ಮುರುಘಾ ಶ್ರೀಗೆ ಹೃದಯ ಸಮಸ್ಯೆ ಹಿನ್ನೆಲೆ ಅವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ರೀಗಳಿಗೆ ಹೃದಯದ ಸಮಸ್ಯೆಯಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸ ಬೇಕೆಂದು ಶ್ರೀಗಳ ಪರ ವಕೀಲರು ಮಾಡಿದ ಮನವಿಯನ್ನು ನ್ಯಾಯಾ ಲಯ ಪುರಸ್ಕರಿಸಿ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲು ಅನುಮತಿ ನೀಡಿತ್ತು.

ಅಪ್ಪಚ್ಚ ಕವಿ ಜನ್ಮ ದಿನವನ್ನು ಕೊಡವ ಸಾಹಿತ್ಯ ದಿನವನ್ನಾಗಿ ಆಚರಿಸಿ

ಅಪ್ಪಚ್ಚಕವಿ ಜನ್ಮ ದಿನಾಚರಣೆಯಲ್ಲಿ ಅಭಿಮಾನಿಗಳ ಸಂಘ ಆಗ್ರಹ

ಮಡಿಕೇರಿ,ಸೆ.21– ಕೊಡವ ಭಾಷೆಯ ಆದಿಕವಿ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಅವರು ಜನಿಸಿ ಇಂದಿಗೆ 154 ವರ್ಷಗಳು ಕಳೆದಿದ್ದು, ಮುಂಬರುವ ವರ್ಷಗಳಲ್ಲಿ ಸೆ.21 ಅನ್ನು ಜಿಲ್ಲಾ ಮಟ್ಟದಲ್ಲಿ 'ಕೊಡವ ಸಾಹಿತ್ಯ ದಿನ'ವನ್ನಾಗಿ ಆಚರಿಸಲು ಸರ್ಕಾರ ಮತ್ತು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಪ್ಪಚ್ಚಕವಿ ಅಭಿಮಾನಿಗಳ ಸಂಘದ ಪ್ರಮುಖರಾದ ಉಳ್ಳಿಯಡ ಎಂ.ಪೂವಯ್ಯ ಆಗ್ರಹಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಮಾತನಾಡಿದ ಅವರು, 1868 ಸೆ.1ರಂದು ನಾಪೋಕ್ಲು ಬಳಿಯ ಕಿರುಂದಾಡು ಗ್ರಾಮದಲ್ಲಿ ಜನಿಸಿದ ಅಪ್ಪನೆರವಂಡ ಅಪ್ಪಚ್ಚ ಕವಿ, ಕೊಡವ ಭಾಷೆಯ ಸಾಹಿತ್ಯ ರಚನೆ ಇಲ್ಲದ ಇಪ್ಪತ್ತನೇ ಶತಮಾನದ ಆದಿ ಭಾಗದಿಂದ 1940ರವರೆಗೆ ಕನ್ನಡ ಲಿಪಿಯನ್ನು ಬಳಸಿ ಕೊಡವ ಭಾಷೆಯಲ್ಲಿ ನಾಟಕ, 500ರಷ್ಟು ಹಾಡು, ನುಡಿಗಟ್ಟುಗಳು, ಲಾವಣಿ ಪದಗಳು, ಹರಿಕಥೆಗಳನ್ನು ರಚಿಸಿದ ಮಹಾನ್ ವ್ಯಕ್ತಿಯೆಂದು ಬಣ್ಣಿಸಿದರು.

ಕವಿಯ ಜನ್ಮ ದಿನಾಚರಣೆಯನ್ನು ಸಾಹಿತ್ಯ ದಿನವನ್ನಾಗಿ ಕೊಡವ ಸಂಘ ಸಂಸ್ಥೆಗಳು ವಿವಿಧ ಸಾಹಿತ್ಯ ಪರ ಕಾರ್ಯಕ್ರಮಗಳನ್ನು, ದತ್ತಿ ನಿಧಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಆಚರಿಸುವಂತೆ ಉಳ್ಳಿಯಡ ಪೂವಯ್ಯ ಕರೆ ನೀಡಿದರು.



ಕವಿ ನೆನಪು ಅಮರವಾಗಲಿ: ಅಪ್ಪಚ್ಚಕವಿ ಜನಿಸಿದ ಕಿರುಂದಾಡು ವಾಸದ ಮನೆಯನ್ನು 'ರಾಷ್ಟ್ರೀಯ ಕೊಡವ ಸಾಹಿತ್ಯ ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ಪೂವಯ್ಯ ಮನವಿ ಮಾಡಿದರು. ಪಾರಾಣೆ, ನಾಪೋಕ್ಲು, ಮಡಿಕೇರಿಯಂತಹ ಮುಖ್ಯ ಊರುಗಳಲ್ಲಿ ಅಪ್ಪಚ್ಚಕವಿಯ ಪ್ರತಿಮೆ ಸ್ಥಾಪಿಸಬೇಕು. ಕೊಡಗಿನ ಪ್ರಮುಖ ಸ್ಥಳಗಳಲ್ಲಿ ಹರದಾಸ ಅಪ್ಪಚ್ಚಕವಿ ರಸ್ತೆ, ಭವನ, ಬಡಾವಣೆ, ನಗರ, ವೃತ್ತ, ಗೋಪುರ, ಪುಸ್ತಕ ಭಂಡಾರ, ಅಪ್ಪಚ್ಚಕವಿ ಕೇಂದ್ರ, ಸಾಹಿತ್ಯ ಭವನ, ಸಾಹಿತ್ಯ ಸಂಘ ಇತ್ಯಾದಿ ನಾಮಕರಣದ ಮೂಲಕ ಕವಿಯ ನೆನಪು ಜನಮನದಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಬೇಕೆಂದು ಮನವಿ ಮಾಡಿದರು.

ಕೊಡವ ಭಾಷಿಕ ವಿದ್ಯಾರ್ಥಿಗಳಿರುವ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯದ ಆಯ್ದ ಕೇಂದ್ರದಲ್ಲಿ ಅಪ್ಪಚ್ಚಕವಿ ಅಧ್ಯಯನ ಪೀಠ, ಅಪ್ಪಚ್ಚಕವಿ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಬೇಕು. ಕನ್ನಡಲಿಪಿ ಬಳಕೆಯ ಮೂಲಕ ಕನ್ನಡ ಭಾಷೆಗೆ ಸೋದರ ಕೊಡವ ಭಾಷಿಕರು ಅನಾದಿ ಕಾಲದಿಂದ ಪ್ರೋತ್ಸಾಹ ನೀಡುತ್ತಿರುವ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಪ್ಪಚ್ಚಕವಿ ನೆನಪಿನಲ್ಲಿ ವಾರ್ಷಿಕ ದತ್ತಿನಿಧಿ ಕಾರ್ಯಕ್ರಮ, ಸ್ಮರಣಾರ್ಥ ಕಾರ್ಯಕ್ರಮ, ಸಾಹಿತ್ಯಿಕ ಬರಹ ಸ್ಪರ್ಧೆ, ನಾಟಕ ಸ್ಪರ್ಧೆ, ಇತ್ಯಾದಿಗಳನ್ನು ವ್ಯವಸ್ಥಿತವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಮಾತ್ರವಲ್ಲದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಹರದಾಸರ ನೆನಪಿನ ಸಾಹಿತ್ಯಿಕ ಚಟುವಟಿಕೆಗೆ ಉತ್ತೇಜನ ನೀಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಮುಖರಾದ ಅಲ್ಲಾರಂಡ ವಿಠಲ್ ನಂಜಪ್ಪ ಉಪಸ್ಥಿತರಿದ್ದರು.

ಮಡಿಕೇರಿ ದಸರಾ ಜನೋತ್ಸವಕ್ಕೆ ಸಿಎಂಗೆ ಆಹ್ವಾನ



ಮಡಿಕೇರಿ,ಸೆ.21– ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಕೊಡಗಿನ ಶಾಸಕರು ಸೇರಿದಂತೆ ದಸರಾ ಸಮಿತಿ ಪ್ರಮುಖರು ಭೇಟಿ ಮಾಡಿ ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನ ನೀಡಿದರು. ಇದೇ ವೇಳೆ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಅವರನ್ನು ಭೇಟಿ ಮಾಡಿದ ನಿಯೋಗ ಅವರನ್ನೂ ಕೂಡ ದಸರಾ ಜನೋತ್ಸವಕ್ಕೆ ಆಹ್ವಾನಿಸಿತು.

ದಸರಾ ಸಮಿತಿ ಅಧ್ಯಕ್ಷೆ ಮಡಿಕೇರಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ದಸರಾ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ರಮೇಶ್, ಪ್ರಧಾನ ಕಾರ್ಯದರ್ಶಿ ಬಿ.ವೈ.ರಾಜೇಶ್ ಖಜಾಂಜಿ ಶ್ವೇತಾ ಪ್ರಶಾಂತ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಹರೀಶ್ ಈ ಸಂದರ್ಭ ಹಾಜರಿದ್ದರು.

ಹಲವು ವಿಚಾರಗಳ ಕುರಿತು ಚರ್ಚೆ

ಮಡಿಕೇರಿ, ಸೆ.21– ಜೀವ ವೈವಿಧ್ಯ ಮಂಡಳಿ ರಾಜ್ಯ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು ಬುಧವಾರ ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ ಅವರನ್ನು ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಭೇಟಿ ಮಾಡಿ ಗಡಿಗೆ ಸಂಬಂಧಿಸಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದರು.

ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವಾರ್ಷಿಕ ಸಭೆ



ವಿರಾಜಪೇಟೆ, ಸೆ.21– ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯ ಅಂಗವಾಗಿ ವಿರಾಜಪೇಟೆ ಮಿನಿವಿಧಾನ ಸೌಧದ ಮುಂಭಾಗದಲ್ಲಿರುವ ಅಮರ್ ಜವಾನ್ ಹುತಾತ್ಮ ಯೋಧರ ಸ್ಮಾರಕಕ್ಕೆ ನಿವೃತ್ತ ಕರ್ನಲ್ ಕಂಡ್ರತಂಡ ಸಿ.ಸುಬ್ಬಯ್ಯ ಅವರು ಪುಷ್ಪ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಎನ್‌ಸಿಸಿ ಬ್ರಿಗೇಡಿನ ಕರ್ನಲ್ ಚೆಪ್ಪುಡಿರ ಮುತ್ತಣ್ಣ, ಬ್ರಿಗೇಡಿಯರ್ ಮುನಿಸ್ವಾಮಿ ಬೆಂಗಳೂರು, ಪರಮಾನಂದ ಸ್ವಾಮೀಜಿ, ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೆ ಅರಸ್, ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ, ಇಲ್ಲಿನ ಭಾರತೀಯ ಸ್ಟೇಟ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕರಾದ ಉಮಾ, ಬಿಜೆಪಿ ಜಿಲ್ಲಾಧ್ಯಕ್ಷ ರಾಬೀನ್ ದೇವಯ್ಯ ಹಾಗೂ ಕೊಡವ ಸಮಾಜ, ಬಿಲ್ಲವ ಸಂಘ, ಮುಸ್ಲಿಂ ಅಸೋಸಿಯೇಶನ್, ಕಾರು, ಲಾರಿ, ಆಟೋ ಚಾಲಕರ ಸಂಘ, ವಿಶ್ವ ಹಿಂದೂ ಪರಿಷತ್, ಭಜರಂಗದಳ, ಮತ್ತಿತರ ಸಂಘ ಸಂಸ್ಥೆಗಳು ಹುತಾತ್ಮ ಯೋಧರಿಗೆ ಗೌರವ ವಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಎಸ್‌ಎಂಎಸ್ ಶಾಲೆ, ರೋಟರಿ ಶಾಲೆ, ಸಂತ ಅನ್ನಮ್ಮ ಶಾಲೆ, ಕಾವೇರಿ ಶಾಲೆ ಹಾಗೂ ವಿವಿಧ ಶಾಲೆಯ ವಿದ್ಯಾರ್ಥಿಗಳು, ಸ್ಕೌಟ್ ಮತ್ತು ಗೈಡ್ಸ್, ಶಿಕ್ಷಕ ವೃಂದದವರು ಭಾಗವಹಿಸಿದ್ದರು. ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚೇಂದ್ರಿಮಾಡ ಗಣೇಶ್ ನಂಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಉಪಾಧ್ಯಕ್ಷ ಚಪ್ಪಂಡ ಬಿ.ಹರೀಶ್ ಉತ್ತಯ್ಯ, ನಿರ್ದೇಶಕರಾದ ಕಾವಡಿಚಂಡ ಯು.ಗಣಪತಿ, ಮಗ್ಗೇರ ಎಸ್.ನಂದ, ಪಟ್ರಪಂಡ ಎಂ.ಕರುಂಬಯ್ಯ, ಮುಡ್ಯೋಳಂಡ ಯು.ಸುರೇಶ್, ಬಿ.ಎಸ್.ಚಂದ್ರಶೇಖರ್, ಹೆಚ್.ಕೆ.ಅಪ್ಪಯ್ಯ, ತೋರೇರ ಎಂ.ಪೂವಯ್ಯ, ಮುಂತಾದವರು ಉಪಸ್ಥಿತರಿದ್ದರು. ನಂತರ ಮಹಿಳಾ ಸಮಾಜದ ಸಭಾಂಗಣದಲ್ಲಿ ಚೇಂದ್ರಿಮಾಡ ಗಣೇಶ್‌ನಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಮಹಾಸಭೆ ನಡೆಯಿತು.

ನಾಳೆ ಪೌರಕಾರ್ಮಿಕರ ದಿನಾಚರಣೆ

ಮಡಿಕೇರಿ, ಸೆ.21– ಮಡಿಕೇರಿ ನಗರಸಭೆ ವತಿಯಿಂದ ಸೆ.23 ರಂದು ಬೆಳಗ್ಗೆ 11 ಗಂಟೆಗೆ ನಗರದ ಕ್ರಿಸ್ಟಲ್ ಕೋರ್ಟ್‌ನಲ್ಲಿ ಪೌರಕಾರ್ಮಿಕರ ದಿನಾಚರಣೆ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ ಅವರು ತಿಳಿಸಿದ್ದಾರೆ.

ಭಾರೀ ಗಾತ್ರದ ಹೆಬ್ಬಾವು ಸೆರೆ



ನಾಪೋಕ್ಲು, ಸೆ.21– ಭಾಗಮಂಡಲದ ಚೇರಂಗಾಲದ ಬಳಿ ಜನವಸತಿ ಪ್ರದೇಶದ ಹತ್ತಿರ ಸುಮಾರು ಹತ್ತು ಅಡಿಗೂ ಹೆಚ್ಚಿನ ಉದ್ದದ ಭಾರೀ ಗಾತ್ರದ ಹೆಬ್ಬಾವನ್ನು ಉರಗ ತಜ್ಞ ಪೊನ್ನೀರ ಗಗನ್ ಸೆರೆ ಹಿಡಿದಿದ್ದಾರೆ. ಚೇರಂಗಾಲದ ಜನವಸತಿ ಪ್ರದೇಶದ ರಾಮಯ್ಯ ಹಾಗೂ ಲವ ಎಂಬುವರ ಜಾಗದಲ್ಲಿ ಭಾರೀ ಗಾತ್ರದ ಹೆಬ್ಬಾವು ಬೀಡುಬಿಟ್ಟಿರುವ ಕುರಿತು ವಲಯ ಅರಣ್ಯಾಧಿಕಾರಿ ಮಂಜುನಾಥ್ ನಾಯಕ್ ಅವರು, ಉರಗ ತಜ್ಞ ಪೊನ್ನೀರ ಗಗನ್ ಅವರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಪೊನ್ನೀರ ಗಗನ್ ಅವರು, ಆಗಷ್ಟೇ ಯಾವುದೋ ಪ್ರಾಣಿಯನ್ನು ನುಂಗಿ ಪೊದೆಗಳ ನಡುವೆ ಬೀಡುಬಿಟ್ಟಿದ್ದ ಭಾರಿ ಗಾತ್ರದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದರು.

ಈ ಸಂದರ್ಭ ಮಾತನಾಡಿದ ಪೊನ್ನೀರ ಗಗನ್ ಅವರು, ಜನವಸತಿ ಪ್ರದೇಶದ ಹತ್ತಿರದಲ್ಲೇ ಹೆಬ್ಬಾವು ಇರುವ ಬಗ್ಗೆ ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ ಮೇರೆಗೆ ಹೆಬ್ಬಾವು ಅನ್ನು ಸೆರೆಹಿಡಿಯಲಾಗಿದ್ದು, ಯಾವುದೋ ಪ್ರಾಣಿಯನ್ನು ನುಂಗಿರುವ ಹೆಬ್ಬಾವು ಸುಮಾರು ಹತ್ತು ಅಡಿಗೂ ಹೆಚ್ಚಿನ ಉದ್ದವಿದೆ ಎಂದರು. ವಲಯ ಅರಣ್ಯಾಧಿಕಾರಿ ಮಂಜುನಾಥ್ ನಾಯಕ್ ಮಾತನಾಡಿ, ಹಾವುಗಳನ್ನು ಕಂಡಲ್ಲಿ ಅವುಗಳನ್ನು ಕೊಲ್ಲದೇ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಕಕ್ಕಬ್ಬೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಕ್ಕೆ 21.76 ಲಕ್ಷ ರೂ. ನಿವ್ವಳ ಲಾಭ



ನಾಪೋಕ್ಲು,ಸೆ.20– ಕಕ್ಕಬ್ಬೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಸಂಘದ ವಾರ್ಷಿಕ ಮಹಾಸಭೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕಲ್ಯಾಟಂಡ ರಘು ತಮ್ಮಯ್ಯ, ಸಂಘ ರೈತರಿಗೆ ಹಲವು ಅನುಕೂಲಗಳನ್ನು ಮಾಡಿದೆ. ಆದರೆ, ಕೆಲವು ಯೋಜನೆಗಳನ್ನು ಪಡೆಯಬೇಕಾದರೆ ಸರಕಾರದ ನಿಯಮ ಪಾಲನೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದರು. ಸಂಘದ ಎಲ್ಲಾ ಬೆಳವಣಿಗೆಗೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಸಹಕಾರ ಮತ್ತು ಪ್ರೋತ್ಸಾಹ ನೀಡಿದ್ದಾರೆ ಎಂದ ಅವರು, ಎಲ್ಲಾ ಸದಸ್ಯರು ಸಮಯಕ್ಕೆ ಸರಿಯಾಗಿ ಮರಣ ನಿಧಿ ಹಣವನ್ನು ಪಾವತಿಸಿ ಸಹಕರಿಸಬೇಕು ಎಂದು ಕೋರಿದರು.


ಹಣಕಾಸು ವಹಿವಾಟು: ಸಂಘದಲ್ಲಿ 1754 ಸದಸ್ಯರಿದ್ದು, ಎಲ್ಲಾ ಸದಸ್ಯರ ಸಹಕಾರದಿಂದ ಸಂಘವು 'ಎ' ಶ್ರೇಣಿಗೆ ಬಡ್ತಿ ಹೊಂದಿದೆ ಎಂದರು. 2021–22ನೇ ಸಾಲಿನಲ್ಲಿ ಸಂಘ 21.76 ಲಕ್ಷ ರೂ. ನಿವ್ವಳ ಲಾಭಗಳಿಸಿದೆ. ಸಂಘವು 84 ಲಕ್ಷ ರೂ. ಪಾಲು ಬಂಡವಾಳ ಹೊಂದಿದ್ದು, ಪ್ರಸ್ತುತ ಸಾಲಿನಲ್ಲಿ 4.70 ಕೋಟಿ ರೂ.ಗಳ ಠೇವಣಿ ಸಂಗ್ರಹಿಸಿದೆ. ಸದಸ್ಯರಿಗೆ ಶೇ.11 ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ. ಉಳಿದಂತೆ 6.26 ಕೋಟಿ ರೂ. ಕೆಸಿಸಿ ಸಾಲ, 10 ಲಕ್ಷ ರೂ. ಸ್ವ–ಸಹಾಯ ಗುಂಪುಗಳಿಗೆ ಸಾಲ, 23.17 ಲಕ್ಷ ರೂ. ಗೊಬ್ಬರ ಸಾಲ, 74 ಲಕ್ಷ ರೂ. ಜಾಮೀನು ಸಾಲ, 5.30 ಲಕ್ಷ ರೂ. ನಿಖರ ಠೇವಣಿ ಸಾಲ, 1.40 ಲಕ್ಷ ರೂ.ಗಳನ್ನು ಭವಿಷ್ಯ ನಿಧಿ ಸಾಲ ರೂಪದಲ್ಲಿ ನೀಡಲಾಗಿದೆ ಎಂದು ಕಲ್ಯಾಟಂಡ ರಘು ತಮ್ಮಯ್ಯ ಸಭೆಗೆ ಮಾಹಿತಿ ನೀಡಿದರು.

ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರಾದ ಚಂಡೀರ ಜಗದೀಶ್, ಅಂಜಪರವಂಡ ಕುಶಾಲಪ್ಪ ಚೋಯಮಣಿ, ಬಾಚಮಂಡ ರಾಜಾ ಪೂವಣ್ಣ, ಕಲಿಯಂಡ ಸಂಪನ್ ಅಯ್ಯಪ್ಪ, ಬೊಳಿಯಾಡಿರ ಸಂತು ಸುಬ್ರಮಣಿ, ಕಲಿಯಂಡ ಸುನಂದಾ, ಮತ್ತಿತರರು ಮಾತನಾಡಿ, ಸಂಘದ ಅಭಿವೃದ್ಧಿಯ ಬಗ್ಗೆ ಸಲಹೆ ನೀಡಿದರು.

ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ಬಡಕಡ ಸುರೇಶ್ ಬೆಳ್ಯಪ್ಪ ನಿರ್ದೇಶಕರಾದ ಅಲ್ಲಾರಂಡ ಸನ್ನು ಅಯ್ಯಪ್ಪ ಕಲ್ಯಾಟಂಡ ಯತೀಶ್ ಬೋಪಣ್ಣ, ನಿಡುಮಂಡ ಹರೀಶ್ ಪೂವಯ್ಯ, ಕೋಡಿಮಣಿಯಂಡ ಬಿಜು ನಾಣಯ್ಯ, ನಂಬಡಮಂಡ ಬಿ.ಸುನಿತಾ, ಪರದಂಡ ಪಿ.ಪ್ರಮಿಳಾ, ಎ.ಎನ್.ಲಕ್ಷ್ಮಣ, ಕೋಲೆಯಂಡ ಎ.ಅಶೋಕ, ಪಿ.ಟಿ.ಕಾರ್ಯಪ್ಪ, ಕೆ.ಕೆ.ಗಿರೀಶ್, ಜಿಲ್ಲಾ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಕೆಎ.ಉದಯಕುಮಾರ್, ಸಂಘದ ಸಿಇಒ ಮಂಜುಳಾ ಉಪಸ್ಥಿತರಿದ್ದರು.

ನಾಳೆಯಿಂದ ಮಾದಪ್ಪನಬೆಟ್ಟದಲ್ಲಿ ವಿವಿಧ ಜಾತ್ರಾ ಮಹೋತ್ಸವ

ಚಾಮರಾಜನಗರ, ಸೆ. 21– ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದಲ್ಲಿ ಸೆ.23 ರಿಂದ 26ರವರೆಗೆ ಮಹಾಲಯ ಅಮಾವಾಸ್ಯೆ ಜಾತ್ರೆ,



ಅ.3ರಿಂದ 5ರವರೆಗೆ ದಸರಾ ಜಾತ್ರೆ, ಅ.22ರಿಂದ 26ರವರೆಗೆ ದೀಪಾವಳಿ ಜಾತ್ರಾ ಮಹೋತ್ಸವ ನಡೆಯಲಿದೆ. ಅಲ್ಲದೆ ಅ.31, ನ.7, 14, 21ರಂದು ಕಾರ್ತಿಕ ಸೋಮವಾರದ ಜಾತ್ರಾ ಮಹೋತ್ಸವ ಜರುಗಲಿದೆ. ಸೆ.23ರಂದು ಮಹಾಲಯ ಅಮವಾಸ್ಯೆ ಜಾತ್ರಾ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಪ್ರಾರಂಭವಾಗಲಿದೆ. 24ರಂದು ಎಣ್ಣೆಮಜ್ಜನ, ತೈಲಾಭಿಷೇಕ, ವಿಶೇಷ ಸೇವೆ ಉತ್ಸವಗಳು ನಡೆಯಲಿವೆ. 25ರಂದು ಮಹಾಲಯ ಅಮಾವಾಸ್ಯೆ ವಿಶೇಷ ಸೇವೆ ಉತ್ಸವ ನಡೆಯಲಿವೆ. ಸೆ.26ರಂದು ಶರನ್ನವರಾತ್ರಾರಂಭ, ಉಯ್ಯಾಲೋತ್ಸವ, ಅ.4ರಂದು ಮಹಾನವಮಿ, ಆಯುಧಪೂಜೆ, ಅ.5ರಂದು ವಿಜಯದಶಮಿ, ಕುದುರೆ ವಾಹನೋತ್ಸವ, ದಶಮಿ ಪೂಜೆ ನೆರವೇರಲಿದೆ.

ಅ.22ರಂದು ದೀಪಾವಳಿ ಜಾತ್ರಾ ಪ್ರಯುಕ್ತ ವಿಶೇಷ ಕಾರ್ಯಕ್ರಮ, ಅ. 23ರಂದು ಎಣ್ಣೆಮಜ್ಜನ ಅಭಿಷೇಕ ಸೇವೆ, ಉತ್ಸವಾದಿಗಳು, ಅ.24ರಂದು ನರಕ ಚತುರ್ದಶಿ, ಅಮಾವಾಸ್ಯೆ ಸೇವೆ, ಉತ್ಸವಾದಿಗಳು, ಅ.25ರಂದು ದೀಪಾವಳಿ ಹಾಲರವೆ ಉತ್ಸವ ನಡೆಯಲಿದೆ. ಅ.26ರಂದು ಬೆಳಗ್ಗೆ 9.15ರಿಂದ 9.45ರವರೆಗೆ ಮಹಾರಥೋತ್ಸವ ಜರುಗಲಿದೆ.

ಅ.31ರಂದು ಮೊದಲನೆ ಕಾರ್ತಿಕ, ನ.7ರಂದು ಎರಡನೇ, 14ರಂದು ಮೂರನೇ ಕಾರ್ತಿಕ ಸೋಮವಾರ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ನ.21ರಂದು ನಾಲ್ಕನೇ ಕಾರ್ತಿಕ ಸೋಮವಾರ ಶ್ರೀ ಮಹದೇಶ್ವರ ಜ್ಯೋತಿ ದರ್ಶನ, ನ.22ರಂದು ಕಾರ್ತಿಕ ಎಣ್ಣೆಮಜ್ಜನ ಸೇವೆ, 23ರಂದು ಕಾರ್ತಿಕ ಅಮಾವಾಸ್ಯೆ, ವಿಶೇಷ ಸೇವೆ ಉತ್ಸವಾಧಿಗಳು ನಡೆಯಲಿವೆ. ಪ್ರತಿದಿನ ಸಂಜೆ 7 ಗಂಟೆಗೆ ಬಂಗಾರದ ರಥೋತ್ಸವ ನೆರವೇರಲಿದೆ. ವಿಶೇಷ ಸೇವೆ ಉತ್ಸವಗಳು ಮತ್ತು ಮಹಾರಥೋತ್ಸವ ಸಾಲೂರು ಬೃಹನ್ಮಠಾಧ್ಯಕ್ಷ ಶಾಂತಮಲ್ಲಿಕಾರ್ಜುನಸ್ವಾಮಿ ಮಾರ್ಗದರ್ಶನದಲ್ಲಿ ನೆರವೇರಲಿದೆ ಎಂದು ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಸೆ.27ರಿಂದ ಚಾ.ನಗರದಲ್ಲಿ ಅದ್ದೂರಿ ದಸರಾ

ದೀಪಾಲಂಕಾರ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಚಿವ ವಿ.ಸೋಮಣ್ಣ ಸೂಚನೆ

ಚಾಮರಾಜನಗರ, ಸೆ.21–ಚಾಮರಾಜನಗರ ದಸರಾ ಮಹೋತ್ಸವವನ್ನು ಸೆ.27 ರಿಂದ 30ರವರೆಗೆ 4 ದಿನಗಳ ಕಾಲ ಅದ್ದೂರಿ ಹಾಗೂ ವೈವಿಧ್ಯಮಯವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚಿಸಿದರು.



ಬೆಂಗಳೂರಿನ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮಿತಿ ಸಭಾಂಗಣದಲ್ಲಿಂದು ಚಾಮರಾಜನಗರ ದಸರಾ ಮಹೋತ್ಸವ ಸಂಬಂಧ ಜಿಲ್ಲೆಯ ಶಾಸಕರು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಹಾಗೂ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋವಿಡ್ ಕಾರಣದಿಂದ ಕಳೆದ 2 ವರ್ಷಗಳಲ್ಲಿ ದಸರಾ ಅದ್ದೂರಿ ಆಚರಣೆಗೆ ಸಾಧ್ಯವಾಗಿಲ್ಲ. ಐತಿಹಾಸಿಕ ಪರಂಪರೆ ಹಿನ್ನೆಲೆಯಿರುವ ದಸರಾ ಮಹೋತ್ಸವವನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯಬೇಕಿದೆ. ಈ ಉದ್ದೇಶದಿಂದ ಜಿಲ್ಲೆಯಲ್ಲಿ ದಸರಾ ಮಹೋತ್ಸವ ಈ ಬಾರಿ ಹೆಚ್ಚು ವಿಜೃಂಭಣೆಯಿಂದ ನಡೆಯಬೇಕು ಎಂದರು.

ನಗರದ ಚಾಮರಾಜೇಶ್ವರ ದೇವಾಲಯದ ಬಳಿ ದಸರಾ ಮಹೋತ್ಸವದ ಪ್ರಧಾನ ವೇದಿಕೆ ಅಚ್ಚುಕಟ್ಟಾಗಿ ಹಾಗೂ ವೈಭವಯುತವಾಗಿ ನಿರ್ಮಿಸಬೇಕು. ಸರ್ಕಾರಿ ಕಟ್ಟಡಗಳು, ಪ್ರಮುಖ ವೃತ್ತಗಳು, ರಸ್ತೆಗಳು, ಇತರೆ ಕಡೆಗಳಲ್ಲಿಯೂ ವಿಶೇಷ ಹಾಗೂ ಜಗಮಗಿಸುವ ದೀಪಾಲಂಕಾರ ಮಾಡಬೇಕು. ಜಿಲ್ಲಾ ಕೇಂದ್ರದ ಎಲ್ಲಾ ದಿಕ್ಕಿನ ಪ್ರವೇಶ ದ್ವಾರಗಳಲ್ಲಿ ಸ್ವಾಗತ ಕಮಾನುಗಳು ದೀಪಾಲಂಕಾರದಿಂದಿರಬೇಕು. ತಾಲೂಕು ಕೇಂದ್ರಗಳಲ್ಲಿಯೂ ಸಹ ಗ್ರಾಮೀಣ ದಸರಾ ಹಿನ್ನೆಲೆಯಲ್ಲಿ ಅಲ್ಲಿಯೂ ದೀಪಾಲಂಕಾರವಿರಬೇಕು ಎಂದು ಸೆಸ್ಕ್ ಅಧಿಕಾರಿಗಳಿಗೆ ಸಚಿವರು ಕಟ್ಟುನಿಟ್ಟಿನ ತಾಕೀತು ಮಾಡಿದರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ವೈವಿಧ್ಯಮಯವಾಗಿ ಮೂಡಿಬರಬೇಕು. ಸ್ಥಳೀಯ ಕಲಾವಿದರಿಗೂ ಆದ್ಯತೆ ನೀಡಬೇಕು. ಕಲಾತಂಡಗಳ ಮೆರವಣಿಗೆ, ಸ್ತಬ್ಧಚಿತ್ರಗಳ ಪ್ರದರ್ಶನ ಅರ್ಥಪೂರ್ಣವಾಗಿರಲಿ. ರೈತ ದಸರಾ, ಮಹಿಳಾ ದಸರಾ ಸೇರಿದಂತೆ ಇನ್ನಿತರ ಎಲ್ಲಾ ಕಾರ್ಯಕ್ರಮಗಳು, ಪೂಜಾ ಕೈಂಕರ್ಯ ಅಚ್ಚುಕಟ್ಟಾಗಿ ನೆರವೇರಲಿ ಎಂದು ಸಚಿವರು ನಿರ್ದೇಶನ ನೀಡಿದರಲ್ಲದೆ, ಹನೂರು, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ ತಾಲೂಕುಗಳಲ್ಲಿಯೂ ದಸರಾ ವಿಜೃಂಭಣೆ ಆಚರಣೆ ಸಂಬಂಧಪಟ್ಟ ಶಾಸಕರೊಂದಿಗೆ ಚರ್ಚಿಸಿದರು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಶಾಸಕ ಆರ್.ನರೇಂದ್ರ, ಎನ್.ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್ ಅವರು ಮಾತನಾಡಿದರು. ಸಭೆಯಲ್ಲಿ ಹಾಜರಿದ್ದ ವಿವಿಧ ಸಂಘಟನೆಗಳ ಮುಖಂಡರು, ಹಲವು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ. ಗಾಯತ್ರಿ, ಎಡಿಸಿ ಎಸ್. ಕಾತ್ಯಾಯಿನಿದೇವಿ, ಎಎಸ್‌ಪಿ ಕೆ.ಎಸ್. ಸುಂದರ್ ರಾಜ್, ಎಸಿ ಗೀತಾ ಹುಡೇದ, ತಹಸೀಲ್ದಾರ್ ಬಸವರಾಜು, ವಿವಿಧ ಸಂಘಟನೆಗಳ ಮುಖಂಡರಾದ ವೆಂಕಟರಮಣ ಪಾಪು, ಸಿ.ಎನ್. ಬಾಲರಾಜು, ಸುರೇಶ್ ನಾಯಕ, ಕೆ.ವೀರಭದ್ರಸ್ವಾಮಿ, ಪರ್ವತರಾಜು, ಹಿರಿಯ ಕಲಾವಿದರಾದ ಮುಡಿಗುಂಡ ಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಪಂಚಾಯತ್ ರಾಜ್ ಇಲಾಖೆ ಇಇ ಇಬ್ರಾಹಿಂ, ಸೆಸ್ಕ್ ಇಇ ವಸಂತ್‌ಕುಮಾರ್, ಜಂಟಿ ಕೃಷಿ ನಿರ್ದೇಶಕ ಮಧುಸೂದನ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಲೋಕೋಪಯೋಗಿ ಇಲಾಖೆ ಇಇ ವಿನಯ್‌ಕುಮಾರ್, ಎಇಇ ಆರ್.ಪಿ.ಕೆಂಪರಾಜು, ಡಿಎಚ್‌ಓ ಕೆ.ಎಂ. ವಿಶ್ವೇಶ್ವರಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಗೀತಾಲಕ್ಷ್ಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಜಾತ್ರಾ ಮಹೋತ್ಸವ ಸಿದ್ಧತೆ ಪರಿಶೀಲನೆ

ಚಾಮರಾಜನಗರ: ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ ಜಾತ್ರಾ ಮಹೋತ್ಸವಗಳಿಗೆ ಕೈಗೊಂಡಿರುವ ಸಿದ್ಧತೆಗಳನ್ನು ಪರಿಶೀಲಿಸಿದರಲ್ಲದೆ, ಬೆಟ್ಟಕ್ಕೆ ಸಂಪರ್ಕಿಸುವ ರಸ್ತೆಗಳನ್ನು ತುರ್ತಾಗಿ ದುರಸ್ತಿ ಮಾಡುವ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೆಂಗಳೂರಿನ ವಿಧಾನಸೌಧದ ಮೂರನೇ ಮಹಡಿಯ ಸಮಿತಿ ಕೊಠಡಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತ್ರೆಗೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರು, ದಾಸೋಹ, ಶೌಚಾಲಯಗಳು, ಸ್ನಾನದ ಗೃಹಗಳ ವ್ಯವಸ್ಥೆ ಸಮರ್ಪಕವಾಗಿ ಆಗಬೇಕು. ಮೂಲ ಸೌಕರ್ಯಗಳಿಗೆ ಯಾವುದೇ ಕೊರತೆಯಾಗಬಾರದು. ಬೆಟ್ಟದಲ್ಲಿಯೂ ಜಾತ್ರಾ ಸಂದರ್ಭದಲ್ಲಿ ಆಕರ್ಷಕವಾಗಿ ವಿದ್ಯುತ್ ದೀಪಾಲಂಕಾರ ಮಾಡಬೇಕು. ಸ್ವಚ್ಛತಾ ಕಾರ್ಯಗಳು ಆಗಿಂದಾಗ್ಗೆ ನಡೆಯಬೇಕು. ಬಸ್‌ಗಳ ವ್ಯವಸ್ಥೆ, ಸುಗಮ ಸಂಚಾರ ಅಗತ್ಯ ವ್ಯವಸ್ಥೆಗಳಿಗೆ ಎಲ್ಲಾ ರಸ್ತೆಗಳ ಸಮರ್ಪಕ ನಿರ್ವಹಣೆಯಾಗಬೇಕು ಎಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಕೊಳ್ಳೇಗಾಲದಿಂದ ಮಹದೇಶ್ವರಬೆಟ್ಟಕ್ಕೆ ಸಂಪರ್ಕಿಸುವ ರಸ್ತೆ ಕಾರ್ಯ ಸಮರ್ಪಕವಾಗಿ ನಿರ್ವಹಣೆ ಆಗಬೇಕು. ಭಕ್ತಾದಿಗಳ ವಾಹನಗಳ ಸುಗಮ ಸಂಚಾರಕ್ಕೆ ರಸ್ತೆಗಳಿಂದ ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳಬೇಕೆಂದು ಸಚಿವರು ಸೂಚಿಸಿದರು.

ಹಲ್ಲೆ, ನಿಂದನೆ ಆರೋಪ: ಸಿಮ್ಸ್ ಡೀನ್‌ರಿಂದ ವೈದ್ಯನ ವಿರುದ್ಧ ದೂರು

ಚಾಮರಾಜನಗರ, ಸೆ.21–ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ(ಸಿಮ್ಸ್)ಯ ಡೀನ್ ಹಾಗೂ ನಿರ್ದೇಶಕ ಡಾ.ಜಿ.ಎಂ.ಸಂಜೀವ್ ಅವರು ತಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿರುವುದಾಗಿ ಆರೋಪಿಸಿ ಸಂಸ್ಥೆಯ ವೈದ್ಯನ ವಿರುದ್ಧ ಮಂಗಳವಾರ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸಿಮ್ಸ್ ವೈದ್ಯ ಡಾ.ಮಹೇಶ್ವರ್ ವಿರುದ್ಧ ದೂರು ದಾಖಲಾಗಿದೆ. ಯಡಬೆಟ್ಟದಲ್ಲಿರುವ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ 8.45, 9.15ರ ನಡುವೆ ನಾನು, ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಎಂ.ಮಹೇಶ್ ಅವರೊಂದಿಗೆ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕ ಪರಿಶೀಲಿಸುತ್ತಿದ್ದೆವು. ಈ ವೇಳೆ ಮಹೇಶ್ವರ್ ಪಾನಮತ್ತರಾಗಿ ಬಂದು ನನ್ನ ಮೇಲೆ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅವರು ತಂದಿರುವ ಮದ್ಯದ ಬಾಟಲಿ, ಊಟದ ಡಬ್ಬಿಯನ್ನು ನನ್ನ ಮೇಲೆ ಎಸೆದು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಡಾ.ಸಂಜೀವ್ ತಾವು ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ. ದೂರು ಸ್ವೀಕರಿಸಿರುವ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಡಾ.ಮಹೇಶ್ವರ್ ವಿರುದ್ಧ ಎಫ್‌ಐಆರ್ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಣ್ಣಿನ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಹೇಶ್ವರ್ ವಿರುದ್ಧ ಈ ಹಿಂದೆ ನರ್ಸ್ ಒಬ್ಬರಿಗೆ ಲೈಂಗಿಕ ಕಿರುಕುಳದ ಆರೋಪ ಕೇಳಿ ಬಂದಿತ್ತು. ಆ ಪ್ರಕರಣದಲ್ಲಿ ಅವರು ಅಮಾನತುಗೊಂಡಿದ್ದರು.

ಬಸ್ ಮಗುಚಿ ಐವರಿಗೆ ಗಾಯ

ಚಾಮರಾಜನಗರ, ಸೆ.21–ತಾಲೂಕಿನ ಪುಣಜನೂರು ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬಸ್ ಮಗುಚಿ ಬಿದ್ದು, ಐವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ತಾಳವಾಡಿಯ ಮಸೀದಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ತಮಿಳುನಾಡಿನ ವಿವಿಧೆಡೆಯಿಂದ ಮುಖಂಡರು ಬಸ್‌ನಲ್ಲಿ ಬರುತ್ತಿರುವ ಸಂದರ್ಭದಲ್ಲಿ ಬಸ್ ಪಲ್ಟಿಯಾಗಿದೆ. ಚಾಲಕ ಸೇರಿದಂತೆ ಐದು ಮಂದಿಗೆ ಗಾಯಗಳಾಗಿವೆ. ಈ ಸಂಬಂಧ ಯಾವುದೇ ಪ್ರಕರಣವೂ ದಾಖಲಾಗಿಲ್ಲ.

ವಿಜೃಂಭಣೆಯ ಶ್ರೀ ಪಾರ್ವತಾಂಬ ಜಾತ್ರೆ



ಬೇಗೂರು, ಸೆ.21–ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದ ಶ್ರೀ ಪಾರ್ವತಾಂಬ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮಸ್ಥರು ದೇಶಿಪುರ ಅರಣ್ಯದಲ್ಲಿರುವ ಮೂಲದೇವತೆಗೆ ಮಂಗಳವಾರ ಪೂಜೆ ಸಲ್ಲಿಸಿ, ಗ್ರಾಮಕ್ಕೆ ಆಗಮಿಸಿದ ನಂತರ ಗ್ರಾಮ ಪಾರ್ವತಾಂಬ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿರಿಸಿ ಪೂಜೆ ಸಲ್ಲಿಸಿದ ಬಳಿಕ ಜಾತ್ರೆಗೆ ಚಾಲನೆ ನೀಡಲಾಯಿತು. ಅಲ್ಲಿಂದ ರಾತ್ರಿ ಲಕ್ಷ್ಮೀದೇವಿ ದೇವಾಲಯದ ಬಳಿ ಎಳೆದು ತಂದು ಅಮಟೆ ಮರದ ಬಳಿ ನಿಲ್ಲಿಸಲಾಯಿತು. ರಾತ್ರಿ ಇಡೀ ಜಾತ್ರೆ ಬುಧವಾರ ಬೆಳಗ್ಗೆ ಮತ್ತೆ ರಥ ಸಾಗಿದ ದಾರಿಯಲ್ಲೇ ವಿಜೃಂಭಣೆಯಿಂದ ಹಿಂತಿರುಗಿತು.

ಗಮನ ಸೆಳೆದ ವಾದ್ಯ ಮೇಳ: ನುಡಿಸುತ್ತಿದ ವಾದ್ಯ ಹಾಗೂ ವಾದ್ಯ ಮೇಳಕ್ಕೆ ತಕ್ಕಂತೆ ನಂದಿ ಕಂಬ ಹೊತ್ತು ನೃತ್ಯ ಮಾಡುತ್ತಿದ್ದು, ಛತ್ರ, ಚಾಮರ, ತಮಟೆ, ಬಿರುದುಗಳು ಮುಂದೆ ಸಾಗಿದರೆ ಅಲಂಕೃತಗೊಂಡ ತೇರು ಬರುತ್ತಿದ್ದದು ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವಂತಿತ್ತು. ಸೇವಂತಿಗೆ ಹೂವನ್ನು ಹರಕೆಯ ಹೂವೆಂದು ರಥಕ್ಕೆ ಅರ್ಪಿಸುವುದರಿಂದ ಇಡೀ ರಥವೇ ಸೇವಂತಿಗೆ ಹೂವಿನಿಂದ ಕಂಗೊಳಿಸುತ್ತಿತ್ತು. ರೈತರು ಜಾನುವಾರುಗಳನ್ನು ಕರೆತಂದು ಪೂಜೆ ಸಲ್ಲಿಸಿ ಪಂಜಿನ ಸೇವೆ ನೆರವೇರಿಸಿದರು.


ಕುದೇರು ಕೃಷಿ ಪತ್ತಿನ ಸಂಘದ ವಾರ್ಷಿಕ ಮಹಾಸಭೆ



ಚಾಮರಾಜನಗರ, ಸೆ.21–ತಾಲೂಕಿನ ಕುದೇರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಡಿ.ವಸುಪಾಲ್ ಮಾತನಾಡಿ, ಸಂಘಕ್ಕೆ 3 ಲಕ್ಷ 49 ಸಾವಿರ ಲಾಭ ಬಂದಿವೆ. ರೈತರಿಗೆ ಶೂನ್ಯ ಬಡ್ಡಿಯಲ್ಲಿ 4 ಕೋಟಿ 70 ಲಕ್ಷ ರೂ.ಗಳನ್ನು ನೀಡಲಾಗಿದೆ. ಸಂಘದ ಗೋಡೌನ್ ನಿರ್ಮಾಣ ಕಾರ್ಯ 37 ಲಕ್ಷ ರೂ. ವೆಚ್ಚದಲ್ಲಿ ನಡೆಯುತ್ತಿವೆ. ರೈತರು ಸಕಾಲದಲ್ಲಿ ಸಾಲ ಹಿಂದಿರುಗಿಸಿ ಸರ್ಕಾರದ ಸೌಲಭ್ಯ ಪಡೆಯಬೇಕು ಎಂದು ಸಲಹೆ ನೀಡಿದರು. ಸಂಘದ ಸದಸ್ಯ ಕೆ.ಎಂ.ರಾಜೇಂದ್ರಸ್ವಾಮಿ ಸಭೆಯನ್ನು ಉದ್ಘಾಟಿಸಿದರು. ಸಂಘದ ಸಿಇಓ ಟಿ.ಮಹೇಶ್ ವಾರ್ಷಿಕ ವರದಿ ಮಂಡಿಸಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಯಲಕ್ಕೂರು ಮಹದೇವಸ್ವಾಮಿ, ಸದಸ್ಯರಾದ ಎಸ್.ಶಿವಶಂಕರ್, ಕೆ.ಎಸ್.ಮಹಾದೇವೇಗೌಡ, ಎಂ.ಶಿವಣ್ಣ, ಕೆ.ಎಲ್.ಮಲ್ಲಿಕಾರ್ಜುನಸ್ವಾಮಿ, ಭಟ್ಟಪ್ಪ, ನಾಗರತ್ನಮ್ಮ, ರತ್ನಮ್ಮ, ಪ್ರೇಮ, ಅಕೌಂಟ್ ಸಹಾಯಕ ಬಿ.ಮಹೇಶ್, ಅಟೆಂಡರ್ ಕೆ.ಪಿ.ಹುಚ್ಚಪ್ಪ ಹಾಜರಿದ್ದರು.

ನಿಯಂತ್ರಣ ತಪ್ಪಿ ಹಳ್ಳಕ್ಕೆ ಬಿದ್ದ ಕಾರು; 6 ಮಂದಿಗೆ ಗಾಯ



ಹನೂರು,ಸೆ.21–ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾದ ಪರಿಣಾಮ 6 ಜನರು ಗಾಯಗೊಂಡಿರುವ ಘಟನೆ ಹನೂರು ಪಟ್ಟಣದಲ್ಲಿ ಜರುಗಿದೆ.

ಮಂಗಳವಾರ ತಡರಾತ್ರಿ ಕೊಳ್ಳೇಗಾಲ ಮಾರ್ಗವಾಗಿ ಹನೂರು ಪಟ್ಟಣಕ್ಕೆ ಬರುತ್ತಿದ್ದ ಕಾರೊಂದು ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮೀಪದ ಸ್ವಾಮಿಹಳ್ಳದ ಎಡಬದಿಯಲ್ಲಿನ ವಿದ್ಯುತ್ ಕಂಬಕ್ಕೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿದೆ. ಕಾರು ಅತಿ ವೇಗದಲ್ಲಿ ಬಂದಿದ್ದರಿಂದ ವಿದ್ಯುತ್ ಕಂಬ ನುಚ್ಚು ನೂರಾಗಿ ಕೆಶಿಪ್ ರಸ್ತೆ ಕಾಮಗಾರಿಗಾಗಿ ಅಗೆದಿದ್ದ ಗುಂಡಿಗೆ ಕಾರು ಬಿದ್ದಿದೆ. ಅಪಘಾತ ದಲ್ಲಿ 6 ಮಂದಿ ಗಾಯಗೊಂಡಿದ್ದು, ಇವರಲ್ಲಿ ತೇಜಸ್ ಎಂಬುವವರ ಸ್ಥಿತಿ ಗಂಭೀರವಾಗಿದ್ದು, ಇವರನ್ನು ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದವರನ್ನು ಕಾಮಗೆರೆಯ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹನೂರು ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಮೈಸೂರು ಮಿತ್ರ ಗುರುವಾರ 22 ಸೆಪ್ಟೆಂಬರ್ 2022

ಗ್ರಾಪಂಗಳು ಕೇಂದ್ರ, ರಾಜ್ಯ ಸರ್ಕಾರಗಳ ಏಜೆನ್ಸಿಯಂತೆ ಕೆಲಸ ಮಾಡದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು

ನಾಯಕತ್ವ ತರಬೇತಿ ಶಿಬಿರದಲ್ಲಿ ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಸಲಹೆ



ಹೆಚ್.ಡಿ.ಕೋಟೆ, ಸೆ.21– ಗ್ರಾಮಪಂಚಾಯಿತಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಏಜೆನ್ಸಿಯಂತೆ ಕೆಲಸ ಮಾಡದೆ ಸ್ವತಂತ್ರ ಸ್ಥಳೀಯ ಸರ್ಕಾರಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯ ಅಧ್ಯಕ್ಷ ಕಾಡಶೆಟ್ಟಿ ಹಳ್ಳಿ ಸತೀಶ್ ಸಲಹೆ ನೀಡಿದರು.

ತಾಲೂಕಿನ ಗಡಿ ಗ್ರಾಮ ಡಿ.ಬಿ.ಕುಪ್ಪೆ ಗ್ರಾಮದ ಗಿರಿಜನ ಆಶ್ರಮ ಶಾಲೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ, ಮೈಸೂರು ಜಿಲ್ಲಾ ಸಮಿತಿ, ಬಿರ್ಸಾ ಮುಂಡಾ ಆದಿವಾಸಿ ಅಭಿವೃದ್ಧಿ ಒಕ್ಕೂಟದ ಸಹಯೋಗದಲ್ಲಿ ತಾಲೂಕು ಒಕ್ಕೂಟಗಳ ಪ್ರತಿನಿಧಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ನಾಯಕತ್ವ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಂವಿಧಾನದ 73ನೇ ತಿದ್ದುಪಡಿಯ ಮುಖಾಂತರ ಅಸ್ತಿತ್ವಕ್ಕೆ ಬಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮಪಂಚಾಯಿತಿಗಳು ಸ್ಥಳೀಯ ಸರ್ಕಾರವಾಗಿ ಕಾರ್ಯನಿರ್ವಹಿಸುವ ಪರಮಾಧಿಕಾರವನ್ನು ಹೊಂದಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬರುವ ಅನುದಾನಗಳಿಗೆ ಕಾರ್ಯನಿರ್ವಹಿಸುವ ಬದಲು ಗ್ರಾಪಂ ಸರ್ಕಾರವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲ ಕ್ರೋಡೀಕರಣಕ್ಕೆ ಮುಂದಾಗಬೇಕು. ಕೇವಲ ಮೂಲಭೂತ ಸೌಕರ್ಯಗಳಿಗೆ ಅಷ್ಟೇ ಸೀಮಿತವಾಗದೆ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆ ಸೇರಿದಂತೆ ಉತ್ಪಾದನಾ ವಲಯಕ್ಕೆ ಹೆಚ್ಚು ಒತ್ತು ನೀಡುವಂತೆ ಕರೆ ನೀಡಿದರು.

ಅಲ್ಲದೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೊಳಪಡುವ ಗ್ರಾಮಗಳಲ್ಲಿ ಜನರು ದಿನನಿತ್ಯ ಬಳಸುತ್ತಿರುವ ಜೀವನೋಪಾಯ ವಸ್ತುಗಳನ್ನು ಸ್ಥಳೀಯವಾಗಿ ಉತ್ಪಾದಿಸುವ ಮತ್ತು ಮಾರಾಟ ಮಾಡಲು ಸ್ಥಳೀಯ ಯುವಕ ಮತ್ತು ಮಹಿಳಾ ಸಂಘಗಳನ್ನು ಉತ್ತೇಜಿಸುವ ಮೂಲಕ ಆರ್ಥಿಕ ಸದೃಢತೆಯನ್ನು ಗ್ರಾಮೀಣ ಜನರಿಗೆ ನೀಡಲು ಗ್ರಾಮ ಪಂಚಾಯಿತಿಗೆ ವಿಪುಲವಾದ ಅವಕಾಶವಿದೆಯೆಂದು ಅಭಿಪ್ರಾಯಪಟ್ಟರು. ಈ ನಿಟ್ಟಿನಲ್ಲಿ ಸಾಧನೆ ಮಾಡಿರುವ ಪಂಚಾಯಿತಿಗಳ ಉದಾಹರಣೆಗಳನ್ನು ಶಿಬಿರಾರ್ಥಿಗಳಿಗೆ ವಿವರಿಸಿದರು. ಈ ರೀತಿಯ ಶಿಬಿರಗಳ ಮುಖಾಂತರ ಒಕ್ಕೂಟದ ಪ್ರತಿನಿಧಿಗಳು ಜ್ಞಾನವನ್ನು ಹೆಚ್ಚಿಸಿಕೊಂಡು ತಮ್ಮ ತಮ್ಮ ತಾಲೂಕುಗಳಲ್ಲಿ ಚುನಾಯಿತ ಪ್ರಜೆಗಳ ಜ್ಞಾನವನ್ನು ಹೆಚ್ಚಿಸುವ ಮುಖಾಂತರ ಸದೃಢ ಗ್ರಾಮೀಣ ಭಾರತವನ್ನು ಕಟ್ಟುವತ್ತ ದಿಟ್ಟ ಹೆಜ್ಜೆ ಇಡಬೇಕೆಂದು ಕರೆ ನೀಡಿದರು. ನಂತರ ಪ್ರತಿ ತಾಲೂಕಿನಲ್ಲಿ ಗ್ರಾಮ ಪಂಚಾಯತ್ ಸದಸ್ಯರು ಇರುವ ಸಮಸ್ಯೆಗಳ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಉಪನ್ಯಾಸ ಗೋಷ್ಠಿಯಲ್ಲಿ ಸಮಾಜ ಸೇವಕ ದೇವದತ್ತ, ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ನಿಶಾಂತ್, ಚಂದ್ರಾಲು, ಸಂಪನ್ಮೂಲ ವ್ಯಕ್ತಿಗಳಾದ ರಾಜಾ, ಕೆ.ಎಸ್. ರಾಘವೇಂದ್ರ ಜಿಲ್ಲಾಧ್ಯಕ್ಷ ನಾಗರಾಜು, ಖಜಾಂಚಿ ಬೇಬಿ, ಮಹೇಶ್, ಜಿಲ್ಲಾ ಉಪಾಧ್ಯಕ್ಷೆ ನಂದಿನಿ, ರಮೇಶ್, ಛಾಯಾ ನಾಗೇಗೌಡ ಉಪಸ್ಥಿತರಿದ್ದರು.

ಭಾರತ್ ಜೋಡೋ ಪಾದಯಾತ್ರೆಗೆ ಅಭೂತಪೂರ್ವ ಬೆಂಬಲ

ಮಾಜಿ ಸಂಸದ ಆರ್. ಧ್ರುವನಾರಾಯಣ್ ಸಂತಸ

ನಂಜನಗೂಡು, ಸೆ.21– ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಪಾದಯಾತ್ರೆಗೆ ಅಭೂತಪೂರ್ವ ಬೆಂಬಲ ದೊರೆಯುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್ ಧ್ರುವ ನಾರಾಯಣ್ ಸಂತಸ ವ್ಯಕ್ತಪಡಿಸಿದ್ದಾರೆ.



ನಗರದ ಮಹದೇಶ್ವರ ಭವನದಲ್ಲಿ ನಡೆದ ಭಾರತ್ ಜೋಡೋ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಭಾರತ್ ಜೋಡೋ ಪಾದಯಾತ್ರೆ ಯಶಸ್ವಿಯಾಗಿ ನಡೆಯುತ್ತಿದೆ. ಅ.1 ರಂದು ಬೆಳಗ್ಗೆ ಬೇಗೂರಿನಿಂದ ಪ್ರಾರಂಭವಾಗುವ ಪಾದಯಾತ್ರೆ ಮಧ್ಯಾಹ್ನ ನಂಜನಗೂಡು ವಿಧಾನಸಭಾ ಕ್ಷೇತ್ರ ತಲುಪಲಿದೆ. ಕ್ಷೇತ್ರದ ಆಯಾಯ ಗ್ರಾಪಂ ವ್ಯಾಪ್ತಿಯಲ್ಲಿ ಕುಂಭಮೇಳದ ಮೂಲಕ ರಾಹುಲ್ ಗಾಂಧಿಯವರನ್ನು ಬರಮಾಡಿಕೊಳ್ಳಬೇಕು. ನಂತರ ತಾಂಡವಪುರ ಗ್ರಾಮದಲ್ಲಿ ರಾಹುಲ್‌ಗಾಂಧಿ ವಾಸ್ತವ್ಯ ಹೂಡಲಿದ್ದಾರೆ ಎಂದರು.

ರಾಹುಲ್ ಗಾಂಧಿಯವರು ದೇಶದ ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಲು ಹಾಗೂ ದೇಶದ ಅಭಿವೃದ್ಧಿಗಾಗಿ ಈ ಪಾದಯಾತ್ರೆ ಮೂಲಕ ಅರಿವು ಮೂಡಿಸುತ್ತಿದ್ದಾರೆ. ಕೇಂದ್ರ ಸರ್ಕಾರ ನಿರುದ್ಯೋಗ ನಿವಾರಣೆ ಮಾಡುತ್ತೇವೆ ಎಂದು ಸುಳ್ಳು ಭರವಸೆ ನೀಡಿ ದೇಶದ ಜನತೆಗೆ ಮೋಸ ಮಾಡುತ್ತಿದೆ ಎಂದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ. ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಹಿಂದುಳಿದ ವರ್ಗದ ಅಧ್ಯಕ್ಷ ಕೆ.ಮಾರುತಿ, ಜಿಪಂ ಮಾಜಿ ಸದಸ್ಯ ಲತಾಸಿದ್ದಶೆಟ್ಟಿ, ದೊರೆಸ್ವಾಮಿನಾಯಕ, ನಗರಸಭಾ ಸದಸ್ಯ ಪ್ರದೀಪ್, ಎಸ್.ಪಿ.ಮಹೇಶ್, ವಿಜಯ್‌ಕುಮಾರ್, ಶಿವಣ್ಣ, ಗಂಗಾಧರ್, ಸ್ವಾಮಿ, ನಾಗರಾಜಯ್ಯ, ನಾಗರಾಜ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆ ಬಿಜೆಪಿ ಕೊಡುಗೆ

ಭಾರತ್ ಜೋಡೋ ಪಾದಯಾತ್ರೆ ಕಾರ್ಯಕ್ರಮದಲ್ಲಿ ನಲಪಾಡ್ ಆರೋಪ



ತಿ.ನರಸೀಪುರ, ಸೆ.21– ದೇಶದಲ್ಲಿ ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಇದು ಬಿಜೆಪಿ ಸರ್ಕಾರದ ಕೊಡುಗೆ ಎಂದು ರಾಜ್ಯ ಯೂತ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಹ್ಯಾರಿಸ್ ನಲಪಾಡ್ ಆರೋಪಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಭಾರತ್ ಜೋಡೋ ಪಾದಯಾತ್ರೆ ಹಾಗೂ ಉದ್ಯೋಗ ಸೃಷ್ಟಿ ಕಾರ್ಯಕ್ರಮದ ಅಂಗವಾಗಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಧಾನಿಗಳು ಅಚ್ಛೆ ದಿನ್ ಎಂದು ಹೇಳುತ್ತಿದ್ದರು. ಈಗ ಯಾರಿಗೆ ಅಚ್ಛೆ ದಿನ್ ಬಂದಿದೆ ಎಂದು ಪ್ರಧಾನಿಗಳು ಉತ್ತರಿಸುವರೇ ಎಂದು ಪ್ರಶ್ನಿಸಿದ ಅವರು, ದೇಶದಲ್ಲಿ ಜನರು ಬೆಲೆ ಏರಿಕೆ ನಿರುದ್ಯೋಗದಿಂದ ತತ್ತರಿಸುತ್ತಿದ್ದಾರೆ. ಜನರನ್ನು ದಿನ ದಿನಕ್ಕೂ ಬೆಲೆ ಏರಿಕೆಯಿಂದ ಕೊಲ್ಲುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಇತಿಹಾಸವಿದೆ. ಇತಿಹಾಸ ಎಂದರೆ ಕಾಂಗ್ರೆಸ್, ದೇಶದ ಅಭಿವೃದ್ಧಿ ಕೊಡುಗೆ ಇದೆ. ನಮ್ಮ ಸರ್ಕಾರ ವಿದ್ದ ವೇಳೆ ಜನರಿಗೆ ಬೆಲೆ ಏರಿಕೆಯ ಬಿಸಿ ಇರಲಿಲ್ಲ. ಬಿಜೆಪಿ ಸರ್ಕಾರದ ಬಂದ ಮೇಲೆ ಜನರಿಗೆ ಸರ್ಕಾರ ದ್ರೋಹ ಬಗೆಯುತ್ತಿದೆ. ನಮ್ಮ ನಾಯಕ ರಾಹುಲ್ ಗಾಂಧಿಯವರು ಭಾರತ್ ಜೋಡೋ ಯಾತ್ರೆಯ ಮೂಲಕ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದರು.

ಬೆಂಗಳೂರಿನಲ್ಲಿ ಒತ್ತುವರಿ ತೆರವಿಗೆ ಕಾಂಗ್ರೆಸ್ ವಿರೋಧವಿದೆ ಎಂಬ ಬಿಜೆಪಿ ನಾಯಕರ ಆರೋಪ ಕುರಿತು ಪ್ರತಿಕ್ರಿಯಿಸಿದ ನಲಪಾಡ್, ಕಾಂಗ್ರೆಸ್‌ಗೂ ಒತ್ತುವರಿ ತೆರವಿಗೂ ಸಂಬಂಧವಿಲ್ಲ. ಬಿಜೆಪಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ. ಒತ್ತುವರಿ ತೆರವು ಮಾಡುವ ಮುನ್ನಾ ವೈಜ್ಞಾನಿಕವಾಗಿ ವರದಿ ತಯಾರಿಸಿ. ಜಸ್ಟ್ ಫ್ಲಡ್ ಬಂದ ತಕ್ಷಣ ಆ ಕಟ್ಟಡ ಹೊಡೆಯಿರಿ. ಈ ಕಟ್ಟಡ ಹೊಡೆಯಿರಿ ಎಂದರೆ ಹೇಗೆ? ವೈಜ್ಞಾನಿಕವಾಗಿ ವರದಿ ತಯಾರು ಮಾಡದೆ ಸಿಕ್ಕ ಸಿಕ್ಕವರ ಮನೆ ಹೊಡೆದರೆ ಹೇಗೆ ಹೇಳಿ? ಎಂದು ಪ್ರಶ್ನಿಸಿದರು. ಏಷಾನ್ ಆಹಮದ್ ಖಾನ್, ಯೂತ್ ಜಿಲ್ಲಾಧ್ಯಕ್ಷ ಡೊನಾಲ್ಡ್, ರಾಜ್ಯ ಉಪಾಧ್ಯಕ್ಷ ವಿಶ್ವನಾಥ್, ರಾಜ್ಯ ಉಸ್ತುವಾರಿ ಅನಿಲ್ ಕುಮಾರ್, ರಾಷ್ಟ್ರೀಯ ಉಸ್ತುವಾರಿ ಆಶಿತ್ ಜಿ. ಪೆರಾರಾ, ಮೊಬೈಲೇ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಹಿಲಾಹಿ, ಪುರಸಭಾಧ್ಯಕ್ಷ ಮದನ್ ರಾಜು, ಸದಸ್ಯ ಸೋಮು, ನಂಜುಂಡಸ್ವಾಮಿ, ಯೂತ್ ಅಧ್ಯಕ್ಷ ಅಮಾಸೆ ಲಿಂಗರಾಜು, ಉಪಾಧ್ಯಕ್ಷ ನಟೇಶ್, ಎಡದೊರೆ ಮರಯ್ಯ, ನಟರಾಜು, ತಡಗೂರು ಬ್ಲಾಕ್ ಅಧ್ಯಕ್ಷ ಮಹದೇವಸ್ವಾಮಿ, ತಾ.ಪಂ ಮಾಜಿ ಸದಸ್ಯ ರಮೇಶ್, ಮಣಿ, ಆರ್.ಮಹದೇವ್, ವೆಂಕಿ ಇದ್ದರು.

ನೆರೆ ಪೀಡಿತ ಗ್ರಾಮಗಳಿಗೆ ಅಧಿಕಾರಿಗಳ ಭೇಟಿ, ಪರಿಶೀಲನೆ

ಸಂತ್ರಸ್ತರ ಸಂಕಷ್ಟಗಳ ಬಗ್ಗೆ ಮಾಹಿತಿ ಸಂಗ್ರಹ



ಸರಗೂರು, ಸೆ.21–ಕಂದಾಯ ಇಲಾಖೆ ಅಧಿಕಾರಿಗಳು, ಇಂಜಿನಿಯರ್‌ಗಳು ತಾಲೂಕಿನ ನೆರೆಪೀಡಿತ ಗ್ರಾಮಗಳಿಗೆ ಭೇಟಿ ನೀಡಿ, ಸಂತ್ರಸ್ತರ ಸಂಕಷ್ಟದ ಬಗ್ಗೆ ಮಾಹಿತಿ ಸಂಗ್ರಹಿಸಿ, ಸ್ಥಳ ಪರಿಶೀಲನೆ ನಡೆಸಿದರು.

ನೆರೆಯಿಂದಾಗಿ ಹಾನಿಗೊಳಗಾದ 250 ಅರ್ಜಿದಾರರ ಮನೆಗಳಿಗೆ ಭೇಟಿ ನೀಡಿದ ಮುಡಾದ ತಹಶೀಲ್ದಾರ್ ಜಾನ್ಸನ್, ಗುರುಪ್ರಸಾದ್, ರವಿಪ್ರಸಾದ್ ಹಾಗೂ ಎಂಜನಿಯರ್‌ಗಳಾದ ಶಿವಣ್ಣ, ನಾಗೇಶ್, ಶ್ರೀನಿವಾಸ್ ಅವರು ಪರಿಶೀಲನೆ ನಡೆಸಿ, ಅರ್ಜಿದಾರರಿಂದ ಮಾಹಿತಿ ಕಲೆ ಹಾಕಿದರು.

ಪರಿಶೀಲನೆ ವೇಳೆ ಮನೆ ಗೋಡೆಗಳು ಕುಸಿತಗೊಂಡಿರುವುದು ಶೇ. 10 ಮಾತ್ರ. ಇದಲ್ಲದೆ ಕೊಟ್ಟಿಗೆ, ವಾಸವಿಲ್ಲದ ಮನೆಗಳಿಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಿತು. ಅರ್ಜಿಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ತಪ್ಪು ಮಾಹಿತಿ ನೀಡಿದ್ದು, ಕಂಡಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು. ರವಿಪ್ರಸಾದ್ ಮತ್ತು ತಂಡ ಬೀದರಹಳ್ಳಿ, ತೆರಣಿಮುಂಟಿ, ಕಪಿಲಾ ಕಾಲೋನಿಗೆ ಭೇಟಿ ನೀಡಿದ ಸಂದರ್ಭದಲ್ಲಿ 30 ಮನೆಗಳ ಅರ್ಜಿಗಳನ್ನು ಪರಿಶೀಲಿಸಿದ್ದು, ಆ ಪೈಕಿ ಕೇವಲ 2 ಮನೆಗಳ ಅರ್ಜಿಗಳು ಮಾತ್ರ ಅರ್ಹವಾಗಿದ್ದವು. ಗುರುವಾರವೂ ಪರಿಶೀಲನೆ ಮುಂದುವರೆಯಲಿದೆ.

ಸರಗೂರು ತಾಲೂಕು ನೂತನ ತಹಶೀಲ್ದಾರ್ ಎಂ.ಶಿವಮೂರ್ತಿ ಮಾತನಾಡಿ, ಪರಿಹಾರ ಪಾವತಿಸದೇ ಬಾಕಿ ಉಳಿಸಿದ್ದ 250 ಅರ್ಜಿಗಳ ಪರಿಶೀಲನೆ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈಗಾಗಲೇ ಪರಿಹಾರ ಮಂಜೂರಾದ ಫಲಾನುಭವಿಗಳ ಮನೆಗಳಿಗೂ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಇಂಥ ವೇಳೆ ಅನರ್ಹಗೊಂಡರೆ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಉಪ ತಹಶೀಲ್ದಾರ್ ಸುನೀಲ್, ಕಲೀಂಪಾಷಾ, ರಾಜಸ್ವ ನಿರೀಕ್ಷಕ ಮುಜೀಬ್, ಗೋವಿಂದರಾಜು, ಗ್ರಾಮ ಲೆಕ್ಕಿಗ ಕುಮಾರ್, ಹೇಮಂತ್, ಮಂಜುನಾಥ್ ಸೇರಿದಂತೆ ಇನ್ನಿತರರು ಹಾಜರಿದ್ದರು. ಸರಗೂರು ಪೊಲೀಸ್ ಠಾಣೆ ಪಿಎಸ್‌ಐ ಶ್ರವಣದಾಸ್ ರೆಡ್ಡಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ಕಾಮಗಾರಿಗೆ ಶಂಕುಸ್ಥಾಪನೆ



ಹನಗೋಡು, ಸೆ.21– ಹೋಬಳಿಯ ನಾಗಪುರ ಗಿರಿಜನ ಪುನರ್ವಸತಿ ಕೇಂದ್ರದ ಐದನೇ ಘಟಕ, ಮುತ್ತುರಾಯನ ಹೊಸ ಹಳ್ಳಿ ಹಾಗೂ ಕರಣಕುಪ್ಪೆ ಗ್ರಾಮಗಳಲ್ಲಿ ಮೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಕಾಮಗಾರಿಗಳಿಗೆ ಶಾಸಕ ಎಚ್.ಪಿ.ಮಂಜುನಾಥ್ ಶಂಕುಸ್ಥಾಪನೆ ನೆರವೇರಿಸಿದರು.

ಹನಗೋಡು ಜಿಪಂ ವ್ಯಾಪ್ತಿಯ ವಿಶೇಷ ಕುಡಿಯುವ ನೀರಿನ ಯೋಜನೆಯಡಿ 33 ಲಕ್ಷ ರೂ. ವೆಚ್ಚದಲ್ಲಿ ತಲಾ ಐವತ್ತು ಸಾವಿರ ಲೀಟರ್ ಸಾಮರ್ಥ್ಯದ ಮೂರು ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಆಯಾಯ ಗ್ರಾಮಗಳಲ್ಲಿ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆ ದೋರಬಾರದೆಂಬ ಉದ್ದೇಶದಿಂದ ಟ್ಯಾಂಕ್ ನಿರ್ಮಾಣ ಮಾಡುತ್ತಿದ್ದು, ಕಾಮಗಾರಿಯನ್ನು ನಿರ್ವಹಣೆ ಮಾಡುವ ಗುತ್ತಿಗೆದಾರ ನಿಗದಿತ ಕಾಲಮಿತಿಯೊಳಗೆ ಕಾಮಗಾರಿ ಮುಗಿಸಿ ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸುವಂತಾಗಬೇಕೆಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಗುರುಪುರ ಪಂಚಾಯಿತಿ ಅಧ್ಯಕ್ಷೆ ರಾದಮ್ಮ, ಉಪಾಧ್ಯಕ್ಷ ಲೋಕೇಶ್, ಕರುಣಕುಪ್ಪೆ ಗ್ರಾಪಂ ಉಪಾಧ್ಯಕ್ಷ ಮಾದೇಗೌಡ, ಕಲ್ಲಳ್ಳಿ ಗ್ರಾಪಂ ಅಧ್ಯಕ್ಷೆ ಪುಟ್ಟತಾಯಮ್ಮ ಮುಖಂಡರಾದ ಕರಣಕುಪ್ಪೆ ಬಸವರಾಜಪ್ಪ, ಹಮ್ಮಿಗೆರಾಮೇಗೌಡ, ಗೌಡನ ಕಟ್ಟೆ ಬೀರೇಗೌಡ, ಕುಮಾರ್, ಪ್ರಕಾಶ್, ಪ್ರಶಾಂತ್ ಚಂದ್ರೇಗೌಡ ರಾಜನಾಯಕ, ಪಿ.ಡಿ.ಓ.ಗಳಾದ ರಾಮಣ್ಣ, ಅರುಣ್‌ಕುಮಾರ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಪಿರಿಯಾಪಟ್ಟಣ ಟಿಎಪಿಸಿಎಂಎಸ್‌ಗೆ ಅಮೃತ ಮಹೋತ್ಸವ ಸಂಭ್ರಮ



ಪಿರಿಯಾಪಟ್ಟಣ, ಸೆ.21– ಟಿಎಪಿಸಿಎಂಎಸ್ ಅಮೃತ ಮಹೋತ್ಸವ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಜಮೀನು ಖರೀದಿಸಿ ಗೋದಾಮು ನಿರ್ಮಾಣ ಹಾಗೂ ಪೆಟ್ರೋಲ್ ಬಂಕ್ ತೆರೆಯುವ ಆಲೋಚನೆಯಿದೆ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಹೆರೆ ನಾಗೇಂದ್ರ ಹೇಳಿದರು.

ಪಟ್ಟಣದ ಸಾಯಿ ಸಮುದಾಯ ಭವನದಲ್ಲಿ ನಡೆದ ಟಿಎಪಿಸಿಎಂಎಸ್ ಸಹಕಾರ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘಕ್ಕೆ ನಿತ್ಯ ಆದಾಯ ಬರುವ ನಿಟ್ಟಿನಲ್ಲಿ ಹಾಗೂ ಸಂಘ ಮತ್ತಷ್ಟು ಅಭಿವೃದ್ಧಿಯತ್ತ ಲಾಭದಾಯಕವಾಗಿ ಮುನ್ನುಗ್ಗುವಲ್ಲಿ ನೂತನ ಯೋಜನೆಗಳನ್ನು ಜಾರಿಗೊಳಿಸಲು ಸಹಕಾರಿಗಳು ಪಕ್ಷಾತೀತವಾಗಿ ಕೈಜೋಡಿಸಬೇಕು ಎಂದು ಮನವಿ ಮಾಡಿ ಸಂಘದಿಂದ ದೊರೆಯುವ ಸವಲತ್ತುಗಳನ್ನು ಸಕಾಲಕ್ಕೆ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದರು. ಸಿಇಒ ಬಿ.ವಿ ಕಲಾವತಿ ಅವರು ವಾರ್ಷಿಕ ವರದಿ ಮಂಡಿಸಿ ಮಾತನಾಡಿ ಸಂಘವು 2021–22 ನೇ ಸಾಲಿನಲ್ಲಿ 19.84 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಮಾಹಿತಿ ನೀಡಿದರು. ಸಂಘದ ಷೇರುದಾರ ಸದಸ್ಯರು ಮುಂಬರುವ ದಿನಗಳಲ್ಲಿ ಮರಣ ನಿಧಿ ಹೆಚ್ಚಳ, ಸಕಾಲಕ್ಕೆ ಗೊಬ್ಬರ ವಿತರಣೆ ಹಾಗೂ ಡಿವಿಡೆಂಟ್ ಫಂಡ್ 13 ರಿಂದ 15 ರವರೆಗೆ ಏರಿಸುವಂತೆ ಒತ್ತಾಯಿಸಿದರು, ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಷೇರುದಾರರ ಮಕ್ಕಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭ ಸಂಘದ ಉಪಾಧ್ಯಕ್ಷ ಪಿ.ವಿ ಜಲೇಂದ್ರ, ನಿರ್ದೇಶಕರಾದ ಸುನಿತ .ಮುಕೇಶಕುಮಾರ್, ಜವರಪ್ಪ, ಮಂಜುನಾಥ್, ಎಸ್.ರಾಮು, ಎಚ್.ಡಿ.ವಿಜಯ, ಎಸ್.ವಿ ತಿಮ್ಮೇಗೌಡ, , ಪಿ.ಎಂ ಮಹದೇವ್, ಐಲಾಪುರ ರಾಮು ಸರ್ವಮಂಗಳ ವಿದ್ಯಾಶಂಕರ, ತಿಮ್ಮನಾಯಕ ಇತರರಿದ್ದರು.

ಗ್ರಾಮೀಣ ಪ್ರದೇಶದ ರೈತರಿಗೆ ವರದಾನವಾಗಿರುವ ಹೈನುಗಾರಿಕೆ

ಮೈಮುಲ್ ನಿರ್ದೇಶಕ ಚೆಲುವರಾಜು ಅಭಿಪ್ರಾಯ



ತಿ.ನರಸೀಪುರ, ಸೆ.21– ಹೈನುಗಾರಿಕೆ ಗ್ರಾಮೀಣ ಪ್ರದೇಶದ ರೈತರಿಗೆ ವರದಾನವಾಗಿದೆ. ಹಾಲು ಉತ್ಪಾದಕರು ಉತ್ತಮ ಗುಣಮಟ್ಟದ ಹಾಲನ್ನು ಉತ್ಪಾದಿಸುವುದರ ಮೂಲಕ ಗರಿಷ್ಠ ಬೆಲೆಯನ್ನು ಪಡೆದುಕೊಳ್ಳಬೇಕು ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹೇಳಿದರು.

ತಾಲೂಕಿನ ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಕ್ಷೀರೋದ್ಯಮದಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಬೇಕು. ಹಸುಗಳ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡಬೇಕು. ಆರೋಗ್ಯವಂತ ಹಸುವಿನಿಂದ ಮಾತ್ರ ಉತ್ತಮ ಗುಣಮಟ್ಟದ ಹಾಲು ಸಿಗಲು ಸಾಧ್ಯವಾಗುತ್ತದೆ. ರೋಗ ರುಜಿನ ಬರದಂತೆ ಕಾಲ ಕಾಲಕ್ಕೆ ಸರಿಯಾಗಿ ತಜ್ಞ ಪಶುವೈದ್ಯರಿಂದ ಲಸಿಕೆ ಕೊಡಿಸಬೇಕು ಎಂದು ರೈತರಿಗೆ ಸಲಹೆ ನೀಡಿದರು.

ಕಳೆದ 5 ವರ್ಷಗಳಿಂದ ಸರ್ಕಾರ ಹಾಲು ಉತ್ಪಾದಕರು ಸರಬರಾಜು ಮಾಡುವ ಹಾಲಿಗೆ ಬೆಲೆ ಜಾಸ್ತಿ ಮಾಡಿಲ್ಲ.ಈ ಬಗ್ಗೆ ಒಕ್ಕೂಟವು ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಗ್ರಾಹಕರಿಗೆ ಬೆಲೆಯಿಂದ ತೊಂದರೆ ಉಂಟಾಗುತ್ತದೆ ಎಂಬ ಕುಂಟುನೆಪದಿಂದ ರೈತರ ಹಿತಾಸಕ್ತಿ ಬಲಿಕೊಡಲು ಮುಂದಾಗಿದೆ. ಹಾಲಿಗೆ ಬೆಲೆ ಜಾಸ್ತಿ ಮಾಡುವ ಸಂಬಂಧ ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ ಹಾಲು ಉತ್ಪಾದಕರ ಸಮಾವೇಶ ಮಾಡುವ ಮೂಲಕ ಸರ್ಕಾರಕ್ಕೆ ಎಚ್ಚರಿಸುವ ಕೆಲಸ ಮಾಡಬೇಕಿದೆ ಎಂದರು.

ಮೈಮುಲ್‌ನ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಮೈಸೂರು ಡೇರಿಗೆ ಇಡೀ ಜಿಲ್ಲೆಯಿಂದ ಪ್ರತಿನಿತ್ಯ 7 ಲಕ್ಷ ಲೀಟರ್ ಹಾಲು ಬರುತ್ತಿದ್ದು, 3 ಲಕ್ಷ ಲೀಟರ್ ಮಾತ್ರವೇ ಮಾರಾಟವಾಗುತ್ತಿದೆ. ಉಳಿದ ಹಾಲಿನಿಂದ ಪೌಡರ್ ತಯಾರಿಸಲಾಗುತ್ತಿದೆ. ಒಂದು ಲೀಟರ್ ಪೌಡರ್ ತಯಾರಿಸಲು 49 ರೂ.ಗಳ ಖರ್ಚು ಬೀಳುತ್ತಿದ್ದು,11 ಲೀಟರ್ ಹಾಲಿನಿಂದ ಒಂದು ಕೆ.ಜಿ. ಪೌಡರ್ ಮಾಡಲಾಗುತ್ತದೆ ಎಂದು ತಿಳಿಸಿದರು.

ರೈತರು ಸರಬರಾಜು ಮಾಡುವ ಹಾಲಿಗೆ ಮೈಮುಲ್ ಹೆಚ್ಚಿನ ಹಣ ನೀಡುತ್ತಿದೆ. ಮಂಡ್ಯದಲ್ಲಿ 28, ಚಾಮರಾಜನಗರದಲ್ಲಿ 26 ರೂ.ಗಳನ್ನೇ ನೀಡಲಾಗುತ್ತಿದೆ. ಹಾಲಿನ ದರ ಏರಿಕೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು ಸರ್ಕಾರ ಸಹ 3 ರೂ.ಗಳನ್ನು ಹೆಚ್ಚು ಮಾಡುವುದಾಗಿ ಭರವಸೆ ನೀಡಿದೆ. ದಸರಾ ನಂತರ ದರ ಹೆಚ್ಚಳಕ್ಕೆ ಒಕ್ಕೂಟಕ್ಕೆ ಅನುಮತಿ ಸಿಗಬಹುದು ಎಂದರು. ಸಂಘದ ಕಾರ್ಯದರ್ಶಿ ಜಿ.ಮಾದಪ್ಪ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘವು 2,82,327 ರೂ.ಗಳ ನಿವ್ವಳ ಲಾಭಾಂಶ ಗಳಿಸಿ ಯಶಸ್ವಿಯಾಗಿ ವ್ಯವಹಾರ ನಡೆಸುತ್ತಿದೆ ಎಂದು ವಿವರ ನೀಡಿದರು.

ಸಂಘದ ಅಧ್ಯಕ್ಷ ಬಸವಣ್ಣ, ಉಪಾಧ್ಯಕ್ಷ ಬಿ.ಜಿ.ರಮೇಶನ್, ಮಾರ್ಗ ವಿಸ್ತರಣಾಧಿಕಾರಿ ಗಳಾದ ಆರ್.ಪ್ರಮೋದ್, ಅನಿತ, ಕಾರ್ಯಕಾರಿ ಮಂಡಳಿ ಸದಸ್ಯರಾದ ಬಿ.ಎಂ. ಮಹದೇವಸ್ವಾಮಿ, ಸಿದ್ದಪ್ಪ ಬಿ.ಎಸ್. ಬಸಪ್ಪ, ಶಿವಪಾದ, ರಾಜಶೆಟ್ಟಿ, ಶಿವಮ್ಮ, ಪ್ರೇಮ, ಶಿವಮ್ಮ, ಹಾಲು ಪರೀಕ್ಷಕ ಬಿ.ಪಿ.ಮಹೇಶ್, ಬಿ.ಎನ್. ಮಹೇಶ್, ಎ.ಐ.ಕಾರ್ಯಕರ್ತ ಬಿ.ಎಂ.ಮಹದೇವ ಸ್ವಾಮಿ, ಹೂವಮ್ಮ ಸೇರಿದಂತೆ ಗ್ರಾಮಸ್ಥರು, ಯಜಮಾನರುಗಳು ಭಾಗವಹಿಸಿದ್ದರು.

ದೇವನೂರು ಗ್ರಾಪಂಗೆ ರವಿ ಉಪಾಧ್ಯಕ್ಷ



ದೇವನೂರು, ಸೆ.21– ನಂಜನಗೂಡು ತಾಲೂಕಿನ ದೇವನೂರು ಗ್ರಾಪಂ ಉಪಾಧ್ಯಕ್ಷರಾಗಿ ಡಿ.ಎಂ.ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 19 ಸದಸ್ಯ ಬಲದ ಗ್ರಾಪಂನಲ್ಲಿ ಬಿಜೆಪಿ 15, ಕಾಂಗ್ರೆಸ್ 3 ಸದಸ್ಯರನ್ನು ಹೊಂದಿದೆ. ಅವಿಶ್ವಾಸದ ಮೂಲಕ ಪದಚ್ಯುತಿಗೊಳಿಸಲಾಗಿದ್ದ ಈ ಹಿಂದಿನ ಉಪಾಧ್ಯಕ್ಷ ಹನುಮಂತನಾಯಕ ಅವರ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಿತು.

ಉಪಾಧ್ಯಕ್ಷ ಸ್ಥಾನಕ್ಕೆ ಡಿ.ಎಂ.ರವಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಿಡಿಪಿಓ ಮಂಜುಳಾ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಉಪಾಧ್ಯಕ್ಷ ಡಿ.ಎಂ.ರವಿ ಮಾತನಾಡಿ, ನನ್ನ ಆಯ್ಕೆಗೆ ಕಾರಣರಾದ ಶಾಸಕ ಬಿ.ಹರ್ಷವರ್ಧನ್, ಜಿಪಂ ಸದಸ್ಯ ಸಿ.ಚಿಕ್ಕರಂಗನಾಯಕ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಮತ್ತು ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯ ಒದಗಿಸಲು ಶ್ರಮಿಸುತ್ತೇನೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಗ್ರಾಪಂ ಅಧ್ಯಕ್ಷೆ ಪದ್ಮ, ಸದಸ್ಯರಾದ ಮಂಜುಳಾ, ಭಾನುಪ್ರಕಾಶ್, ಅವಿನಾಶ್, ಡಿ.ಎಂ.ಮಹದೇವಯ್ಯ, ಪಿಡಿಓ ಬಸವರಾಜು, ಮುಖಂಡರಾದ ಗಂಗಾಧರ್ ಇತರರಿದ್ದರು.

ಕಾಂಗ್ರೆಸ್ ಮುಖಂಡ ಇಸ್ಮಾಯಿಲ್ ನಿಧನ



ಸರಗೂರು, ಸೆ.21– ಪಟ್ಟಣದ ಯುವ ಕಾಂಗ್ರೆಸ್ ಮುಖಂಡ ಇಸ್ಮಾಯಿಲ್ (45) ಅವರು 5ನೇ ವಾರ್ಡಿನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಮೃತರು ತಂದೆ, ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನ ಸೇವೆಗೆ ಹೆಚ್ಚು ಒತ್ತು ನೀಡಿರುವ ಬಿಜೆಪಿ

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ



ಮೋದಿ ಯುಗ್ ಉತ್ಸವದ 5ನೇ ದಿನದ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಚಾಲನೆ ನೀಡಿದರು. ಚಿತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಉಪಾಧ್ಯಕ್ಷ ಎಂ.ರಾಜೇಂದ್ರ ಇನ್ನಿತರಿದ್ದಾರೆ.

ಮೈಸೂರು,ಸೆ.21(ಆರ್‌ಕೆಬಿ)– ಬಿಜೆಪಿಯು ಬರೀ ರಾಜಕೀಯಕ್ಕೆ ಸೀಮಿತವಾಗದೆ ಜನ ಸೇವೆಗೆ ಹೆಚ್ಚು ಒತ್ತು ನೀಡಿದೆ ಎಂಬುದನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಫಲಾನುಭವಿಗಳ ಮನೆ ಬಾಗಿಲಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಮೂಲಕ ಮಾಡಿ ತೋರಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಮೈಸೂರಿನ ವಿದ್ಯಾರಣ್ಯಪುರಂ ಶ್ರೀ ರಾಮಲಿಂಗೇಶ್ವರ ಉದ್ಯಾನದಲ್ಲಿ ಬುಧವಾರ ಶಾಸಕ ರಾಮದಾಸ್ ಆಯೋಜಿಸಿದ್ದ 9 ದಿನಗಳ 'ಮೋದಿ ಯುಗ್ ಉತ್ಸವ್' ಕಾರ್ಯಕ್ರಮದ 5ನೇ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಮದಾಸ್ ಇತರರಿಗೆ ಮಾದರಿ ಶಾಸಕರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ದೇಶದ ಬೆಳವಣಿಗೆಗೆ ಉತ್ತಮ ನಾಯಕರಾಗಿದ್ದಾರೆ. ಮೋದಿ ಪ್ರತಿಯೊಬ್ಬ ಭಾರತೀಯನನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ. ಜನರ ಆರೋಗ್ಯ ಕಾಳಜಿ, ಸರ್ವತೋಮುಖ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ ಮತ್ತು ಇತರ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂಬುದರ ಕುರಿತು ಪ್ರಧಾನಿ ಜಗತ್ತಿಗೆ ಮಾರ್ಗದರ್ಶಕರಾಗಿ ಹೊರಹೊಮ್ಮಿದ್ದಾರೆ ಎಂದು ತಿಳಿಸಿದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಸೇವೆಯನ್ನು ಸ್ಮರಿಸಿದ ವಿಜಯೇಂದ್ರ, ಸಾಮಾಜಿಕ ಸಮಾನತೆಯ ತತ್ವಗಳನ್ನು ಪಾಲಿಸುತ್ತಾ ಸಮಾಜದ ಎಲ್ಲಾ ಸಮುದಾಯಗಳು ಮತ್ತು ವರ್ಗಗಳಿಗೆ ಅವರು ಉತ್ತಮ ಕೊಡುಗೆ ನೀಡಿದ್ದಾರೆ ಎಂದರು.

ವರುಣಾ ವಿಧಾನಸಭಾ ಕ್ಷೇತ್ರ ಮತ್ತು ಹಳೇ ಮೈಸೂರು ಭಾಗದ ಜನರು ತಮ್ಮ ಮೇಲೆ ಅಪಾರ ನಂಬಿಕೆ ಇಟ್ಟಿದ್ದಾರೆ. ಅದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದ ವಿಜಯೇಂದ್ರ, ಶಾಸಕ ರಾಮದಾಸ್ ಅವರು ಜನರಿಗಾಗಿ ದುಡಿಯುವ ಮತ್ತು ಸದಾ ಜನರ ಮಧ್ಯೆ ಇರಲು ಬಯಸುವವರು. ಈ ಭಾಗದ ಜನತೆ ತಮ್ಮ ಬಗ್ಗೆಯೂ ತೋರಿರುವ ಅಪಾರ ಪ್ರೀತಿಗೆ ಅನುಗುಣವಾಗಿ ನಾನು ಪ್ರಾಮಾಣಿಕವಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತೇನೆ ಎಂದು ತಿಳಿಸಿದರು.

ಎಲ್ಲರಿಗೂ ಆರೋಗ್ಯ ಭದ್ರತೆ: ಶಾಸಕ ಎಸ್.ಎ.ರಾಮದಾಸ್ ಪ್ರಾಸ್ತಾವಿಕವಾಗಿ ಮಾತನಾಡಿ, ಮೋದಿ ಯುಗ್ ಉತ್ಸವದ ಇಂದಿನ ಕಾರ್ಯಕ್ರಮದಲ್ಲಿ ಆರೋಗ್ಯ ಯೋಜನೆಯಡಿ ಎಲ್ಲರಿಗೂ ಆರೋಗ್ಯ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಲೋಪತಿ, ಆಯುರ್ವೇದ, ನ್ಯಾಚುರೋಪತಿ, ಯೋಗ ಎಲ್ಲದರ ಬಗ್ಗೆ ಮನೆ ಮನೆ ಸಮೀಕ್ಷೆ ನಡೆಸಿದ ವೇಳೆ, ಶೇ.20ರಷ್ಟು ಸಕ್ಕರೆ ಕಾಯಿಲೆ, ಶೇ.18.6ರಷ್ಟು ರಕ್ತದೊತ್ತಡ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಪತ್ತೆ ಹಚ್ಚಲಾಗಿದೆ. ಇದು ಆತಂಕಕಾರಿ ವಿಷಯವಾಗಿದೆ. ಇದ್ದಾಗಿ ಸಕ್ಕರೆ ಕಾಯಿಲೆ ಮತ್ತು ರಕ್ತದೊತ್ತಡಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾಯಿಲೆಗಳಿಂದ ಬಳಲುತ್ತಿರುವವರನ್ನು ಗುಣಮುಖರನ್ನಾಗಿ ಮಾಡುವ ನಿಟ್ಟಿನಲ್ಲಿ ಚಿಕಿತ್ಸೆ ನೀಡಲು ಮುಂದಾಗಿದ್ದೇವೆ. ಮತ್ತೊಂದು ಕಾಯಿಲೆ ಬರುವ ಮುನ್ನ ಎಚ್ಚರಿಕೆ ವಹಿಸಿ ಕ್ರಮ ಕೈಗೊಂಡಿದ್ದೇವೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಗಣಪತಿ ಸಚ್ಚಿದಾನಂದ ಆಶ್ರಮ ಕಾಲೇಜು, ನ್ಯಾಚುರೋಪತಿ ಕಾಲೇಜುಗಳ ಆಶ್ರಯದಲ್ಲಿ 5 ವರ್ಷಗಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದೇವೆ. ಹಿರಿಯ ನಾಗರಿಕರಿಗೆ 5 ಕೇಂದ್ರಗಳನ್ನು 'ಡೇ ಕೇರ್ ಸೆಂಟರ್' ಅನ್ನು ಸೆ.25ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. 1000ಕ್ಕೆ 86 ಮಂದಿ ಸಾವನ್ನಪ್ಪುತ್ತಿರುವ ಗರ್ಭಿಣಿಯರ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡಲು ಮೋದಿಯವರು ಕರೆ ನೀಡಿದ್ದಾರೆ. ಅದರಂತೆ ಏಳು ಪ್ರಾಥಮಿಕ ಆರೋಗ್ಯ ಕೇಂದ್ರ, 50 ಮಂದಿ ಆರೋಗ್ಯ ಇಲಾಖೆ ಸಿಬ್ಬಂದಿ ತಂಡ ಗರ್ಭಿಣಿಯರ ಮನೆಗಳಿಗೆ ಭೇಟಿ ನೀಡಿ ವರ್ಷದೊಳಗೆ ಯಾವೊಂದು ತಾಯಿ ಮತ್ತು ಮಗು ಸಾವನ್ನಪ್ಪದಂತೆ ಸಂಕಲ್ಪ ತೊಟ್ಟು ಕೆಲಸ ಮಾಡಲು ನಿರ್ಧರಿಸಿರುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ವೀರಶೈವ ಸಮುದಾಯದ ಮುಖಂಡರಾದ ಕಾನ್ಯ ಶಿವಮೂರ್ತಿ, ಎಂ.ಎ.ಚಂದ್ರಶೇಖರ್, ಯು.ಎಸ್.ಶೇಖರ್, ವಕೀಲ ಅರುಣ್‌ಕುಮಾರ್, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಕೇಬಲ್ ನಾಗೇಂದ್ರ, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಕೇಬಲ್ ನಾಗೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಐಸಿಸ್ ಸಂಘಟನೆ ಜತೆ ವಿದ್ಯಾವಂತರ ನಂಟು; ಆತಂಕಕಾರಿ ಬೆಳವಣಿಗೆ: ವಿಜಯೇಂದ್ರ ಕಳವಳ

ಮೈಸೂರು, ಸೆ..21(ಆರ್‌ಕೆಬಿ)–ಐಸಿಸ್ ಸಂಘಟನೆಯೊಂದಿಗೆ ವಿದ್ಯಾವಂತರು ನಂಟು ಹೊಂದಿರುವುದು ಆತಂಕಕಕಾರಿ ಬೆಳವಣಿಗೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಕಳವಳ ವ್ಯಕ್ತಪಡಿಸಿದರು.

ಶಿವಮೊಗ್ಗದಲ್ಲಿ ಐಸಿಸ್ ಉಗ್ರರ ಜತೆ ಸಂಬಂಧ ಇಬ್ಬರ ಬಂಧನ ವಿಚಾರ ಕುರಿತು ಬುಧವಾರ ಮೈಸೂರಿನಲ್ಲಿ ಮಾಧ್ಯಮದೊಂದಿಗೆ ಪ್ರತಿಕ್ರಿಯಿಸಿದ ಅವರು, ಶಿವಮೊಗ್ಗ ಅಷ್ಟೇ ಅಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇಂತಹ ಬೆಳವಣಿಗೆ ಕಂಡುಬಂದಿದೆ. ರಾಜ್ಯದ ಎಲ್ಲಾ ಭಾಗಗಳಲ್ಲಿ ಇಂತಹ ಆತಂಕಕಾರಿ ಬೆಳವಣಿಗೆಗಳು ನಡೆಯುತ್ತಿವೆ. ಅದರಲ್ಲೂ ಇಂಜಿನಿಯರಿಂಗ್ ಸೇರಿದಂತೆ ಉತ್ತಮ ವಿದ್ಯಾಭ್ಯಾಸ ಹೊಂದಿದ ಯುವಕರು ಐಸಿಸ್ ಸಂಪರ್ಕ ಹೊಂದಿರುವುದು ಆತಂಕಕಾರಿ ವಿಚಾರ. ಈಗ ಶಿವಮೊಗ್ಗದಲ್ಲಿ ಬಂಧಿಸಿರುವುದಕ್ಕೆ ರಾಜ್ಯ ಪೊಲೀಸ್ ಇಲಾಖೆಗೆ ಧನ್ಯವಾದ ತಿಳಿಸುವುದಾಗಿ ಹೇಳಿದರು.

ಕುವೆಂಪು ಹೇಳಿದಂತೆ ಕರ್ನಾಟಕ ಸರ್ವಜನಾಂಗದ ಶಾಂತಿಯ ತೋಟ. ಶಾಂತಿಯ ವಾತಾವರಣ ಹಾಳು ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಕಾಂಗ್ರೆಸ್ ನಾಯಕರು ಅಲ್ಪಸಂಖ್ಯಾತರು ಇರುವ ಜಾಗದಲ್ಲಿ ಸಾವರ್ಕರ್ ಫೋಟೋ ಯಾಕೆ ಹಾಕಬೇಕು ಎಂದು ಕೇಳಿದ್ದರು. ಇಂತಹ ಓಲೈಕೆ ಮಾತುಗಳಿಂದ ಶಾಂತಿ ಕದಡುವ ವಾತಾವರಣ ನಿರ್ಮಾಣವಾಗುತ್ತಿದೆ. ಚುನಾವಣಾ ವರ್ಷವಾಗಿರುವುದರಿಂದ ಇಂತಹ ಮಾತುಗಳು ಸಹಜ ಎಂದು ತಿಳಿಸಿದರು.

ಚುನಾವಣಾ ತಯಾರಿ ಇನ್ನುಮುಂದೆ ಆರಂಭಿಸಬೇಕಿದೆ. ನಾನು ಚುನಾವಣೆಗೆ ಎಲ್ಲೇ ಸ್ಪರ್ಧಿಸಿದರೂ, ನನಗೆ ರಾಜಕೀಯವಾಗಿ ಶಕ್ತಿ ನೀಡಿದ ವರುಣಾ ಮತ್ತು ಹಳೇ ಮೈಸೂರು ಭಾಗವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಇಲ್ಲಿ ಪಕ್ಷ ಸಂಘಟನೆ ನಿರಂತರವಾಗಿ ನಡೆಸುವುದಾಗಿ ಅವರು ಹೇಳಿದರು.

ರೈಲ್ವೆ ಸಚಿವ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಸಂಸದ ಪ್ರತಾಪ್ ಸಿಂಹ ಮನವಿ



ಬೆಂಗಳೂರಿನಿಂದ ಮೈಸೂರು ಮೂಲಕ ಕಾರವಾರಕ್ಕೆ ಇದುವರೆಗೂ ಮೂರು ದಿನ ಸಂಚರಿಸುತ್ತಿದ್ದ ರೈಲು ಸೇವೆಯನ್ನು ತಮ್ಮ ಮನವಿಯ ಮೇರೆಗೆ ಮಂಗಳೂರಿನವರೆಗೆ ವಾರದಲ್ಲಿ ಆರು ದಿನಕ್ಕೆ ವಿಸ್ತರಿಸಿಕೊಟ್ಟಿದ್ದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಬುಧವಾರ ನವದೆಹಲಿಯಲ್ಲಿ ಅಭಿನಂದಿಸಿದ ಮೈಸೂರು– ಕೊಡಗು ಸಂಸದ ಪ್ರತಾಪ್ ಸಿಂಹ, ಹೆಚ್ಚುವರಿ ಬೋಗಿ ಅಳವಡಿಸುವ ಮೂಲಕ ಕಾರವಾರದ ವರೆಗೆ ಸೇವೆಯನ್ನು ವಿಸ್ತರಿಸಿಕೊಡುವಂತೆ ಮನವಿ ಮಾಡಿದ್ದಾರೆ.

ಜೆಸಿಬಿಯಿಂದ ಸಾರ್ವಜನಿಕ ರಸ್ತೆ ಹಾಳು ಮಾಡಿದ ಸಹೋದರರು, ಜೆಸಿಬಿ ಮಾಲೀಕನ ವಿರುದ್ಧ ಕೇಸ್

ಮೈಸೂರು, ಸೆ.21–ಸಾರ್ವಜನಿಕ ರಸ್ತೆಯನ್ನು ಜೆಸಿಬಿ ಮೂಲಕ ಅಗೆದಿರುವ ಆರೋಪದ ಮೇರೆಗೆ ಸಹೋದರರಿಬ್ಬರು ಹಾಗೂ ಜೆಸಿಬಿ ಮಾಲೀಕನ ವಿರುದ್ಧ ಮೈಸೂರಿನ ವಿಜಯನಗರ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿದೆ. ಹಿನಕಲ್ ನಿವಾಸಿಗಳಾದ ಪುಟ್ಟರಾಜು ಮತ್ತು ಅವರ ಸಹೋದರ ರಘು ಹಾಗೂ ಜೆಸಿಬಿ ಮಾಲೀಕ ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ಹೂಟಗಳ್ಳಿ ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಸಿ.ಮಂಜುನಾಥ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಹಿನಕಲ್ ಗ್ರಾಮದ ಹಳೇ ಅಂಚೆ ಕಚೇರಿಯು 50 ವರ್ಷಗಳ ಹಿಂದೆ ನಿರ್ಮಾಣವಾಗಿದ್ದು, ಈ ರಸ್ತೆಗೆ ಕಳೆದ ಎರಡು ತಿಂಗಳ ಹಿಂದೆ ಸರ್ಕಾರದ ವತಿಯಿಂದ ಡಾಂಬರೀಕರಣ ಮಾಡಲಾಗಿದೆ. ಪುಟ್ಟರಾಜು ಹಾಗೂ ಅವರ ಸಹೋದರ ರಘು ಅವರು ಜೆಸಿಬಿ ಸಹಾಯದಿಂದ ರಸ್ತೆಯನ್ನು ಅಗೆದು ಸಾರ್ವಜನಿಕ ಓಡಾಟಕ್ಕೆ ತೊಂದರೆ ಉಂಟು ಮಾಡಿರುವುದಲ್ಲದೆ, ಸರ್ಕಾರಕ್ಕೂ ನಷ್ಟವನ್ನು ಉಂಟು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ವಿಜಯನಗರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 34, 431 ಮತ್ತು ಸಾರ್ವಜನಿಕ ಆಸ್ತಿ–ಪಾಸ್ತಿಗೆ ಧಕ್ಕೆ ಉಂಟುಮಾಡಿರುವ ಆರೋಪದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪಿಎಂ ಕೇರ್ಸ್ ಫಂಡ್‌ನ ಟ್ರಸ್ಟಿಯಾಗಿ ರತನ್ ಟಾಟಾ; ಸಲಹಾ ಮಂಡಳಿಗೆ ಸುಧಾ ಮೂರ್ತಿ ನೇಮಕ

ನವದೆಹಲಿ, ಸೆ.21– ಪಿಎಂ ಕೇರ್ಸ್ ಫಂಡ್‌ನ ಟ್ರಸ್ಟಿಯಾಗಿ ಕೈಗಾರಿಕೋದ್ಯಮಿ ರತನ್ ಟಾಟಾ ಹಾಗೂ ಸಲಹಾ ಮಂಡಳಿಗೆ ಇನ್ಫೋಸಿಸ್ ಫೌಂಡೇಶನ್‌ನ ಮಾಜಿ ಅಧ್ಯಕ್ಷೆ ಸುಧಾ ಮೂರ್ತಿ ಅವರನ್ನು ನೇಮಕ ಮಾಡಲಾಗಿದೆ.



ರತನ್ ಟಾಟಾ



ಸುಧಾಮೂರ್ತಿ

ಪಿಎಂ ಕೇರ್ಸ್ ಫಂಡ್ ಟ್ರಸ್ಟ್‌ಗೆ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶ ನ್ಯಾಯಮೂರ್ತಿ ಕೆ ಟಿ ಥಾಮಸ್, ಮಾಜಿ ಡೆಪ್ಯೂಟಿ ಸ್ಪೀಕರ್ ಕರಿಯಾ ಮುಂಡಾ ನಾಮನಿರ್ದೇಶನಗೊಂಡಿದ್ದಾರೆ.

ಪ್ರಧಾನಮಂತ್ರಿಗಳ ಕಾರ್ಯಾಲಯವು ಈ ಟ್ರಸ್ಟಿಗಳನ್ನು ಪಿಎಂ ಕೇರ್ಸ್ ಫಂಡ್‌ನ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸಲು ಸ್ವಾಗತಿಸಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಿಎಂ ಕೇರೀಸ್ ಫಂಡ್‌ನ ಇತರ ಟ್ರಸ್ಟಿಗಳಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಪಿಎಂ ಕೇರ್ಸ್ ಫಂಡ್‌ನ ಟ್ರಸ್ಟಿಗಳ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿದ ಒಂದು ದಿನದ ನಂತರ ಈ ಘೋಷಣೆ ಹೊರಡಿಸಲಾಗಿದೆ.

ಮಾನವ–ಆನೆ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳಿ: ಎಂಎಲ್ಸಿ ಮಂಜೇಗೌಡ ಆಗ್ರಹ



ಬೆಂಗಳೂರು, ಸೆ.21– ಕರ್ನಾಟಕದ ಅರಣ್ಯದಲ್ಲಿ ಸುಮಾರು 2047 ಆನೆಗಳಿದ್ದು ಕಾಡಂಚಿನ ರೈತರ ಜಮೀನುಗಳಿಗೆ ಆಗಾಗ್ಗೆ ದಾಳಿ ಮಾಡಿ, ಬೆಳೆ ನಾಶಪಡಿಸುತ್ತಿವೆ. ಜೊತೆಗೆ ಇವುಗಳಿಂದ ಸಾವು–ನೋವುಗಳು ಹೆಚ್ಚಾಗುತ್ತಿರುವುದರಿಂದ ಸರ್ಕಾರ ಮಾನವ ಮತ್ತು ಆನೆ ಸಂಘರ್ಷ ತಡೆಗಟ್ಟಲು ಕ್ರಮ ಕೈಗೊಳ್ಳ ಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ಮಾತನಾಡಿದ ಅವರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ 54.80 ಕಿ.ಮೀ., ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 50.73 ಕಿ.ಮೀ., ಮಲೆಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಕೇವಲ 13.25 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ.

2017 ರಿಂದ 2020 ರವರೆಗೆ ಆನೆದಾಳಿಗೆ 63 ಮಂದಿ ಬಲಿಯಾಗಿದ್ದಾರೆ. ಆದ್ದರಿಂದ ಕುಂಟುತ್ತ ಸಾಗಿರುವ ಕಾಮಗಾರಿಗೆ ವೇಗ ನೀಡಬೇಕು. ಕಾಡಾನೆ ದಾಳಿ ತಡೆಗೆ ತಲಾ 4 ಜನರನ್ನು ಒಳಗೊಂಡ ಕ್ಷಿಪ್ರ ಕಾರ್ಯಪಡೆ ರಚನೆ ಮಾಡಬೇಕು. ಆನೆ ನಿರೋಧಕ ಕಂದಕ ನಿರ್ಮಾಣ ಮಾಡಿ ಕಾಡಂಚಿನ ಕೃಷಿಭೂಮಿಯಲ್ಲಿ ಸೌರಶಕ್ತಿ ಸೋಲಾರ್ ಬೇಲಿ ಅಳವಡಿಸಿ, ರೈತರ ಬೆಳೆ ನಾಶವಾಗದಂತೆ ತಡೆಗಟ್ಟಲು ಅಟ್ಟಣಿಗಳ ಸ್ಥಾಪನೆ, ವೀಕ್ಷಣಾಗೋಪುರಗಳ ನಿರ್ಮಾಣ ಹಾಗೂ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ತಂಡಗಳನ್ನು ರಚನೆ ಮಾಡಿ ಮಾನವ ಮತ್ತು ಆನೆ ಸಂಘರ್ಷ ತಡೆಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಶಾರದಾ ಸರ್ಜರಿ, ಕ್ರಯೋ ಸರ್ಜರಿ ಸೆಂಟರ್‌ನ ಡಾ.ಕೆ.ಸುಬ್ರಮಣ್ಯ ನಿಧನ



ಮೈಸೂರು, ಸೆ. 21– ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಜನರಲ್ ಸರ್ಜರಿ ಮತ್ತು ಪ್ರೋಕ್ಟೋಲಜಿ ಕ್ಲಿನಿಕ್ ಶಾರದಾ ಸರ್ಜರಿ ಮತ್ತು ಕ್ರಯೋ ಸರ್ಜರಿ ಸೆಂಟರ್‌ನ ಕ್ರಯೋ ಸರ್ಜನ್ ಡಾ.ಕೆ.ಸುಬ್ರಮಣ್ಯ (58) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಬೆಳಗ್ಗೆ ನಿಧನರಾದರು. ಡಾ.ಸುಬ್ರಮಣ್ಯ ಅವರು ನಿನ್ನೆ (ಮಂಗಳವಾರ) ತಮ್ಮ ಕ್ಲಿನಿಕ್‌ನಲ್ಲಿ ಬಿದ್ದು ಗಾಯಗೊಂಡಿದ್ದು, ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ, ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ಪ್ರಭಾ ಸುಬ್ರಮಣ್ಯ, ಪುತ್ರಿಯರಾದ ಡಾ. ಶ್ವೇತಾ ಸೋನಿಯಾ ಸುಬ್ರಮಣ್ಯ, ಡಾ. ಶ್ರುತಿ ಕರಿಷ್ಮಾ ಸುಬ್ರಮಣ್ಯ ಮತ್ತು ಸ್ಮೃತಿ ಸುನಯನ ಸುಬ್ರಮಣ್ಯ ಸೇರಿದಂತೆ ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಡಾ. ಸುಬ್ರಮಣ್ಯ ಅವರು ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ (ಮೈಸೂರು ಸ್ಪೋರ್ಟ್ಸ್ ಕ್ಲಬ್) ಮತ್ತು ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಸಕ್ರಿಯ ಸದಸ್ಯರಾಗಿದ್ದರು. ಒಳ್ಳೆಯ ಕೈಗುಣ ಹೊಂದಿದ್ದ ಡಾ. ಸುಬ್ರಮಣ್ಯ ಅವರು ದಾನಿಗಳು ಕೂಡ ಆಗಿದ್ದರು. ರೋಟರಿ ಕ್ಲಬ್ ಆಫ್ ಮೈಸೂರ್ ಸೌತ್ ಈಸ್ಟ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ನಿವೇದಿತಾ ನಗರದಲ್ಲಿರುವ ಬೃಹತ್ ಶಾಲಾ ಯೋಜನೆಗೆ ಅವರು ಕೊಡುಗೆ ನೀಡಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಹಿರಿಯ ವಕೀಲ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆಯ ಸಂಪಾದಕ ಎಚ್.ಎನ್. ವೆಂಕಟೇಶ್ ತೀವ್ರ ಸಂತಾಪ ವ್ಯಕ್ತ ಪಡಿಸಿದ್ದಾರೆ.